ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ ಹಾಗೂ ಚರ್ಚೆ

+ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

``2000 ಮಾರ್ಚ್ 15 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ, ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ".

ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೆ, ನಾನು ಈ ಮೇಲಿನ ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ದಿನಾಂಕ 15ನೇ ಮಾರ್ಚ್ 2000 ರಂದು ಸಮಾವೇಶಗೊಂಡ ಜಂಟೀ ಅಧಿವೇಶನವನ್ನುದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕೆ ವಂದನೆಯನ್ನು ಕೋರತಕ್ಕಂಥ ಒಂದು ಸೂಚನೆಯನ್ನು ಮಂಡಿಸಲು ನನಗೆ ಅವಕಾಶ ಕೊಟ್ಟ ತಮಗೆ ಮೊಟ್ಟ ಮೊದಲನೆಯದಾಗಿ ವಂದನೆಯನ್ನು ಸಲ್ಲಿಸುತ್ತೇನೆ. ನಾನು ಈ ಒಂದು ಸೂಚನೆಯ ಪರವಾಗಿ ಮಾತನಾಡುವುದಕ್ಕೆ ಬಹಳ ಸಂತೋಷ ಪಡುತ್ತೇನೆ. ಏಕೆಂದರೆ ಮೈಸೂರು ರಾಜ್ಯ ವಿಧಾನ ಮಂಡಲ ಹಾಗೂ ಕರ್ನಾಟಕ ರಾಜ್ಯ ವಿಧಾನ ಮಂಡಲದ ಇತಿಹಾಸವನ್ನು ತೆಗೆದುಕೊಂಡಾಗ ಹಿಂದಿನ ರಾಜ ಪ್ರಮುಖರಾಗಲಿ ಅಥವಾ ಯಾವ ರಾಜ್ಯಪಾಲರಾಗಲಿ ಜಂಟಿ ಅಧಿವೇಶನವನ್ನುದ್ದೇಶಿಸಿ ಕನ್ನಡದಲ್ಲಿ ಭಾಷಣ ಮಾಡಿದಂತಹ ಉದಾಹರಣೆಗಳೇ ಇಲ್ಲ. ಒಂದುವೇಳೆ ಇದ್ದರೆ ನಾನು ಈಗ ಹೇಳಿದ್ದನ್ನು ಸರಿಪಡಿಸಿಕೊಳ್ಳುತ್ತೇನೆ. ಮಹಾರಾಜರಾಗಿದ್ದ ದಿವಂಗತ ಜಯಚಾಮರಾಜೇಂದ್ರ ಒಡೆಯರ್‌ರವರೂ ಕೂಡ ಆಂಗ್ಲ ಭಾಷೆಯಲ್ಲಿಯೇ ಭಾಷಣವನ್ನು ಮಾಡಿದ್ದಾರೆ. ಆಗಿನ ರಾಜಪ್ರಮುಖರೆಲ್ಲರೂ ಆಂಗ್ಲ ಭಾಷೆಯನ್ನು ಹೆಚ್ಚಾಗಿ ಬಳಸುತ್ತಿದ್ದರಿಂದ ಹಾಗೂ ಕನ್ನಡದಲ್ಲಿಯೇ ಭಾಷಣ ಮಾಡಬೇಕೆಂದು ಯಾರೂ ಕೂಡ ಒತ್ತಾಯ ಮಾಡುತ್ತಿರಲಿಲ್ಲವಾದ್ದರಿಂದ ಹಿಂದೆಲ್ಲಾ ಆಂಗ್ಲ ಭಾಷೆಯಲ್ಲಿಯೇ ಭಾಷಣವನ್ನು ಓದಲಾಗುತ್ತಿತ್ತು. ಆದರೆ ಇತ್ತೀಚೆಗೆ ಮಾನ್ಯ ರಾಜ್ಯಪಾಲರಾದ ಶ್ರೀಮತಿ ರಮಾದೇವಿಯವರು 15ನೇ ಮಾರ್ಚ್ 2000 ದಂದು ಜಂಟಿ ಅಧಿವೇಶನವನ್ನುದ್ದೇಶಿಸಿ ಕನ್ನಡದಲ್ಲಿ ಸ್ಫುಟವಾಗಿ ಹಾಗೂ ಸ್ಪಷ್ಟವಾಗಿ ತಮ್ಮ ಭಾಷಣವನ್ನು ಓದಿದರು. ಹಿಂದಿನ ರಾಜ್ಯಪಾಲರು ತಮ್ಮ ಭಾಷಣವನ್ನು ಆಂಗ್ಲ ಭಾಷೆಯಲ್ಲಿ ಓದುವಾಗ ಶ್ರೀಯುತ ವಾಟಾಳ್ ನಾಗರಾಜ್‌ರವರು ಹಾಗೂ ಇನ್ನಿತರ ಕನ್ನಡದ ಬಗ್ಗೆ ಅಪಾರವಾದ ಅಭಿಮಾನವನ್ನು ಇಟ್ಟುಕೊಂಡಿದ್ದ ಸದಸ್ಯರುಗಳು ಒಟ್ಟಾಗಿ ಸೇರಿ ರಾಜ್ಯಪಾಲರು ಭಾಷಣವನ್ನು ಓದುವುದಕ್ಕೆ ಅವಕಾಶ ಮಾಡಿಕೊಡದ ಸನ್ನಿವೇಶ ಇತ್ತು. ಆದರೆ ಮೊನ್ನೆ ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಮಾಡಿದಾಗ ಇಡೀ ಸದನವೇ ಕನ್ನಡಮಯವಾಗಿ ಕಂಗೊಳಿಸುತ್ತಿತ್ತು. ಒಂದು ರೀತಿಯಲ್ಲಿ

ಅದರ ವಿವರಣೆಯನ್ನು ಕೊಡುವುದಕ್ಕೆ ನಿಲುಕದೇ ಇರತಕ್ಕಂಥ ಸಂಭ್ರಮದ ವಾತಾವರಣ ಅಂದು ನಿರ್ಮಾಣವಾಗಿತ್ತು. ಇಂಥ ಒಂದು ಭಾಷಣಕ್ಕೆ ವಂದನೆಯನ್ನು ಸಲ್ಲಿಸಲು ನಿರ್ಣಯವನ್ನು ಮಂಡಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದನ್ನು ಕೇಳಿ ನನಗೆ ಸಂತೋಷವಾಗಿ ನನ್ನದೇ ಆದ ಒಂದು ಕವನವನ್ನು ಬರೆದಿದ್ದೇನೆ. ಅದನ್ನು ತಮ್ಮ ಅನುಮತಿ ಪಡೆದು ಸದನದಲ್ಲಿ ಓದುತ್ತಿದ್ದೇನೆ.

ರಾಜ್ಯಪಾಲರ ಭಾಷಣ ಕನ್ನಡದಲ್ಲಿ ಮಾಡಬೇಕೆಂದು
ಕೂಗುತ್ತಲೇ ಇದ್ದರು ವಾಟಾಳ್‌ನಾಗರಾಜ್‌ರವರು
ಇದಕ್ಕೆ ಸ್ಪಂದಿಸದೇ ಸತತವಾಗಿ ಓದುತ್ತಲೇ ಬಂದರು
ಇಂಗ್ಲೀಷ್ ಭಾಷಣವ ಕನ್ನಡ ಕಲಿಯದ ರಾಜ್ಯಪಾಲರು
ರಾಜ್ಯ ಭಾಷೆ ಕನ್ನಡದಲ್ಲಿರುವಾಗ ರಾಜ್ಯಪಾಲರ ಭಾಷಣವು
ಕನ್ನಡದಲ್ಲಿರಲೆಂದು ಬಯಸುವವರು ನಾವೆಲ್ಲರೂ
ಈ ಇಂಗಿತವನ್ನು ಅರಿತು ನಿರರ್ಗಳವಾಗಿ ತೆಲುಗಿನ ಲಿಪಿಯಲಿ
ಓದಿದರು ಕನ್ನಡ ಭಾಷಣವ ಶ್ರೀಮತಿ ರಮಾದೇವಿಯವರು
ಭಾಷಣ ಓದಿದ್ದು ಸೋದರ ಭಾಷೆ ತೆಲುಗಿನ ಲಿಪಿಯಲ್ಲಾದರೂ
ಕನ್ನಡ ಭಾಷಣ ಓದಬೇಕೆಂಬ ಕಳಕಳಿಯನ್ನು ಮೆರೆಸಿದರು
ಜಂಟಿ ಅಧಿವೇಶನದಲ್ಲಿ ಕನ್ನಡದಲ್ಲಿ ಭಾಷಣ ಓದಿ ಗಳಿಸಿದರು
ಕೋಟ್ಯಾಂತರ ಅಭಿನಂದನೆಗಳನ್ನು ಶ್ರೀಮತಿ ರಮಾದೇವಿಯವರು
ನಮ್ಮ ಸದನದಲ್ಲಿ ಕನ್ನಡ ಸಮರ್ಥವಾಗಿ ಬಳಸಿದರೆ ತಾನೇ ಎಲ್ಲಿಡೆಯೂ
ಬಳಸಬಲ್ಲರು ಈ ನಾಡಿನ ನಾಗರಿಕರು.

ಈ ಕವನವನ್ನು ಬರೆಯಲು ನನಗೆ ಶ್ರೀಮತಿ ರಮಾದೇವಿಯವರ ಭಾಷಣವೇ ಸ್ಫೂರ್ತಿಯಾಯಿತು.

ಅಧ್ಯಕ್ಷರು : ನಿಮ್ಮ ಕವನ ತುಂಬಾ ಚೆನ್ನಾಗಿದೆ. ನೀವು ಕನ್ನಡದಲ್ಲಿ ಎಂ.ಎ. ಮಾಡಿದ್ದೀರಾ.

ಶ್ರೀ ಸಿ.ಎಂ. ಲಿಂಗಪ್ಪ : ನಾನು ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಎಂ.ಎ.ಯನ್ನು ಮಾಡಿದ್ದೇನೆ. ಮಾನ್ಯ ರಾಜ್ಯಪಾಲರಾದ ಶ್ರೀಮತಿ ರಮಾದೇವಿಯವರ ಕನ್ನಡ ಭಾಷಣವನ್ನು ನಾನೊಬ್ಬನೇ ಅಲ್ಲದೇ ಜಂಟಿ ಅಧಿವೇಶನದಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು, ನಾಯಕರುಗಳು, ವಿಧಾನ ಪರಿಷತ್ತಿನ ಸಭಾಪತಿಯವರು, ಉಪ ಸಭಾಪತಿಯವರು, ವಿಧಾನ ಸಭೆಯ ಉಪಾಧ್ಯಕ್ಷರು ಮೆಚ್ಚಿಕೊಂಡಿದ್ದಾರಲ್ಲದೇ ಈ ನಾಡಿನಲ್ಲಿ ಕನ್ನಡವನ್ನು ಆಸೆ ಪಡತಕ್ಕಂಥ ಕನ್ನಡದ ಬಗ್ಗೆ ಅಭಿಮಾನ ಇಟ್ಟಿರತಕ್ಕಂಥ ನಾಲ್ಕೂವರೆ ಕೋಟಿ ಕನ್ನಡಿಗರೆಲ್ಲರೂ ಕೂಡ ರಾಜ್ಯಪಾಲರ ಕನ್ನಡ ಭಾಷಣವನ್ನು ಮೆಚ್ಚಿಕೊಂಡಿದ್ದಾರೆ. ಸದನದ ಎಲ್ಲಾ ಸದಸ್ಯರುಗಳೂ ಕೂಡ ತಮ್ಮ ಅಭಿನಂದನೆಯನ್ನು ಸಲ್ಲಿಸುತ್ತಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಒಂದು ಸುಮಾರು 6 ತಿಂಗಳಾಗಿದೆ. ಅದಕ್ಕೂ ಮುಂಚೆ ನಾವು

ಪಾಂಚಜನ್ಯ ಯಾತ್ರೆಯ ಮೂಲಕ ನಮ್ಮ ಸದನದ ನಾಯಕರಾದ ಶ್ರೀ ಎಸ್.ಎಂ. ಕೃಷ್ಣಾರವರ ನಾಯಕತ್ವದಲ್ಲಿ ನಮ್ಮ

1.40 ಪಿ.ಎಂ

ರಾಜ್ಯದಲ್ಲಿ "ಪಾಂಚಜನ್ಯ" ಪ್ರವಾಸವನ್ನು ನಮ್ಮ ರಾಜ್ಯ ಮಟ್ಟದ ನಾಯಕರು ಹಾಗೂ ಮುಖಂಡರುಗಳು ಕೈಗೊಂಡು ಜನಮನದಲ್ಲಿ ಕಾಂಗ್ರೆಸ್ ಪಕ್ಷವೂ ಈ ರಾಜ್ಯಕ್ಕೆ ಸಮರ್ಥವಾದ, ಪ್ರಗತಿಪರವಾದಂತಹ, ಶುದ್ಧವಾದಂತಹ ಆಡಳಿತವನ್ನು ಕೊಡಲು ಸಾಧ್ಯವಾಗುತ್ತದೆಂಬುದನ್ನು ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿ ಹೇಳಿದರು. ಇದಕ್ಕೆ ರಾಜ್ಯದ ಜನತೆಯೂ ಬಹಳ ಸಕರಾತ್ಮಕವಾಗಿ ಪ್ರತಿಕ್ರಿಯಿಸಿ ನಮಗೆ ಅಧಿಕಾರವನ್ನು ತಂದು ಕೊಟ್ಟರು. ಈ ರಾಜ್ಯದಲ್ಲಿ ಐದು ವರ್ಷಗಳ ಕಾಲ ನೀವು ಆಡಳಿತವನ್ನು ಮಾಡಿ ಜನರಿಗೆ ಅದರಲ್ಲೂ ಬಡವರಿಗೆ, ಕೂಲಿ ಕಾರ್ಮಿಕರಿಗೆ, ಅಸಂಘಟಿತ ಕಾರ್ಮಿಕರಿಗೆ ಗ್ರಾಮಾಂತರ ಪ್ರದೇಶದ ರೈತರಿಗೆ, ಎಲ್ಲರಿಗೂ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡಿ ಎಂದು ನಮಗೆ ಆಶೀರ್ವಾದ ಮಾಡಿ ನಮ್ಮನ್ನು ಆಯ್ಕೆ ಮಾಡಿದರು. ಇವತ್ತು ರಾಜ್ಯದಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದಲ್ಲಿ ಬಹಳ ಸಮರ್ಥವಾದಂತಹ ಆಡಳಿತ, ಒಳ್ಳೆಯ ಮಂತ್ರಿಮಂಡಲ, ಬಹಳಷ್ಟು ಅನುಭವಿಗಳಾದ ಮಂತ್ರಿಗಳನ್ನು, ವಿಚಾರವಂತ ಮಂತ್ರಿಗಳನ್ನು ಸೇರ್ಪಡೆ ಮಾಡಿಕೊಂಡು ಆಡಳಿತವನ್ನು ನಡೆಸುತ್ತಿದ್ದಾರೆ. ರಾಜ್ಯಪಾಲರ ಭಾಷಣದ ಪ್ರಾರಂಭದಲ್ಲೇ ಕೃಷಿ ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾಪ ಮಾಡಿದೆ. ಇದರ ವಿವರಗಳಿಗೆ ಹೋಗುವುದಕ್ಕೆ ಮುಂಚೆ ಈ ಆರು ತಿಂಗಳ ಆಡಳಿತವನ್ನು ಗಮನಿಸಿರುವಂತಹ ಕೆಲವರು ಪಟ್ಟಣ, ನಗರ ಪ್ರದೇಶಗಳಲ್ಲಿ ಆಗುವಂತಹ ಕಾರ್ಯಕ್ರಮಗಳು ಸರ್ಕಾರದಲ್ಲಿ ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ. ಗ್ರಾಮೀಣ ಜನರಿಗೆ, ರೈತರಿಗೆ ಅನುಕೂಲವಾಗುವಂತಹ ಯಾವುದೇ ಕಾರ್ಯಕ್ರಮಗಳು ಇಲ್ಲವೆನ್ನುವಂತಹ ಟೀಕೆಗಳು ಅಲ್ಲಲ್ಲಿ ಕೇಳಿಬರುತ್ತಿವೆ. ಈ ಹಿನ್ನೆಲೆಯಲ್ಲಿ ರಾಜ್ಯಪಾಲರ ಭಾಷಣದಲ್ಲಿ ನಮ್ಮ ಸರ್ಕಾರ ಕೃಷಿರಂಗದಲ್ಲಿ ಏನೆಲ್ಲಾ ಕಾರ್ಯಕ್ರಮಗಳನ್ನು ಮಾಡುತ್ತಿದೆ ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಸಭೆಯಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು, ಹಾಗೂ ಇನ್ನಿತರ ವಿರೋಧಪಕ್ಷದ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಇಲ್ಲದೇ ಇರುವಂಥಾದ್ದು ನಮಗೆ ನೋವನ್ನು ಉಂಟು ಮಾಡುತ್ತಿದೆ. ಈ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧಪಕ್ಷಗಳು ಎಷ್ಟರಮಟ್ಟಿಗೆ ಪೂರಕವಾಗುತ್ತವೆನ್ನುವಂತಹ ವಿಚಾರವನ್ನು ನಾವೆಲ್ಲ ತಿಳಿದುಕೊಂಡಿದ್ದೇವೆ. ಇಲ್ಲಿ ನಿನ್ನೆ ಮೊನ್ನೆಯಿಂದಲೂ ಮಾನ್ಯ ಜಯಪ್ರಕಾಶ್ ಹೆಗಡೆಯವರು ಮತ್ತು ಮಾನ್ಯ ಬನ್ನಿಕೊಡ್‌ರವರು ಏನೆಲ್ಲಾ ಮಾತನಾಡಿದ್ದಾರೆ, ಅದರ ಅರಿವು ನಮಗೂ ಆಗಿದೆ. ನೀವು ಹೇಳಿದಷ್ಟು ನಮಗೆ ಒಪ್ಪಿಗೆಯಾಯಿತು. ಆದರೆ ನಿಮ್ಮ ಸ್ನೇಹಿತರಿಗೆ ಒಪ್ಪಿಗೆಯಾಗಿಲ್ಲ ಎನ್ನುವಂಥಾದ್ದು ನೋವಿನ ವಿಚಾರವಾಗಿದೆ. ನಿಜ, ಹಿಂದೂ ಧರ್ಮ ಶಾಸ್ತ್ರದ ಪ್ರಕಾರ ಸ್ತ್ರೀಗೆ ಹಣೆಗೆ ಬೊಟ್ಟು ಎಷ್ಟು ಸುಂದರವಾಗಿರುತ್ತದೆ. ಅದೇ ರೀತಿಯಲ್ಲಿ ವಿರೋಧ ಪಕ್ಷಗಳು ಈ ಸಭೆಯಲ್ಲಿ ಬೊಟ್ಟಿನ ರೀತಿಯಲ್ಲಿ ಇರುತ್ತವೆ. ಅಂದರೆ ಒಬ್ಬ ಮುತ್ತೈದೆಯ ಹಣೆಯಲ್ಲಿ ಮಿಂಚುವಂತಿರುವ ಹಣೆಯ ಬೊಟ್ಟು ಎಷ್ಟು ಶೋಭೆಯಾಗುತ್ತದೆಂದು ನನಗೆ ಗೊತ್ತಿದೆ. ಆದರೆ

ಇವತ್ತು ಈ ಸಭೆಯಲ್ಲಿ ಆಸನಗಳು ಖಾಲಿ ಇರುವಂಥಾದ್ದನ್ನು ನೋಡಿದಾಗ ಮಂಕಾದ ಬೊಟ್ಟು ಇಟ್ಟುಕೊಂಡು ಕಲಾಪಗಳನ್ನು ಮಾಡುತ್ತಿದ್ದೇವೆಯೋ ಎನ್ನುವಂತಹ ದೃಶ್ಯ ವ್ಯಕ್ತವಾಗುತ್ತಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಿ.ಎಂ. ಲಿಂಗಪ್ಪನವರು ನಾವು ಹೇಳಿದಂತಹ ಮಾತು ಅವರಿಗೆ ಒಪ್ಪಿಗೆಯಾಯಿತೆಂದು ಹೇಳಿದರು. ಆದರೆ ಅವರ ನಾಯಕರುಗಳ ತೀರ್ಮಾನ ಮಾತ್ರ ಬದಲಾವಣೆಯಾಗಲಿಲ್ಲ. ಆದರೆ ಅವರಿಗೆ ಒಪ್ಪಿಗೆಯಾಗಿರುವಂಥಾದ್ದು ನಮಗೆ ತುಂಬಾ ಸಂತೋಷದ ವಿಷಯವಾಗಿದೆ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಅವರು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಪ್ರತಿಕ್ರಿಯೆ ಮಾಡುತ್ತಾ "ಹಳೆಯ ಮಧ್ಯೆ ಹೊಸ ಬಾಟಲ್" ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅವರ ಪ್ರತಿಕ್ರಿಯೆ ರಾಜ್ಯಪಾಲರ ಭಾಷಣವನ್ನು ಕೂಲಂಕಷವಾಗಿ ಓದುವುದಕ್ಕಿಂತ ಮುಂಚೆಯೇ ಈ ಮಾತು ಬಂದಿದೆಯೋ ಏನೋ ಎಂದು ನನಗನಿಸುತ್ತಿದೆ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ಇಷ್ಟು ಅಂಶಗಳು ನಮಗೆ ಗಮನ ಸೆಳೆಯುವಂತಹ ವಿಷಯಗಳಾಗಿ ಈ ಸಭೆಯ ಮುಂದೆ ಮಂಡನೆಯಾಗಿದೆ, ಎನ್ನುವಂಥಾದ್ದು ನನ್ನ ಅಭಿಪ್ರಾಯವಾಗಿದೆ. ಮೊದಲನೆಯದಾಗಿ ಆಡಳಿತದಲ್ಲಿ ಪಾರದರ್ಶಕತೆ, ದಕ್ಷತೆ, ಭ್ರಷ್ಟಚಾರ ರಹಿತವಾದ ಆಡಳಿತ ಇದು ನಮಗೆ ಮುಂದಿನ ನಾಲ್ಕುವರೆ ವರ್ಷಗಳ ಆಡಳಿತವನ್ನು ನಡೆಸುವುದಕ್ಕೆ ಭದ್ರವಾದಂತಹ ಬುನಾದಿಯನ್ನು ಹಾಕುವಂತಹ ವಿಚಾರವಾಗಿದೆ. ಎರಡನೆಯದು ಜಲಾನಯನ ಪ್ರದೇಶಗಳ ಅಭಿವೃದ್ಧಿ ನಿರ್ದೇಶನಾಲಯ ರಚನೆ ಮಾಡುವಂತಹದ್ದು, ಉದ್ದೇಶಿತವಾದಂತಹ ಕರ್ನಾಟಕ ರಾಜ್ಯ ಕೃಷಿ ಆಯೋಗ ರಚನೆ ಮಾಡುವಂಥಾದ್ದು ಮತ್ತೆ ಆರೋಗ್ಯ ಸುಧಾರಿಸುವ ಸಲುವಾಗಿ ಡಾ।।ಹೆಚ್. ಸುದರ್ಶನ್‌ನವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿರುವಂಥಾದ್ದು. ಮತ್ತೆ ಕಾಲೇಜು ಪಠ್ಯಕ್ರಮದಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಅಳವಡಿಸುವಂತಹ ಕಾರ್ಯಕ್ರಮ, ಪರಿಶಿಷ್ಟ ಜಾತಿ ಮತ್ತು ಪಂಗಡಗಳು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತ ನಿರುದ್ಯೋಗ ಯುವಕರಿಗೆ ಉದ್ಯೋಗ ಸಂದರ್ಶನದಲ್ಲಿ, ಸ್ಪರ್ಧಾತ್ಮಕ ಪರೀಕ್ಷೆಗಳು ಬಂದಾಗ ಅವರು ಉತ್ತಮವಾಗಿ ಸ್ಪರ್ಧಿಸಲು ತರಬೇತಿ ಘಟಕಗಳನ್ನು ಸ್ಥಾಪಿಸುವಂಥಾದ್ದು, ಮತ್ತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ನೋಂದಾಯಿಸಿಕೊಳ್ಳಲು ಇರುವ ಅನುಕೂಲಗಳನ್ನು ಈ ನಾಡಿನ ಅಲ್ಪಸಂಖ್ಯಾತರಿಗೂ ಅದನ್ನು ವಿಸ್ತರಿಸುವಂಥಾದ್ದು, ನೀರಾವರಿ ವ್ಯವಸ್ಥೆಯಲ್ಲಿ ಸಮರ್ಥವಾಗಿ ನಿರ್ವಹಣೆ ಮಾಡಲು ಪರಿಣಾಮಕಾರಿಯಾದಂತಹ ಕಾರ್ಯಕ್ರಮವನ್ನು ನೀರು ಬಳಕೆದಾರರ ಈ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡುವಂಥಾದ್ದು, ಮುಂದಿನ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿ ಕೆರೆಗಳ ಹೂಳು ತೆಗೆಯುವಂಥಾ ಕೆಲಸಕ್ಕೆ ಭಾರೀ ಯೋಜನೆ ಹಾಕುವಂಥಾದ್ದು. ಮತ್ತೆ ಆರ್ಥಿಕವಾಗಿ ದುರ್ಬಲರಾಗಿರುವವರಿಗೆ ವರ್ಷಕ್ಕೆ ಎರಡು ಲಕ್ಷ ಮನೆಗಳನ್ನು ನಿರ್ಮಾಣ ಮಾಡುವಂತಹ ಯೋಜನೆ ಇದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಎರಡು ಲಕ್ಷ ಮನೆಗಳನ್ನು ಕಟ್ಟುವಂತಹ ಯೋಜನೆ ಇದೆ. ಹಾಲಿ ಈಗ ಇರುವಂತಹ ಮನೆಗಳಿಗೆ ಹಣ ಬಿಡುಗಡೆಯಾಗಿದೆಯಾ? ಈಗ ಇರುವಂತಹ ಮನೆಗಳಿಗೆ ಹಣವನ್ನು ಬಿಡುಗಡೆ ಮಾಡಿ, ಮುಂದೆ ಈ ಎರಡು ಲಕ್ಷ ಮನೆಗಳಿಗೂ ಹಣವನ್ನು ಬಿಡುಗಡೆ ಮಾಡಿದರೆ ಆಗ ಇದಕ್ಕೂ ಮಹತ್ವ ಬರುತ್ತದೆ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಬಿ.ಹೆಚ್ ಬನ್ನಿಕೋಡ್‌ರವರು ಕೊಟ್ಟಂತಹ ಈ ಸಲಹೆಯನ್ನು ಇವತ್ತು ಅಥವಾ ನಾಳೆ ಅವರು ಮಾತನಾಡುವಂತಹ ಸಂದರ್ಭದಲ್ಲಿ ಸಮರ್ಥವಾದಂತಹ ರೀತಿಯಲ್ಲಿ ಸರ್ಕಾರದ ಗಮನಕ್ಕೆ ತರಬೇಕೆಂದು ಹೇಳುತ್ತೇನೆ. ಇಲ್ಲಿ ಆಡಳಿತ ಪಕ್ಷದವರು, ವಿರೋಧಪಕ್ಷದವರು ಎಂಬ ತಾರತಮ್ಯ ಬೇಡ. ಬಡವರಿಗೆ ಮನೆಗಳನ್ನು ಕೊಡುವಂತಹ ವಿಚಾರದಲ್ಲಿ ನಿಮಗೆ ಇರುವಷ್ಟೇ ಕಳಕಳಿಯೂ ನಮಗೂ ಇದೆ. ಆದುದರಿಂದ ನೀವು ಮತ್ತು ಮಾನ್ಯ ಜಯಪ್ರಕಾಶ್ ಹೆಗಡೆಯವರು ಮಾತನಾಡುವಂತಹ ಸಂದರ್ಭದಲ್ಲಿ ನಿಮ್ಮ ಬಾಯಲ್ಲೆ ಮಾತನಾಡಿ ಸರ್ಕಾರದ ಗಮನಕ್ಕೆ ತರಬೇಕೆನ್ನುವಂತಹ ಸಲಹೆಯನ್ನು ಕೊಡುತ್ತೇನೆ. ಇನ್ನು ಗಣಿ ಕೆಲಸಗಾರರಿಗೆ, ಕೂಲಿ ಕಾರ್ಮಿಕರಿಗೆ, ಮೀನುಗಾರರಿಗೆ, ಅಮಾಲ್ದರರು, ನೇಕಾರರು ಹಾಗೂ ಇತರೆ ಅಸಂಘಟಿತ ವಲಯದವರಿಗೆ ಈ ವಸತಿ ಯೋಜನೆಯನ್ನು ವಿಸ್ತರಿಸಬೇಕೆನ್ನುವಂತಹ ಕಾರ್ಯಕ್ರಮವಾಗುವಂಥಾದ್ದು. ಕರ್ನಾಟಕ ರಸ್ತೆ ಅಭಿವೃದ್ಧಿಗೊಳಿಸುವಂಥಾದ್ದು. ವಿದ್ಯುತ್ ವಿತರಣೆಯ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಮಾಡುವಂಥಾದ್ದು, ಹಾಗೂ ವಾಯು ಶಕ್ತಿ, ಕಿರುಜಲ ವಿದ್ಯುತ್, ಹಾಗೂ ಸಕ್ಕರೆ ಕಾರ್ಖಾನೆಗಳಲ್ಲಿ ವಿದ್ಯುತ್ ಉತ್ಪಾದನೆ ಮಾಡುವಂತಹ ವ್ಯವಸ್ಥೆಯನ್ನು ಮಾಡುವಂಥಾದ್ದು. ಮುಂದಿನ ವರ್ಷದಲ್ಲಿ ಗುಲ್ಬರ್ಗಾ, ಬೀದರ್, ಯಾದಗಿರಿ, ಕೊಪ್ಪಳ, ಬಳ್ಳಾರಿ, ರಾಯಚೂರುಗಳನ್ನೊಳಗೊಂಡ ಹೊಸ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವನ್ನು ಸ್ಥಾಪನೆ ಮಾಡಬೇಕೆಂಬ ಉದ್ದೇಶವಿದೆ. ಈ ರಾಜ್ಯದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆಯನ್ನು ನಡೆಸಲು ವ್ಯವಸ್ಥೆ ಮಾಡಿರುವಂಥಾದ್ದು. ಮಾಹಿತಿ ತಂತ್ರಜ್ಞಾನದ ಅರಿವು ವಿದ್ಯಾವಂತ, ಯುವಜನರಿಗೆ, ಉಂಟು ಮಾಡಿ ಜನರಿಗೆ ಕಲ್ಪಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾದಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಲು ಮಾಹಿತಿ ತಂತ್ರಜ್ಞಾನದಲ್ಲಿ ಅತೀ ದೊಡ್ಡ ಹೆಸರನ್ನು ಮಾಡಿರುವಂತಹ ಇನ್‌ಫೋಸಿಸ್ ಸಂಸ್ಥೆ ಅಧ್ಯಕ್ಷರಾದ ಶ್ರೀ ಎನ್.ಆರ್. ನಾರಾಯಣಮೂರ್ತಿಯವರ ಕಾರ್ಯಾಚರಣೆಯಲ್ಲಿ ದಳವನ್ನು ನೇಮಿಸಿರುವಂಥಾದ್ದು, ಮತ್ತೆ ಸರ್ಕಾರದ ಅತ್ಯಾವಶ್ಯಕ ಸೇವೆಗಳ ಬಗ್ಗೆ ಸಾರ್ವಜನಿಕರು ಸುಲಭವಾಗಿ ಹಾಗೂ ಒಂದೇ ಕಡೆ ಮಾಹಿತಿಯನ್ನು ಪಡೆದುಕೊಳ್ಳುವ ಸಲುವಾಗಿ ಹಲವಾರು ಸಾರ್ವಜನಿಕ ಸ್ಥಳಗಳಲ್ಲಿ ಇನ್‌ಫರ್ಮೇಷನ್ ಕಿಯಾಸ್ಕ್‌ಗಳನ್ನು ಅಂದರೆ ಮಾಹಿತಿ ಕೇಂದ್ರಗಳನ್ನು ತೆರೆಯಬೇಕೆಂಬ ಉದ್ದೇಶ ಈಡೇರುವಂಥಾದ್ದು, ಮತ್ತೆ ರಾಜ್ಯದಲ್ಲಿರುವಂತಹ 215 ಸ್ಥಳೀಯ ಸಂಸ್ಥೆಗಳನ್ನು ಗಣಕೀಕರಿಸಲು ಮತ್ತು ಪೊಲೀಸ್ ಠಾಣೆಗಳು, ಇಡೀ ಪೊಲೀಸ್ ಇಲಾಖೆಯನ್ನು ಸಂಪೂರ್ಣವಾಗಿ ಗಣಕೀಕರಣ ಗೊಳಿಸಲು ಕಾರ್ಯಕ್ರಮವನ್ನು ಹಾಕಿಕೊಂಡಿರುವಂಥಾದ್ದು, ಮತ್ತೆ ಕಂಪ್ಯೂಟರ್‌ನಲ್ಲಿ ಕನ್ನಡ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲು ಕನ್ನಡ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸುವಂತಹ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಗ್ರಾಮಪಂಚಾಯಿಗಳಿಗೆ ಒಂದು ಲಕ್ಷ ರೂ. ಅನುದಾನ ಕೊಡುವುದಕ್ಕೆ ಬದಲಾಗಿ ಎರಡು ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟು ಗ್ರಾಮ ಪಂಚಾಯಿತಿಗಳನ್ನು ಆರ್ಥಿಕವಾಗಿ ಸದೃಢ ಮಾಡತಕ್ಕಂಥ ಕಾರ್ಯಕ್ರಮ, ಹೀಗೆ ಇವತ್ತು ಹತ್ತಾರು ಹೊಸ ಕಾರ್ಯಕ್ರಮಗಳನ್ನು ರಾಜ್ಯಪಾಲರ ಭಾಷಣದ ಮೂಲಕ ಸರ್ಕಾರ ತನ್ನ ಮುಂದಿನ ಕಾರ್ಯಕಲಾಪಗಳ ದಿಕ್ಸೂಚಿಯನ್ನು ಸಭೆಯ ಮುಂದೆ ಇಟ್ಟಿದೆ. ದಯಮಾಡಿ ನಮ್ಮ ವಿರೋಧಪಕ್ಷದ

ಯಾರೇ ಸದಸ್ಯರು ಬೇಸರಪಟ್ಟಿಕೊಳ್ಳಬಾರದು, ಇವತ್ತು ರಾಜ್ಯದಲ್ಲಿ ಪ್ರಬಲ ಸರ್ಕಾರವಿದೆ. ನಾನು ಹಿಂದಿನ ಅವಧಿಯಲ್ಲಿ, ಅದರ ಹಿಂದಿನ ಅವಧಿಯಲ್ಲಿ ಈ ಸದನದಲ್ಲಿದ್ದವನ್ನು, ವಿರೋಧಪಕ್ಷದವರ ಗೈರು ಹಾಜರಿಯಿಂದ ಸದನ ಸ್ವಲ್ಪ ನಳನಳಿಸದೆ, ಬಡವಾಗಿದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಲಿಂಗಪ್ಪನವರೆ, ನಿಮ್ಮ ಸಂಖ್ಯೆ ಎಷ್ಟು ನಮ್ಮ ಸಂಖ್ಯೆ ಎಷ್ಟು ಎಂಬುದನ್ನು ನೋಡಿ, ನಿಮ್ಮಲ್ಲಿ 131 ಸದಸ್ಯರಲ್ಲಿ ಇಷ್ಟು ಸಂಖ್ಯೆ ಇರಬೇಕಾದರೆ, ವಿರೋಧಪಕ್ಷದಲ್ಲಿ ಇಷ್ಟು ಸಂಖ್ಯೆಯಲ್ಲಿ ನಾವಿರುವುದನ್ನು ತಾವು ಗಮನಿಸಿ ಅರ್ಥಮಾಡಿಕೊಳ್ಳಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದ್ದವರ ಸಂಖ್ಯೆಯಲ್ಲಿ ಹಿಂದಿನ ಸಭಾಧ್ಯಕ್ಷರು ನಿದ್ದೆ ಮಾಡುವವರಿಗೆ ಗೂಟ ಹೊಡೆಯುತ್ತಿದ್ದರು, ಅವರು ಎಷ್ಟು ಮಂದಿ ಎನ್ನುವುದನ್ನು ತಾವು ನೋಡಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಚೆನ್ನಿಗಪ್ಪನವರು ಇವತ್ತು ಬೆಳಿಗ್ಗೆ ನಡೆದ ಚರ್ಚೆಯಲ್ಲಿ ಅವರು ಮಾತನಾಡಿದ ರೀತಿ ಮತ್ತು ವಿರೋಧಪಕ್ಷದವರ ಜೊತೆ ಕೈ ಜೋಡಿಸದೆ ಆಡಳಿತಪಕ್ಷದವರ ಜೊತೆ ಕೈ ಜೋಡಿಸಿದ್ದು ನೋಡಿದರೆ ಬಹುಶಃ ಅವರು ನಾನು ವಿರೋಧಪಕ್ಷದಲ್ಲಿದ್ದೇನೆ ಎನ್ನುವ ಮಾತನ್ನು ಆಡಬಾರದು, ಬೆಳಿಗ್ಗೆಯಿಂದಲೂ ಅವರು ಆಡಳಿತ ಪಕ್ಷದವರ ಜೊತೆಯಲ್ಲಿ ತಮ್ಮ ಸಹಮತವನ್ನು ತೋರಿಸುತ್ತಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅದು ತಪ್ಪು ಅಭಿಪ್ರಾಯ ಆಡಳಿತಪಕ್ಷದ ಜೊತೆ ಕೈ ಜೋಡಿಸಿಲ್ಲ, ನಮ್ಮ ನಿಲುವನ್ನು ಸಮರ್ಥನೆ ಮಾಡಿಕೊಂಡು ನಾವು ಪ್ರತ್ಯೇಕವಾಗಿ ಕುಳಿತಿದ್ದೇವೆ ಅಷ್ಟೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಮುದ್ದಹನುಮೇಗೌಡರು ಹೇಳಿದಂತೆ ನಾವು ಯಾವತ್ತೂ ಕೂಡ ಆಡಳಿತಪಕ್ಷದವರ ಜೊತೆ ಕೈ ಜೋಡಿಸಿಲ್ಲ, ಕಾರಣ ನಮ್ಮ ಪಕ್ಷಕ್ಕೆ ನಮ್ಮದೇ ಆದ ತತ್ವಸಿದ್ಧಾಂತಗಳಿವೆ. ಇವತ್ತು ನಮಗೆ ಕೊಟ್ಟಂತಹ ಅವಕಾಶಕ್ಕೆ ಸ್ವಾಗತ ಮಾಡುತ್ತೇವೆ. ಚರ್ಚೆ ಮಾಡಿ ಅನಂತರ ಆಮೇಲೆ ನಮಗೆ ಅವಕಾಶ ಕೊಡುತ್ತೇವೆಂದು ಅಪ್ಪಣೆ ಮಾಡಿದಿರಿ, ಅದಕ್ಕೆ ನಾವು ವಿರೋಧ ಮಾಡುವುದಿಲ್ಲ. ನಮಗೆ ಮಾತನಾಡುವುದಕ್ಕೆ ಅವಕಾಶವೇ ಕೊಡುವುದಿಲ್ಲವೆಂದು ಹೇಳಿದ್ದರೆ ನಾವು ವಿರೋಧ ಮಾಡುತ್ತಿದ್ದೆವು. ಸರ್ಕಾರದ ಒಳ್ಳೆಯ ಕೆಲಸಕ್ಕೆ ಮಾತ್ರ ನಾವು ಕೈ ಜೋಡಿಸುತ್ತೇವೆ, ಕೆಟ್ಟ ಕೆಲಸಕ್ಕೆ ನಾವು ಯಾವಾಗಲೂ ವಿರೋಧ ಮಾಡಿಯೇ ಮಾಡುತ್ತೇವೆ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಚೆನ್ನಿಗಪ್ಪನವರು ನಾನು ಹೇಳಿದ್ದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಇವತ್ತು ಇಲ್ಲೇನು ವಿರೋಧಪಕ್ಷದವರ ಆಸನಗಳು ಖಾಲಿಯಾಗಿವೆ ಅದು ಆಕಸ್ಮಿಕವಲ್ಲ. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆ ಸೂಚಿಸುವ ನಿರ್ಣಯವನ್ನು ಮಂಡಿಸಿ ನಾವು ಮಾತನಾಡುವ ಸಂದರ್ಭದಲ್ಲಿ ಇಲ್ಲಿ ವಿರೋಧಪಕ್ಷದ ನಾಯಕರು ಅಥವಾ ಉಪ ನಾಯಕರು ಇದ್ದೇ ಇರುತ್ತಿದ್ದರು. ಇವತ್ತ ಅಷ್ಟು ಆಸನಗಳು ಖಾಲಿ ಇದ್ದು, ಅವರು ಬೇರೆ ಕಾರ್ಯನಿಮಿತ್ತ ಹೋಗಿರುವುದು ನಮಗೆ ನಿಮಗೆ ಗೊತ್ತಿದೆ. ನಾವು ಅವರು ಹೋಗಿರುವುದಕ್ಕೆ ಆಕ್ಷೇಪಣೆ ಮಾಡುತ್ತಿಲ್ಲ. ಅವರು ಅನುಪಸ್ಥಿತಿಯಲ್ಲಿ ಸದನ ಶೂನ್ಯವಾಗಿದೆಯಲ್ಲಾ ಎಂದು ಬಹಳ ನೋವಿನಿಂದ ಹೇಳುತ್ತಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಸ್ನೇಹಿತರು ವಿರೋಧಪಕ್ಷದ ಸದಸ್ಯರ ಸ್ಥಾನ ಖಾಲಿಯಾಗಿದೆ ಎಂದು ಹೇಳಿದರು, ಆಡಳಿತ ಪಕ್ಷದಲ್ಲಿರುವವರು ಇಲ್ಲಿದ್ದಾಗ ಈ ರೀತಿ ಎಷ್ಟು ಸಾರಿ ಮಾಡಿದ್ದರೆಂಬುದು ಸದನದ ದಾಖಲೆಗಳಲ್ಲಿವೆ. ಇವತ್ತು ಆಡಳಿತ ಪಕ್ಷದಲ್ಲಿರುವ ಹಿರಿಯರು, ಮಂತ್ರಿಗಳು, ಸ್ನೇಹಿತರು ವಿರೋಧ ಪಕ್ಷದಲ್ಲಿದ್ದಾಗ ಸದನವನ್ನು ಬಿಟ್ಟು ರಾಜ್ಯಪಾಲರ ಹತ್ತಿರ ಹೋಗಿ ಮನವಿಯನ್ನು ಕೊಟ್ಟಿರತಕ್ಕಂಥ ಅನೇಕ ಪ್ರಸಂಗಗಳನ್ನು ಉದ್ಭವ ಮಾಡಿಕೊಂಡಿದ್ದರು. ಆದರೆ ವಿರೋಧಪಕ್ಷದಲ್ಲಿದ್ದು ಮಾಡುವ ಕರ್ತವ್ಯವೇನು ಆಡಳಿತ ಪಕ್ಷದಲ್ಲಿದ್ದು ಮಾಡುವ ಕರ್ತವ್ಯವೇನು ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ವಿರೋಧಪಕ್ಷದಲ್ಲಿದ್ದು ಟೀಕೆ ಮಾಡುವುದೇ ಕೆಲಸ, ಆಡಳಿತ ಪಕ್ಷವಾದ ಕೂಡಲೇ ಅದನ್ನು ಮರೆತು ಇವತ್ತು ಏನು ಮಾಡಲಾಗುತ್ತಿದೆಯಲ್ಲ ಅದೇ ಕೆಲಸವನ್ನು ಮಾಡಿಕೊಂಡು ಈ ಪ್ರಜಾಪ್ರಭುತ್ವದಲ್ಲಿ ಒಳ್ಳೆಯ ಸಂಪ್ರದಾಯವಲ್ಲದ ಕೆಲಸವನ್ನು ಮಾಡುವ ವ್ಯವಸ್ಥೆ ಬಂದಿದೆ. ವಿರೋಧಪಕ್ಷದಲ್ಲಿದ್ದಾಗ ಹೇಳಿದಂತಹ ಮಾತನ್ನು ಆಡಳಿತ ಪಕ್ಷಕ್ಕೆ ಬಂದಾಗ ಜವಾಬ್ದಾರಿ ಹೊತ್ತ ಸರ್ಕಾರ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಜನರು ಬಯಸುತ್ತಾರೆ. ಆದರೆ ವಿರೋಧಪಕ್ಷದಲ್ಲಿದ್ದಾಗ ಆ ಸ್ಥಾನ ಬೇರೆ, ಆಡಳಿತಪಕ್ಷವಾದ ಕೂಡಲೆ ಜವಾಬ್ದಾರಿಯಿಂದ ಆಡಿದ ಮಾತನ್ನು ಕಾರ್ಯತಃ ಮಾಡತಕ್ಕಂಥ ರೀತಿಯೇ ಬೇರೆ ಎನ್ನುವ ವ್ಯವಸ್ಥೆ ಏನಿದೆ, ಅದು ಪ್ರಜಾಪ್ರಭುತ್ವದ ನಿಜವಾದ ಒಂದು ನೀತಿಗೆ ವಿರೋಧವಾದದ್ದು. ಆದರೆ ನಮ್ಮ ದುರ್ದೈವ, ನಾವು ಇಲ್ಲೇ ಇರಲಿ, ಅಲ್ಲೇ ಇರಲಿ ನಾವು ಮಾಡುವ ಕೆಲಸ ಸಮಾಜಕ್ಕೆ, ಜನರಿಗೆ, ಬಡವರಿಗೆ ರೈತರಿಗೆ, ಹಿಂದುಳಿದವರಿಗೆ, ಇಡೀ ರಾಜ್ಯದ ಸಮಗ್ರ ಜನತೆಗೆ ಒಳ್ಳೆಯದಾಗುವಂತೆ, ಅಭಿವೃದ್ಧಿಯಾಗುವಂತೆ ಮಾಡುವುದು, ಇದನ್ನು ವಿರೋಧಪಕ್ಷವಿರಲಿ, ಆಡಳಿತಪಕ್ಷವಿರಲಿ ಮಾಡಬೇಕು. ಅದನ್ನು ಮರೆತು ಪಕ್ಷದ ದೃಷ್ಟಿಯಿಂದ ವ್ಯಕ್ತಿಯ ಲಾಭಕ್ಕಾಗಿ, ನಾವು ಸ್ವಾರ್ಥಕ್ಕಾಗಿ ಅನೇಕ ಸಾರಿ ವಿರೋಧಪಕ್ಷದಲ್ಲಿದ್ದವರು ಆಡಳಿತ ಪಕ್ಷದಲ್ಲಿ ಮಾಡುವುದನ್ನು ನೋಡಿದರೆ, ಈ ಪ್ರಜಾಪ್ರಭುತ್ವ, ಚುನಾವಣೆಯ ವ್ಯವಸ್ಥೆ, ಪಕ್ಷಗಳ ವ್ಯವಸ್ಥೆ, ಹೊಂದಿರುವ ಗುರಿ ಜನಸಾಮಾನ್ಯರ ಹಾಗೂ ರಾಜ್ಯದ ಅಭಿವೃದ್ಧಿಯನ್ನು ಮರೆತು ಅನೇಕ ಸಾರಿ ಇಂತಹ ಘಟನೆಗಳು ನಡೆಯುತ್ತವೆ. ಇದಾಗದಂತೆ ಈ ಸದನದಲ್ಲಿರುವ ಈ ಕಡೆ ಆ ಕಡೆಯವರು ಎಲ್ಲರೂ ಸಹಿತ ನಾವು ಅಂತರ್ಮುಖಿಗಳಾಗಿ ನೋಡಿಕೊಂಡು ಜನರ ಅಭಿವೃದ್ಧಿಯ ದೃಷ್ಟಿಯಿಂದ ಕೆಲಸ ಮಾಡುವುದು ಅನಿವಾರ್ಯವೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಮೊನ್ನೆಯದಿವಸ ಒಂದು ಮಾತನ್ನು ಹೇಳಿದೆ, There is a saying that those who are in opposition know how to rule the Government. When we go to ruling side we change our stand. This has been happening over the years. ಅದು ಅನೇಕ ವರ್ಷಗಳಿಂದ ನಡೆದುಕೊಂಡ ಬಂದದ್ದು, ಇದೇನು ಹೊಸದಲ್ಲ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ ಒಂದು ಗಂಟೆ ಐವತ್ತೇಳು ನಿಮಿಷಕ್ಕೆ ಮುಂದೂಡಿ ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಸೇರುವುದೆಂದು ಅಧ್ಯಕ್ಷರು ಸೂಚಿಸಿದರು)

(ಸದನವು 3-30ಕ್ಕೆ ಪ್ರಾರಂಭವಾದಾಗ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸೂಚಿಸುವುದಕ್ಕೆ ನನ್ನ ಪೂರಕವಾದ ಭಾಷಣ ಮಾಡುತ್ತಾ ಒಂದು ವಿಚಾರವನ್ನು ಪ್ರಸ್ತಾಪಿಸಿದ್ದೆ. ಇವತ್ತು ನಮಗೆ ಸಮರ್ಥವಾದ ಆಡಳಿತ ಪಕ್ಷವಾಗಿ ಕಾಂಗ್ರೆಸ್ ಪಕ್ಷ ಮೂಡಿರುವಾಗ ಅಷ್ಟೇ ಸಮರ್ಥವಾದ ಒಂದು ವಿರೋಧ ಪಕ್ಷ ಇರಬೇಕು ಎಂದು ನಾನು ಪ್ರಸ್ತಾಪಿಸಿದ್ದೆ. ಇವತ್ತು ಅಲ್ಲಿ ಸಮರ್ಥರು ಇಲ್ಲವೆಂದು ನಾನು ಹೇಳುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷಗಳವರು ಸಭಾತ್ಯಾಗ ಮಾಡಿದ್ದಾರೆ, ಅದರಂತೆ ಆಡಳಿತದ ಪಕ್ಷದವರು ಸಭಾತ್ಯಾಗ ಮಾಡಿದ್ದಾರೆಯೇ ಎನ್ನುವ ಪ್ರಶ್ನೆ ಬರುತ್ತದೆ. ಕೋರಂ ವಿಷಯ ಬೇರೆ. ಆದರೆ ಸಚಿವ ಸಂಪುಟದವರು ಮೊದಲನೇ ಸಾಲಿನಲ್ಲಿ ಯಾರೂ ಇಲ್ಲ ಅದರಂತೆ ಎರಡನೇ ಸಾಲಿನಲ್ಲಿ ಒಬ್ಬರು ಮಾತ್ರ ಇದ್ದಾರೆ. ಕೋರಂ ಇದೆ ಎಂದು ತಾವು ಹೇಳುವುದಾದರೆ ಇಪ್ಪತ್ತಮೂರು ಜನ ಸದಸ್ಯರನ್ನು ಇಟ್ಟುಕೊಂಡು ಸದನ ನಡೆಸಿಬಿಡಿ. ನಮ್ಮ ಕಾಲದಲ್ಲಿ ಈ ರೀತಿ ಇರಲಿಲ್ಲ, ಆದರೆ, ಕೊನೆಯಲ್ಲಿ ಸ್ವಲ್ಪ ಈ ರೀತಿ ಆಗುತ್ತಿತ್ತು. ಆದರೆ ನಿಮ್ಮ ಕಾಲದಲ್ಲಿ ಪ್ರಾರಂಭದಲ್ಲೇ ಈ ರೀತಿ ಆದರೆ ಏನರ್ಥ? ಈ ರೀತಿ ಆದರೆ, ನಾವು ಮಾನ್ಯ ಸದಸ್ಯರು ಮಾಡಿದಂಥ ಭಾಷಣದ ಪ್ರತಿಯನ್ನು ಓದಿಕೊಂಡು ಏನಾದರೂ ಇದೆಯೇ ಎಂದು ನೋಡಬಹುದು, ನಾವು ಏಕೆ ಇಲ್ಲಿ ಕುಳಿತುಕೊಳ್ಳಬೇಕು? ಆಡಳಿತ ಪಕ್ಷದ ಸದಸ್ಯರೊಬ್ಬರು ಮಾಡುವಂತಹ ಭಾಷಣವನ್ನು ಅವರ ಮಂತ್ರಿಗಳು ಹಾಗೂ ಅವರ ಇತರೇ ಸದಸ್ಯರು ಕೇಳುವುದಕ್ಕೆ ಆಸಕ್ತಿ ಇಲ್ಲವೆಂದರೆ ನಮಗೆ ಏಕೆ ಇರಬೇಕು?

ಉಪಾಧ್ಯಕ್ಷರು : ಅವರೆಲ್ಲಾ ಬರುತ್ತಿದ್ದಾರೆ.

ಶ್ರೀ ಸಿ.ಎಂ. ಲಿಂಗಪ್ಪ : ಈ ಅವಧಿಯಲ್ಲೂ ಕೂಡ ವಿರೋಧ ಪಕ್ಷದಲ್ಲಿ ಸಮರ್ಥರಾದಂಥ ಸದಸ್ಯರುಗಳು ಕೂಡ ಇದ್ದಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಹಿಂದೆ ಆಡಳಿತದ ಪಕ್ಷದಲ್ಲಿದ್ದಂಥ ಕೆಲವರು ಮತ್ತು ವಿರೋಧ ಪಕ್ಷದಲ್ಲಿದ್ದಂತಹ ಕೆಲವರು ಇವತ್ತು ಪುನಃ ಆಯ್ಕೆಯಾಗದೆ ಇರುವುದರಿಂದ ಇವತ್ತು ಈ ಸದನ ಒಂದು ದೊಡ್ಡ ಕೊರತೆಯನ್ನು ಅನುಭವಿಸುತ್ತದೆಂದು ನನಗಾದರೂ ಅನ್ನಿಸುತ್ತದೆ. ಉದಾಹರಣೆಗೆ ಹೇಳುವುದಾದರೆ, ಮಾನ್ಯ ವಾಟಾಳ್ ನಾಗರಾಜ್‌ರವರು ರಾಜ್ಯಪಾಲರ ಭಾಷಣ ಮಾಡುವಂತಹ ಸಂದರ್ಭದಲ್ಲಿ ಬಹಳಷ್ಟು ಗಲಾಟೆ ಮಾಡಿ ಭಾಷಣ ಓದುವುದಕ್ಕೆ ಆಗದಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದರು. ಅದರ ಜೊತೆಗೆ ಅವರು ಕೂಡ ಒಂದು ಭಾಷಣವನ್ನು ಓದುತ್ತಿದ್ದರು, ಕೊನೆಗೆ ಅವರ ಭಾಷಣವೂ ಕೇಳುತ್ತಿರಲಿಲ್ಲ ಮತ್ತು ರಾಜ್ಯಪಾಲರ ಭಾಷಣವೂ ಕೇಳುತ್ತಿರಲಿಲ್ಲ. ಇದು ಸಭೆಯ ನಿಯಮಕ್ಕೆ ವಿರುದ್ಧ ಎಂದು ಹೇಳಿ ಅವರ ವಿರುದ್ಧ ಹಕ್ಕುಚ್ಯುತಿ

ನಿರ್ಣಯವನ್ನು ಕೂಡ ನಾನು ಮಂಡಿಸಿದ್ದೆ. ಆದರೂ ಕೂಡ ಅವರ ಗೈರು ಹಾಜರಿಯಿಂದ ಇವತ್ತು ಈ ಸಭೆ ಒಂದು ದೊಡ್ಡ ಕೊರತೆಯನ್ನು ಅನುಭವಿಸುತ್ತಿದೆ ಎಂದು ನನಗನ್ನಿಸುತ್ತದೆ. ಅದರಂತೆ, ಮಾನ್ಯ ಪುಟ್ಟಣ್ಣಯ್ಯನವರು, ಯಾವುದೇ ರೀತಿಯ ರೈತರ ಸಮಸ್ಯೆಗಳು ಬಂದಾಗ ಅವರು ರೈತರ ಪರವಾಗಿರತಕ್ಕಂಥ ವಾದ ಎಷ್ಟರಮಟ್ಟಿಗೆ ಸಮರ್ಥನೀಯ ಆಗಿತ್ತು ಎಂದರೆ ಬಹುಶಃ ಎಲ್ಲರೂ ಕೂಡ ತಲೆತಗ್ಗಿಸಿ ಒಪ್ಪಿಕೊಳ್ಳಬೇಕಾಗಿತ್ತು. ಅಷ್ಟರಮಟ್ಟಿಗೆ ಮಾನ್ಯ ಪುಟ್ಟಣ್ಣಯ್ಯನವರು ರೈತರ ಸಮಸ್ಯೆಗಳನ್ನು ಬಹಳ ಸಮರ್ಥವಾಗಿ ಮಂಡಿಸುತ್ತಿದ್ದರು. ಶ್ರೀಮಾನ ಹೆಚ್.ಎನ್. ನಂಜೇಗೌಡರವರು ಒಳ್ಳೆಯ ಸಂಸದೀಯ ಪಟು. ಉದ್ದವಾದ ಭಾಷಣ ಮಾಡುತ್ತಿರಲಿಲ್ಲ, ಯಾವಾಗಲೂ ಮಾತನಾಡುತ್ತಿರಲಿಲ್ಲ, ಸಂದರ್ಭ ಬಂದಾಗ ತಮ್ಮದೇ ಆದ ಶೈಲಿಯಲ್ಲಿ ಆ ಒಂದು ಚರ್ಚೆಗೆ ಹೊಸ ತಿರುವನ್ನು ಕೊಡತಕ್ಕಂಥ ವ್ಯಕ್ತಿಯಾಗಿದ್ದರು. ಶ್ರೀಮಾನ್ ಜೆ.ಹೆಚ್. ಪಾಟೀಲ್‌ರವರು ಹಿಂದೆ ಅವರು ಮುಖ್ಯಮಂತ್ರಿಗಳಾಗಿದ್ದವರು. ಇವತ್ತು ಅವರು ಪುನರ್ ಆಯ್ಕೆಗೊಂಡು ವಿರೋಧಪಕ್ಷದ ಸಾಲಿನಲ್ಲಿ ಕುಳಿತಿದ್ದರೆ ಸಭೆಯ ಚರ್ಚೆಗೆ ಬಹಳ ಜೀವಂತಿಕೆ ಬರುತ್ತಿತ್ತು. ಶ್ರೀಯುತರ ಹಾಸ್ಯ ಮಿಶ್ರಿತ ಅನೇಕ ಮಾತುಗಳು ಸಭೆಯನ್ನು ಬಹಳ ಜೀವಂತಿಕೆಯಿಂದ ಇಡುತ್ತಾ ಇತ್ತು. ಅದರಂತೆ ಹಿಂದೆ ಸಭಾಧ್ಯಕ್ಷರಾಗಿದ್ದಂಥ ಮಾನ್ಯ ರಮೇಶ್ ಕುಮಾರ್‌ರವರು ನಮಗೆಲ್ಲರಿಗೂ ಸ್ಫೂರ್ತಿದಾಯಕರಾಗಿದ್ದರು. ಬ್ರಿಟನ್ ಪಾರ್ಲಿಮೆಂಟ್‌ನಲ್ಲಿ ಸ್ಪೀಕರ್‌ರವರು ಹೆಚ್ಚು ಮಾತನಾಡುವುದಿಲ್ಲವಂತೆ, ಕೇವಲ ನೋಟ, ಕಿವಿಯಲ್ಲಿ ಕೇಳಿಸಿಕೊಳ್ಳುವುದು. ಇಷ್ಟಕ್ಕೆ ಮಾತ್ರ ಸೀಮಿತವಾಗಿರುತ್ತಾರಂತೆ. ಆದರೆ ಇದಕ್ಕೆ ಅಪವಾದವಾಗಿ ಮಾನ್ಯ ರಮೇಶ್‌ಕುಮಾರ್‌ರವರು ಅನೇಕ ವೇಳೆ ಬಹಳ ಮುಕ್ತವಾಗಿ ಮಾತನಾಡುತ್ತಿದ್ದರು. ಎಷ್ಟೋ ಸಂದರ್ಭದಲ್ಲಿ ಚರ್ಚೆಯಾಗುತ್ತಿರಬೇಕಾದರೆ ಮಾನ್ಯ ರಮೇಶ್‌ಕುಮಾರ್‌ರವರು ಚರ್ಚೆಯಲ್ಲಿ ತಾವು ಕೂಡ ಭಾಗಿಗಳಾಗಿ ಆ ಚರ್ಚೆಗೆ ಒಂದು ಹೊಸ ರೂಪವನ್ನು ತಂದು ಕೊಡುತ್ತಿದ್ದರು. ಇಂಥ ಅನೇಕ ಸಮರ್ಥ ವ್ಯಕ್ತಿಗಳು ವಿಧಾನಸಭೆಗೆ ಪುನರಾಯ್ಕೆಗೊಳ್ಳದಿರುವುದರಿಂದ, ಇವತ್ತು ವಿರೋಧ ಪಕ್ಷ ಸ್ವಲ್ಪ ದುರ್ಬಲವಾಗಿದೆ ಎನ್ನತಕ್ಕಂಥ ಅಭಿಪ್ರಾಯ ಬರುವುದಕ್ಕೆ ಕಾರಣವಾಗುತ್ತದೆ. ಆದರೆ, ಅವರ ವಿರುದ್ಧವಾಗಿ ಗೆದ್ದು ಬಂದಿರತಕ್ಕಂಥವರು ಯಾರು ತಪ್ಪು ತಿಳಿದು ಕೊಳ್ಳಬಾರದು. ಈ ವ್ಯಕ್ತಿ ಅವರು ಗೆದ್ದು ಬರಬೇಕು ಎನ್ನುವ ಆಸೆ ವ್ಯಕ್ತಪಡಿಸುತ್ತಾನೆ, ನಾವು ಗೆಲ್ಲಬಾರದಾಗಿತ್ತೆ? ಎಂದು ಅಂದು ಕೊಳ್ಳಬಾರದು. ಏಕೆಂದರೆ, ಇದು ಪ್ರಜಾತಂತ್ರದ ವ್ಯವಸ್ಥೆ. ಯಾರಾದರೂ ಗೆಲ್ಲುವುದಕ್ಕೆ ಅಥವಾ ಸೋಲುವುದಕ್ಕೆ ನಾವು ಯಾರೂ ಹೊಣೆಗಾರರಲ್ಲ. ಜನತೆ ಕೊಟ್ಟಂಥ ತೀರ್ಪನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಮಾನ್ಯ ದೇವೇಗೌಡರ ವಿರುದ್ಧವಾಗಿ ಒಂಭತ್ತು ಸಾವಿರ ಮತಗಳ ಅಂತರದಿಂದ ನಾನು ಸೋತಾಗ ಮುಕ್ತವಾಗಿ ಆ ಸೋಲನ್ನು ಒಪ್ಪಿಕೊಂಡೆ. ಪುನಃ ಮಾನ್ಯ ದೇವೇಗೌಡರು, ಅವರ ಮಕ್ಕಳು ಹಾಗೂ ಸರ್ಕಾರ ಎಲ್ಲರೂ ಸೇರಿ ಒಬ್ಬ ಜನಪ್ರಿಯ ಚಲನಚಿತ್ರನಟನನ್ನು ನನ್ನ ವಿರುದ್ಧ ನಿಲ್ಲಿಸಿದಾಗ, ಅವರ ವಿರುದ್ಧ ಗೆದ್ದಾಗಲೂ ನಾನು ನನ್ನ ಗೆಲವನ್ನು ಒಪ್ಪಿಕೊಂಡೆ. ಹೀಗಾಗಿ ಸಮರ್ಥ ಆಡಳಿತ ಪಕ್ಷ ಕಾಂಗ್ರೆಸ್ ಇರುವಾಗ ವಿರೋಧ ಪಕ್ಷವೂ ಕೂಡ ಸಮರ್ಥವಾಗಿ ಬೆಳೆಯಲಿ ಎನ್ನತಕ್ಕಂಥ ಆಶಯವನ್ನು ನಾನು ವ್ಯಕ್ತ ಮಾಡುತ್ತೇನೆ.

ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮೊಟ್ಟ ಮೊದಲಿಗೆ ಕೃಷಿರಂಗಕ್ಕೆ ಈ ಸರ್ಕಾರ ಇವತ್ತು ಏನು ಒತ್ತು ಕೊಡುತ್ತದೆ ಎಂದು ಬಹಳ ಚೆನ್ನಾಗಿ ಹೇಳಿದ್ದಾರೆ. ಇವತ್ತು ಈ ರಾಜ್ಯದಲ್ಲಿ ಕೃಷಿಯನ್ನು ಅವಲಂಬಿಸಿರತಕ್ಕಂಥವರು ಶೇಕಡ ಎಪ್ಪತ್ತರಷ್ಟು ಜನ ಇದ್ದಾರೆಂದು ಬಹುಶಃ ಎಲ್ಲರಿಗೂ ಗೊತ್ತಿದೆ. ಇದರಲ್ಲಿ ಶೇಕಡ ತೊಂಬತ್ತರಷ್ಟು ಮಧ್ಯಮ ಹಾಗೂ ಸಣ್ಣ ರೈತರುಗಳ ಹಿತವನ್ನು ಕಾಪಾಡುವುದು ನಮ್ಮ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಹೇಳುವುದಾದರೆ, ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆಗಳನ್ನು ಹಾಗೂ ಕೃಷಿರಂಗಕ್ಕೆ ತಾಂತ್ರಿಕ ಜ್ಞಾನವನ್ನು ವರ್ಗಾವಣೆ ಮಾಡಿ ಕೊಟ್ಟು, ಈ ಒಂದು ಹಂತದಲ್ಲಿ ಆಗತಕ್ಕಂಥ ವಿಳಂಬವನ್ನು ತಪ್ಪಿಸಿ, ರೈತರಿಗೆ ಉಪಯುಕ್ತವಾದಂಥ ಮಾಹಿತಿಯನ್ನು ಒದಗಿಸಿಕೊಡಬೇಕು ಎನ್ನುವ ಕಾರ್ಯಕ್ರಮ, ಇತ್ತೀಚಿಗೆ ಧಾರವಾಡದಲ್ಲಿ ನಡೆದಂಥ ಕೃಷಿ ಶೃಂಗಮೇಳ ಇಲ್ಲಿಯೂ ಕೂಡ ಅನೇಕ ತೀರ್ಮಾನಗಳು ಆಗಿದ್ದವು, ಇವತ್ತು ಈ ರಾಜ್ಯದಲ್ಲಿ ಕೃಷಿ ವ್ಯವಸ್ಥೆಗೆ ತಾಂತ್ರಿಕ ಜ್ಞಾನವನ್ನು ಒದಗಿಸಿಕೊಡತಕ್ಕಂಥ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ನಮ್ಮ ಸರ್ಕಾರ ಕಾರ್ಯಪ್ರವೃತ್ತವಾಗಿದೆ. ಕೃಷಿಯ ಅಂಗ ವಿಭಾಗವಾದಂಥ ಹೈನುಗಾರಿಕೆ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ತಾಂತ್ರಿಕ ಹಾಗೂ ಆರ್ಥಿಕ ನೆರವಿಗಾಗಿ ರಾಷ್ಟ್ರೀಯ ಹೈನುಗಾರಿಕಾ ಅಭಿವೃದ್ಧಿ ಮಂಡಲಿಯವರು ಈ ರಾಜ್ಯಕ್ಕೆ ಐದುನೂರು ಕೋಟಿ ರೂಪಾಯಿಗಳ ಆರ್ಥಿಕ ನೆರವನ್ನು ಕೊಡಿಸಿ ಕೊಟ್ಟು ಹೈನುಗಾರಿಕಾ ರಂಗದಲ್ಲಿ ಈ ರಾಜ್ಯದಲ್ಲಿ ಒಂದು ಕ್ಷೀರ ಕ್ರಾಂತಿಯನ್ನು ಉಂಟು ಮಾಡಬೇಕು ಎನ್ನುವ ಮೂಲ ಉದ್ದೇಶವನ್ನಿಟ್ಟುಕೊಂಡು ಆರ್ಥಿಕ ನೆರವನ್ನು ಕೊಡುವುದಕ್ಕೆ ಮುಂದಾಗಿದ್ದಾರೆ. ಮತ್ತೆ, ಈ ರಾಜ್ಯದಲ್ಲಿ ರೇಷ್ಮೆ ಕೃಷಿಯ ಕಾರ್ಯ ಚಟುವಟಿಕೆಗಳು ಸುಮಾರು ಮೂವತ್ತು ಲಕ್ಷ ಜನರ ಆದಾಯದ ಮೂಲವಾಗಿದೆ.

ಸುಮಾರು ಒಂದೂವರೆ ವರ್ಷಗಳ ಹಿಂದೆ ಕೇಂದ್ರ ಸರ್ಕಾರ ರೇಷ್ಮೆ ನೂಲನ್ನು ಆಮದು ಮಾಡಿಕೊಳ್ಳತಕ್ಕಂಥ ನೀತಿಯನ್ನು ಜಾರಿಗೆ ತಂದಿದ್ದರಿಂದ ಇವತ್ತು ರಾಜ್ಯದಲ್ಲಿರತಕ್ಕಂಥ ಸುಮಾರು 30 ಲಕ್ಷ ರೇಷ್ಮೆ ವ್ಯವಸಾಯ ಮಾಡತಕ್ಕಂಥ ರೈತಾಪಿ ಜನಗಳ ಆದಾಯಕ್ಕೆ ಬಹಳ ಹೊಡೆತವನ್ನು ಕೊಟ್ಟಿದ್ದಾರೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಚೈನಾ ದೇಶದಿಂದ ಕಚ್ಚಾ ರೇಷ್ಮೆಯನ್ನು ಆಮದು ಮಾಡತಕ್ಕಂಥ ಅವರ ಉತ್ಸಾಹಕ್ಕೆ ಇವತ್ತು ಇಡೀ ರಾಜ್ಯದಲ್ಲಿ ಉತ್ಪಾದನೆ ಆಗತಕ್ಕಂಥ ರೇಷ್ಮೆಗೆ ಮಾರುಕಟ್ಟೆ ಇಲ್ಲದೇ ಮತ್ತು ರೇಷ್ಮೆ ಬಿತ್ತನೆ ಗೂಡಿಗೂ ಸಹ ಸರಿಯಾದ ಬೆಲೆ ಇಲ್ಲದೇ ರೇಷ್ಮೆ ಕೃಷಿ ಮೇಲೆ ಅವಲಂಬಿತರಾಗಿರತಕ್ಕಂಥ ರೈತರು ತೀರಾ ಕಂಗಾಲಾಗಿದ್ದಾರೆ. ಈಗಲಾದರೂ ಸಹ ಕೇಂದ್ರ ಸರ್ಕಾರ ಕೇವಲ ನೇಯ್ಗೆಗಾರರ ಹಿತವನ್ನು ಪ್ರಧಾನವಾಗಿ ಇಟ್ಟುಕೊಳ್ಳದೇ ಇಡೀ ರಾಷ್ಟ್ರದಲ್ಲಿನ ರೇಷ್ಮೆ ಬೆಳೆಯನ್ನು ಮತ್ತು ರೇಷ್ಮೆ ಗೂಡನ್ನು ಬೆಳೆಯತಕ್ಕಂಥವರ ಹಿತವನ್ನು ಕೂಡಲೇ ಕಾಪಾಡುವುದಕ್ಕೆ ಗಮನಹರಿಸಬೇಕೆಂದು ಈ ಸದನದ ಮೂಲಕ ಕೇಂದ್ರ ಸರ್ಕಾರವನ್ನು ಅತ್ಯಂತ ಕಳಕಳಿಯಿಂದ ಮತ್ತು ಒತ್ತಾಯ ಪೂರ್ವಕವಾಗಿ ನಾನು ಕೇಳಿಕೊಳ್ಳುತ್ತೇನೆ. ಇಡೀ ರಾಜ್ಯದಲ್ಲಿ ಸುಮಾರು 9 ಸಾವಿರ ಮೆಟ್ರಿಕ್ ಟನ್‌ಗಳಷ್ಟು ಕಚ್ಚಾ ರೇಷ್ಮೆ ಉತ್ಪಾದನೆ ಆಗುತ್ತಿದೆ. ಇಡೀ ರಾಷ್ಟ್ರದಲ್ಲಿ ಉತ್ಪಾದನೆ ಆಗತಕ್ಕಂಥ ರೇಷ್ಮೆಯಲ್ಲಿ ಶೇಕಡ 63ರಷ್ಟು ರೇಷ್ಮೆ ನೂಲು ನಮ್ಮ

ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿದೆ. ಈ ದೃಷ್ಟಿಯಿಂದ ಕೂಡ ಕೇಂದ್ರ ಸರ್ಕಾರ ರೇಷ್ಮೆ ಕೃಷಿಯಲ್ಲಿ ಅವಲಂಬಿತರಾಗಿರತಕ್ಕಂಥ ಕರ್ನಾಟಕ ರೈತರ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೋರಿಸಬೇಕೆಂದು ಹೇಳುತ್ತೇನೆ. ಇನ್ನು ತೋಟಗಾರಿಕೆ ಬಗ್ಗೆ ಹೇಳುವುದಾದರೆ, ಇವತ್ತು ರೈತನ ಖರ್ಚು ವೆಚ್ಚಗಳಿಗೆ ಸರಿಯಾದ ವರಮಾನ ಕೇವಲ ಆಹಾರ ಬೆಳೆಗಳಿಂದ ಬರುವುದಿಲ್ಲ. ಇವತ್ತಿನ ದಿವಸ ರೇಷ್ಮೆಯಿಂದ ಮತ್ತು ಹೈನುಗಾರಿಕೆ ಹಾಗೂ ಇದೆಲ್ಲಕ್ಕಿಂತ ಮುಖ್ಯವಾಗಿ ತೋಟಗಾರಿಕೆ ಬೆಳೆಗಳಾದ ತರಕಾರಿ, ಹಣ್ಣು ಹಾಗೂ ಪುಷ್ಪ ಕೃಷಿಯಿಂದ ರೈತರಿಗೆ ಹೆಚ್ಚಿನ ಆದಾಯ ಬರುತ್ತದೆ. ಈ ರಂಗದಲ್ಲಿ ಹಿಂದಿನ ಸರ್ಕಾರದವರು ಕೂಡ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಸುಮಾರು ಶೇಕಡ 27ಕ್ಕಿಂತ ಹೆಚ್ಚು ಪ್ರದೇಶಗಳಲ್ಲಿ ಈ ತೋಟಗಾರಿಕೆ ಬೆಳೆಯನ್ನು ಬೆಳೆಯುವುದಕ್ಕೆ ನಮ್ಮ ಸರ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದಕ್ಕಾಗಿ ಸುಮಾರು 500 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬಂಡವಾಳವನ್ನು ಹೂಡಿ ಬೆಂಗಳೂರು ಮತ್ತು ಬೆಂಗಳೂರಿನ ಸುತ್ತಮುತ್ತಲೂ ಕೂಡ ಪುಷ್ಪ ಕೃಷಿ ಘಟಕಗಳನ್ನು ಪ್ರಾರಂಭ ಮಾಡಿಸಿ ಆ ಮೂಲಕ ತೋಟಗಾರಿಕೆ ರಂಗಕ್ಕೆ ಹೆಚ್ಚಿನ ಒತ್ತನ್ನು ಕೊಡತಕ್ಕಂಥ ಒಂದು ಒಳ್ಳೆಯ ಕಾರ್ಯಕ್ರಮವನ್ನು ಇವತ್ತು ನಮ್ಮ ಸರ್ಕಾರ ಮಾಡುತ್ತಿದೆ.

ಇನ್ನು ಗ್ರಾಮೀಣಾಭಿವೃದ್ಧಿ ಬಗ್ಗೆ ನಮ್ಮ ಸರ್ಕಾರ ಏನೂ ಮಾಡಿಲ್ಲ ಎನ್ನತಕ್ಕಂಥ ಟೀಕೆಯ ಮಾತುಗಳು ಅಲ್ಲಲ್ಲಿ ಕೇಳಿಬರುತ್ತಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮ್ಮ ಸರ್ಕಾರ ಮುಂದಿನ ವರ್ಷದಲ್ಲಿ ಗ್ರಾಮೀಣಾಭಿವೃದ್ಧಿಗೆ ಎಷ್ಟರಮಟ್ಟಿಗೆ ಒತ್ತನ್ನು ಕೊಡುತ್ತೇವೆ ಎನ್ನತಕ್ಕಂಥಾದ್ದನ್ನು ಬಹಳ ವಿವರವಾಗಿ ಹೇಳಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆ ಇದುವರೆಗೂ ಸಮರ್ಪಕವಾಗಿ ಇಲ್ಲದೇ ಇರುವುದರಿಂದ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸುವ ದೃಷ್ಟಿಯಿಂದ ಮುಂದಿನ 4 ವರ್ಷಗಳಲ್ಲಿ ತಲಾ 55 ಲೀಟರ್‌ನಷ್ಟು ಕುಡಿಯುವ ನೀರು ಗ್ರಾಮೀಣ ಭಾಗದ ಜನರಿಗೆ ಲಭ್ಯವಾಗಲೆಂದು ಒಂದು ಯೋಜನೆಯನ್ನು ರೂಪಿಸಿ ಸುಮಾರು 485 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ವೆಚ್ಚ ಮಾಡಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕೆಂದು ಒಂದು ಬೃಹತ್ ಕಾರ್ಯಕ್ರಮವನ್ನು ಇವತ್ತು ನಮ್ಮ ಸರ್ಕಾರ ಹಾಕಿಕೊಂಡಿದೆ. ಇವತ್ತಿನದಿವಸ ಕೃಷಿ ಹಿನ್ನೆಲೆಯ ಚಟುವಟಿಕೆಗಳ ಜೊತೆಗೆ ಮತ್ಸ್ಯ ಉದ್ಯಮಗಳು ಈ ರಾಜ್ಯದಲ್ಲಿ ಬಹಳ ಪ್ರಮುಖವಾದಂಥ ಪಾತ್ರವನ್ನು ವಹಿಸಿದೆ. ಕರಾವಳಿ ಪ್ರದೇಶದಲ್ಲಿ ಮತ್ಸ್ಯ ಉದ್ಯಮಗಳ ಚಟುವಟಿಕೆ ಸಾಕಷ್ಟು ವ್ಯಾಪಕವಾಗಿ ಹರಡಿವೆ. ಇದರ ಜೊತೆಗೆ ಒಳನಾಡು ಮೀನುಗಾರಿಕೆ ಬಹಳ ವ್ಯಾಪಕವಾಗಿ ಮಾಡಬೇಕೆಂಬ ಒಂದು ಕಾರ್ಯಕ್ರಮವನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಕರಾವಳಿ ಅಥವಾ ಸಮುದ್ರದಲ್ಲಷ್ಟೆ ಅಲ್ಲದೇ ರಾಜ್ಯದ ಒಳಭಾಗದಲ್ಲಿರತಕ್ಕಂಥ ಕೆರೆಕಟ್ಟೆಗಳಲ್ಲಿ ಮತ್ತು ಗುಂಟೆಗಳಲ್ಲಿ ಮೀನುಗಳನ್ನು ಬೆಳೆಸಿ ಮೀನುಗಾರಿಕಾ ಅಭಿವೃದ್ದಿಗೆ ಹೆಚ್ಚಿನ ಒತ್ತು ಕೊಡುವುದಕ್ಕೋಸ್ಕರ ಈ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಡಿ.ಎಲ್.ಡಿ.ಬಿ. ಯೋಜನೆ ಮೂಲಕ ಕಪ್ಪು ಮತ್ತು ಬೂದು ಬಣ್ಣದ ಮಣ್ಣು ಇರತಕ್ಕಂಥ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ವ್ಯಾಪಕವಾದ ಕಾರ್ಯಕ್ರಮಗಳ ಬಗ್ಗೆ ಇವತ್ತು ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಹೇಳಿಸಿದೆ. ಈ ದಿಸೆಯಲ್ಲಿ

ರಾಷ್ಟ್ರೀಯ ಹೈನು ಅಭಿವೃದ್ಧಿ ನಿಗಮದವರು ಸಹಾಯ ಮಾಡುವುದಕ್ಕೆ ಮುಂದೆ ಬಂದಿದ್ದಾರೆ ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವಸತಿ ಸೌಲಭ್ಯಗಳನ್ನು ನೀಡತತಕ್ಕಂಥ ವಿಚಾರದ ಬಗ್ಗೆ ಹೇಳುವುದಾದರೆ, ಪ್ರತಿ ವರ್ಷ ಇಡೀ ರಾಜ್ಯಕ್ಕೆ ಒಂದು ಲಕ್ಷ ಮನೆಗಳನ್ನು ಕೊಡತಕ್ಕಂಥ ಒಂದು ಬೃಹತ್ ಯೋಜನೆಯನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಒಂದು ತಾಲ್ಲೂಕಿಗೆ ಕನಿಷ್ಟಪಕ್ಷ ಒಂದು ಸಾವಿರ ಮನೆಗಳು ಈ ಯೋಜನೆಯಿಂದ ಬರುತ್ತದೆ. ಹಿಂದಿನ ಸರ್ಕಾರಗಳು ಈ ಯೋಜನೆಯನ್ನು ಹಾಕಿಕೊಂಡು ಮನೆಗಳನ್ನು ನಿರ್ಮಾಣ ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ಈ ಯೋಜನೆಯನ್ನು ಮೊಟ್ಟಮೊದಲು ಪ್ರಾರಂಭ ಮಾಡಿದ್ದು ಕಾಂಗ್ರೆಸ್ ಸರ್ಕಾರ. ನಂತರ 1983 ಮತ್ತು 1985 ಹಾಗೂ 1994ರಲ್ಲಿ ಬಂದಂಥ ಸರ್ಕಾರಗಳು ಇದನ್ನು ಹಂತ ಹಂತವಾಗಿ ಮುಂದುವರೆಸಿಕೊಂಡು ಬಂದಿದೆ. ಇದೊಂದು ಬಹಳ ಉಪಯುಕ್ತ ಕಾರ್ಯಕ್ರಮವಾಗಿದ್ದು, ಇವತ್ತಿನ ದಿವಸ ಕೇವಲ ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಬಡವರಿಗೆ ಅಷ್ಟೇ ಅಲ್ಲದೇ ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಗಣಿ ಕೆಲಸಗಾರರು ಮತ್ತು ಕೂಲಿ ಕಾರ್ಮಿಕರು ಹಾಗೂ ಮೀನುಗಾರರು, ಅಮಾಲರು ಮತ್ತು ನೇಯ್ಗೆ ಕೆಲಸಗಾರರಿಗೆ ಹಾಗೂ ಇನ್ನಿತರ ಅಸಂಘಟಿತ ವಲಯದವರಿಗೂ ಕೂಡ ಈ ಯೋಜನೆಯಿಂದ ಅನುಕೂಲ ಕಲ್ಪಿಸಿಕೊಡತಕ್ಕಂಥ ಒಂದು ದೊಡ್ಡ ಯೋಜನೆಯನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಹಿಂದೆ ಈ ಯೋಜನೆ ಅಡಿಯಲ್ಲಿ ಮಂಜೂರಾಗಿರತಕ್ಕಂಥ ಸಾಕಷ್ಟು ಹಣ ಬಿಡುಗಡೆಯಾಗಿಲ್ಲವೆಂದು ಮಾನ್ಯ ಬನ್ನಿಕೋಡ್‌ರವರು ಈಗಾಗಲೇ ಪ್ರಸ್ತಾಪ ಮಾಡಿದರು. ಇದು ಕೇವಲ ಆಡಳಿತಾತ್ಮಕವಾದ ಏರುಪೇರಿನಿಂದ ಆಗಿರಬಹುದೇ ಹೊರತು, ಯೋಜನೆಯ ಅನುಷ್ಠಾನಕ್ಕೆ ಸಾಕಷ್ಟು ಹಣ ಬಿಡುಗಡೆಯಾಗದೇ ಇರುವುದಕ್ಕೆ ಒಂದಕ್ಕೊಂದು ತಾಳೆ ಆಗುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಶಿಕ್ಷಣಕ್ಕೆ ನಮ್ಮ ಸರ್ಕಾರ ತನ್ನ ಆದಾಯದಲ್ಲಿ ಸುಮಾರು ಶೇ 40 ರಿಂದ 45ರ ಪ್ರಮಾಣದಲ್ಲಿ ವೆಚ್ಚ ಮಾಡುತ್ತಿದೆ. ಇದನ್ನು ಈ ಸಭೆಯಲ್ಲಿ ಎಲ್ಲರೂ ಗಮನಿಸಬೇಕಾಗುತ್ತದೆ. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿಪೂರ್ವ ಹಂತದಲ್ಲಿ ಪರಿಣಾಮಕಾರಿಯಾದಂಥ ರೀತಿಯಲ್ಲಿ ಶಿಕ್ಷಣ ಕೊಡಬೇಕೆಂದು ಮತ್ತು ಗ್ರಾಮೀಣ ಭಾಗದಲ್ಲಿ ಇವತ್ತು ಸಾಕಷ್ಟು ಶಿಕ್ಷಣ ಮಟ್ಟ ಕುಸಿದಿರುವುದರಿಂದ, ಇದನ್ನು ಉತ್ತಮಪಡಿಸುವುದಕ್ಕಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಗ್ರಾಮೀಣ ಭಾಗದಲ್ಲಿರತಕ್ಕಂಥ ಮಕ್ಕಳು ಕೂಡ ಒಳ್ಳೆಯ ಶಿಕ್ಷಣ ವಂತರಾಗಬೇಕೆಂಬ ದೃಷ್ಟಿಯಿಂದ ನಮ್ಮ ಸರ್ಕಾರ ಇವತ್ತು ಬಹಳ ವ್ಯಾಪಕವಾದಂಥ ಕಾರ್ಯಕ್ರಮವನ್ನು ಹಾಕಿಕೊಂಡು ಅದನ್ನು ಅನುಷ್ಠಾನ ಮಾಡಿ ಮುಂದುವರಿಸುತ್ತಿರುವುದನ್ನು ಇವತ್ತು ಎಲ್ಲರೂ ಕೂಡ ಗಮನಿಸಬೇಕಾಗಿದೆ. ಇವತ್ತು ಸ್ಥಳೀಯ ಸಂಸ್ಥೆಗಳು ಪ್ರಜಾಪ್ರಭುತ್ವದ ಅಡಿಪಾಯಗಳಾಗಿವೆ. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತಿಗಳು ಇದರಲ್ಲಿ ಸೇರಿವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ಒಂದೆರಡು ತಿಂಗಳಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಗ್ರಾಮ ಪಂಚಾಯತಿಗಳಿಗೆ ಈವರೆಗೆ ಕೊಡುತ್ತಿದ್ದ ಒಂದು ಲಕ್ಷ ರೂಪಾಯಿಗಳ ವಾರ್ಷಿಕ ಅನುದಾನದ ಜೊತೆಗೆ ಹೆಚ್ಚುವರಿಯಾಗಿ ಇನ್ನೊಂದು ಲಕ್ಷ

ರೂಪಾಯಿಗಳನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಘೋಷಣೆ ಮಾಡಿದ್ದಾರೆ. ಇದು ಕೇವಲ ರಾಜಕೀಯ ಪ್ರೇರಣೆಯಿಂದ ಮಾಡಿದಂಥ ಘೋಷಣೆ ಅಲ್ಲ. ಗ್ರಾಮ ಪಂಚಾಯಿತಿಗಳು ಎಷ್ಟರಮಟ್ಟಿಗೆ ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿವೆ ಎನ್ನತಕ್ಕಂಥಾದ್ದು ಗ್ರಾಮೀಣ ಪ್ರದೇಶದಿಂದ ಬಂದಂಥ ನಮ್ಮಂಥವರಿಗೆ ಗೊತ್ತಿರುತ್ತದೆ. ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು. ಅವರಿಗೆ ವಿದ್ಯುಚ್ಛಕ್ತಿ ಶುಲ್ಕವನ್ನು ಕಟ್ಟುವುದಕ್ಕೆ ಅವರ ಹತ್ತಿರ ಹಣ ಇರುವುದಿಲ್ಲ. ಬೀದಿ ದೀಪ ಕೆಟ್ಟು ಹೋದಾಗ ಅದನ್ನು ತಂದು ಹಾಕಿಸುವುದಕ್ಕೆ ಅವರ ಹತ್ತಿರ ಹಣ ಇರುವುದಿಲ್ಲ. ತಮ್ಮ ಸಿಬ್ಬಂದಿಗೆ ಸಂಬಳ ಕೊಡುವುದಕ್ಕೆ ಕೂಡ ಅವರ ಹತ್ತಿರ ಸಾಕಷ್ಟು ಹಣ ಇರುವುದಿಲ್ಲ. ಗ್ರಾಮ ಪಂಚಾಯಿತಿಗಳನ್ನು ನಾವು ಆರ್ಥಿಕವಾಗಿ ಸುಭದ್ರಗೊಳಿಸದೇ ಹೋದರೆ ಪ್ರಜಾಪ್ರಭುತ್ವದ ಈ ಅಡಿಪಾಯದ ಅಂಗಸಂಸ್ಥೆಗಳು ಏನು ಇವೆ ಅವು ಬಹಳ ದುರ್ಬಲವಾಗುತ್ತವೆ. ಪ್ರಜಾಪ್ರಭುತ್ವದ ಅರ್ಥದಲ್ಲಿ ಅದು ಮೂಡುವುದಿಲ್ಲ ಎನ್ನತಕ್ಕಂಥಾದ್ದನ್ನು ನಾನು ಇಲ್ಲಿ ಹೇಳುತ್ತೇನೆ. ಈ ಸ್ತುತ್ಯಾರ್ಹವಾದ ಕಾರ್ಯವನ್ನು ಮಾಡಿರತಕ್ಕಂತಹ ನಮ್ಮ ಮುಖ್ಯಮಂತ್ರಿಗಳಾದ ಈ ಎಸ್.ಎಂ. ಕೃಷ್ಣರವರನ್ನು ನಾನು ಇಲ್ಲಿ ತುಂಬುಹೃದಯದಿಂದ ಅಭಿನಂದಿಸಬೇಕಾಗುತ್ತದೆ.

ಇನ್ನು ಗ್ರಾಮೀಣ ರಸ್ತೆಗಳು ಮತ್ತು ರಾಜ್ಯ ಹೆದ್ದಾರಿಗಳ ಬಗ್ಗೆ ನಮ್ಮ ಸರ್ಕಾರ ಇದಕ್ಕೆ 400 ಕೋಟಿ ರೂಪಾಯಿಗಳ ಬೃಹತ್ ಯೋಜನೆಯನ್ನು ಹಮ್ಮಿಕೊಂಡು, ಎಲ್ಲೆಲ್ಲಿ ಅತಿ ಅಗತ್ಯವಾಗಿ ರಸ್ತೆಗೆ ಮರುಡಾಂಬರೀಕರಣವನ್ನು ಹಾಕಬೇಕಾಗಿತ್ತು, ಅಂತಹ ಕಡೆಗಳಲ್ಲಿ ಕೆಲಸವನ್ನು ಈಗಾಗಲೇ ಪ್ರಾರಂಭ ಮಾಡಿದ್ದಾರೆಂದು ನಾನು ಈ ಸಭೆಯ ಮೂಲಕ ಪ್ರಸ್ತಾಪ ಮಾಡಬಯಸುತ್ತೇನೆ. ಹಿಂದೆ ಒಂದು ಕಾಲ ಇತ್ತು, ಹಿಂದೆ ಇದ್ದ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಪ್ರವಾಸ ಹೋದಾಗ ಅಲ್ಲಿಯ ಜನಗಳು ಅವರ ಸಂಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದರು. ಒಂದು ಕಡೆ ಹೇಳುತ್ತಾರೆ, ರಸ್ತೆಗಳು ತೀರಾ ಹಾಳಾಗಿವೆ ನಮ್ಮ ಕಡೆ ಬಸ್ಸು ಬರುತ್ತಿಲ್ಲ, ರಸ್ತೆಗಳಲ್ಲಿ ಗುಂಡಿಗಳು ಬಿದ್ದುಹೋಗಿವೆ, ರಸ್ತೆಯನ್ನು ಸರಿ ಮಾಡಿಸಿದರೆ ನಮಗೆ ಬರುವುದಕ್ಕೆ ಅನುಕೂಲವಾಗುತ್ತದೆಂದು ಅವರು ಹೇಳಿದರೆ, ಅದಕ್ಕೆ ನಮ್ಮ ಮುಖ್ಯಮಂತ್ರಿಗಳು ತಮ್ಮ ಹಾಸ್ಯ ಶೈಲಿಯಲ್ಲಿ 'ನಿಮ್ಮನ್ನು ಬಸ್ಸಿನಲ್ಲಿ ಬಾ' ಎಂದು ಹೇಳಿದವರು ಯಾರು? ನೀವು ಕುದುರೆಯ ಮೇಲೆ ಬನ್ನಿ ಎಂದು ಹೇಳುವ ರೀತಿಯಲ್ಲಿ ಹೇಳುತ್ತಿದ್ದರು. ಆದರೆ ಈ ಸರ್ಕಾರ ಆ ರೀತಿ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಆ ರೀತಿ ನಾವು ಉತ್ತರವನ್ನು ಕೊಟ್ಟರೆ ಈ ರಾಜ್ಯದ ಜನ ನಮ್ಮನ್ನು ಕ್ಷಮಿಸುವುದಿಲ್ಲ. ಇದರ ಒಂದು ಪರಿಜ್ಞಾನ ನಮ್ಮ ಸರ್ಕಾರಕ್ಕೆ ಇದೆ, ತಾವು ನನಗೆ ಬೇಗ ಮುಗಿಸಿ ಎಂದು ಹೇಳುವ ಅಧಿಕಾರ ತಮಗೆ ಇದೆ. ಈ ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನು ಸೂಚಿಸತಕ್ಕಂತಹ ವಿಷಯದಲ್ಲಿ ಮಾತನಾಡುವಾಗ ತಾವು ಕಾಲಮಿತಿಯನ್ನು ಹೇರಿದರೆ ಅನೇಕ ವಿಷಯಗಳನ್ನು ಹೇಳುವುದಕ್ಕೆ ಕಷ್ಟವಾಗುತ್ತದೆ. ಶೂನ್ಯ ರಾಜ್ಯಪಾಲರ ಭಾಷಣವನ್ನು ಉದ್ದೇಶಿಸಿ ಮಾತನಾಡಲು ಪ್ರಾರಂಭ ಮಾಡಿದವನು ನಾನು, ನಂತರ ಮಾತನಾಡುವವರಿಗೆ ಕಾಲಮಿತಿಯನ್ನು ತಾವು ಹೇರಬಹುದು. ಆದರೆ ತಾವು ನನಗೆ ದಯಮಾಡಿ ವಿನಾಯಿತಿಯನ್ನು ಕೊಡಬೇಕೆಂದು ತಮಗೆ ಕೇಳಿಕೊಳ್ಳುತ್ತೇನೆ. ಕೇವಲ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ರಸ್ತೆಗಳನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಜಿಲ್ಲಾ

ಪಂಚಾಯಿತಿ ವ್ಯಾಪ್ತಿಯಲ್ಲಿದ್ದಂತಹ ರಸ್ತೆಗಳ ದುರಸ್ಥಿಗಾಗಿ ಇವತ್ತು ಸರ್ಕಾರ ಪ್ರತಿ ತಾಲ್ಲೂಕಿಗೆ 60 ಲಕ್ಷದಿಂದ 100 ಲಕ್ಷದವರೆಗೆ ಒಂದು ಕಾರ್ಯಯೋಜನೆಯನ್ನು ರೂಪಿಸಿ ಕ್ರಿಯಾಯೋಜನೆಗಳು ಸಂಪೂರ್ಣವಾಗಿ ಸಿದ್ದಗೊಂಡು ಕಾರ್ಯೋನ್ಮುಖವಾಗುವುದಕ್ಕೆ ಇವತ್ತು ನಾವು ಸಿದ್ಧರಾಗಿದ್ದೇವೆ. ಈ ಯೋಜನೆಯು ಅನುಷ್ಠಾನವಾದಾಗ ಈ ರಾಜ್ಯದಲ್ಲಿ 10,000 ಕಿಲೋಮೀಟರ್ ರಸ್ತೆ ಡಾಂಬರೀಕರಣವಾಗುತ್ತದೆ ಎನ್ನುವಂತಹ ವಿಚಾರವನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದು ಕಡಿಮೆಯ ಸಾಧನೆ ಅಲ್ಲ. ಇದನ್ನು ಯಾರೇ ಆಗಿದ್ದರೂ ಮಾಡಲೇಬೇಕಾಗಿತ್ತು; ಇದನ್ನು ಹಿಂದಿನ ಸರ್ಕಾರವಾಗಿದ್ದರೂ ಸಹ ಮಾಡಬೇಕಾಗಿತ್ತು. ಆದರೆ ಈ ಕೆಲಸವನ್ನು ಮಾಡಬೇಕಾಗಿತ್ತು ಎಂಬ ಛಲ ಅಥವಾ ಇಚ್ಛಾಶಕ್ತಿಯ ಒಂದು ಕೊರತೆ ಅವತ್ತು ಇತ್ತು. ಆದರೆ ನಮ್ಮ ಸರ್ಕಾರ ಇದಕ್ಕೆ ಬದ್ಧವಾಗಿದೆ. ಇವತ್ತು ರಾಜ್ಯದಲ್ಲಿ ಈ ವರ್ಷದಲ್ಲಿ 10 ಸಾವಿರ ಕಿಲೋಮೀಟರ್ ಉದ್ದದ ರಸ್ತೆಗೆ ಮರುಡಾಂಬರೀಕರಣ ಮಾಡತಕ್ಕಂತಹ ಕಾರ್ಯಯೋಜನೆಯನ್ನು ಹಾಕಿಕೊಂಡಿದ್ದೇವೆ.

ಈ ನೀರಾವರಿಗೆ ಸಂಬಂಧಪಟ್ಟಂತೆ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಂದ ಸಾವಿರಾರು ಹಾಗೂ ಲಕ್ಷಾಂತರ ಎಕರೆಗೆ ಇವತ್ತು ನೀರಾವರಿ ಸೌಲಭ್ಯವನ್ನು ಹೊಂದುವಂತಹ ಒಂದು ಸನ್ನಿವೇಶದಲ್ಲಿ ಆಲಮಟ್ಟಿ ಹಾಗೂ ನಾರಾಯಣಪುರದಂತಹ ಬೃಹತ್ ಯೋಜನೆಗಳ ಜೊತೆಗೆ ಕೇಂದ್ರ ಸರ್ಕಾರದ ತ್ವರಿತಗತಿಯ ನೀರಾವರಿ ಯೋಜನೆಯ ಕಾರ್ಯಕ್ರಮದ ಅಡಿಯಲ್ಲಿ ಯುಕೆಪಿ ಘಟ್ಟ-1 ಹಂತ-3 ಮಲಪ್ರಭಾ ಹೀರೆಹಳ್ಳ, ಘಟಪ್ರಭಾ ಘಟ್ಟ-3 ಮತ್ತು ಕಾರಂಜಾ ನೀರಾವರಿ ಯೋಜನೆಗಳಿಗೆ 246 ಕೋಟಿ ರೂಪಾಯಿಗಳ ಒಂದು ಕಾರ್ಯಯೋಜನೆಯನ್ನು ಸಿದ್ದಪಡಿಸಿ ಇವತ್ತು ಕಾರ್ಯೋನ್ಮುಖವಾಗುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಇದರ ಜೊತೆಗೆ 2000-2001ನೇ ಸಾಲಿನಲ್ಲಿ ರಾಜ್ಯದಲ್ಲಿ ನೂರಾರು ಸಣ್ಣ ಕೆರೆಗಳ ಹೂಳೆತ್ತುವ ಕಾರ್ಯಕ್ರಮವನ್ನು ಹಾಕಿಕೊಂಡು ಅದನ್ನು ಯಶಸ್ವಿಯಾಗಿ ಮಾಡಬೇಕು ಎನ್ನುವಂತಹ ಒಂದು ಕಾರ್ಯಯೋಜನೆ ಇವತ್ತು ಸರ್ಕಾರದ ಮುಂದೆ ಇದೆ. ಈ ಕಾರ್ಯಕ್ರಮವನ್ನು ಮಾಡುವುದರಿಂದ ಸಣ್ಣ ಕೆರೆಗಳಲ್ಲಿ ಹತ್ತಾರು ವರ್ಷಗಳಿಂದ ತುಂಬಿಕೊಂಡಿರುವಂತಹ ಹೂಳುಗಳನ್ನು ತೆಗೆಯುವುದರಿಂದ ನಾಲ್ಕು ಬಹಳ ಪ್ರಮುಖವಾದಂತಹ ಅನುಕೂಲತೆಗಳು ಇವತ್ತು ರಾಜ್ಯಕ್ಕೆ ಆಗುತ್ತದೆ. ಮೊದಲನೆಯದಾಗಿ ಆ ಒಂದು ಸಣ್ಣಕೆರೆಯ ನೀರಾವರಿಯ ಸಾಮರ್ಥ್ಯ ಅಥವಾ ನೀರಿನ ಸಂಗ್ರಹದ ಪ್ರಮಾಣ ಹೆಚ್ಚಾಗುತ್ತದೆ. ಅಂತರ್‌ಜಲದ ಲಭ್ಯತೆ ಜಾಸ್ತಿಯಾಗುತ್ತದೆ, ಒಳನಾಡು ಮತ್ಸ್ಯೋದ್ಯಮ ಬಹಳ ಸುಧಾರಿಸುತ್ತದೆ ಹಾಗೂ ಅದು ಪರಿಸರದ ಸಮತೋಲನವನ್ನು ಕಾಪಾಡುತ್ತದೆ ಎನ್ನತಕ್ಕಂತಹ ವಿಚಾರವನ್ನು ಹೇಳಿ ಈ ನಾಲ್ಕು ಈ ರಾಜ್ಯಕ್ಕೆ ಆಗಬೇಕಾಗಿರತಕ್ಕಂತಹ ಅನುಕೂಲದ ದೃಷ್ಟಿಯಿಂದ ಈ ಒಂದು ಬಹಳ ಉಪಯುಕ್ತವಾದ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿದೆ ಎಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ವಿದ್ಯುತ್ ರಂಗದಲ್ಲಿಯೂ ಕೂಡ ಒಂದು ವಾಸ್ತವವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಹಿಂದಿನ ಸರ್ಕಾರ ಸರಿಯಾಗಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಮಾಡುತ್ತಿರಲಿಲ್ಲ, ಉತ್ಪಾದನೆಯನ್ನು ಮಾಡುತ್ತಿರಲಿಲ್ಲ, ಸಾಕಷ್ಟು ಕಡೆ ವಿದ್ಯುತ್ ಕಡಿತ ಇತ್ತು ಎನ್ನುವಂತಹ ಮಾತನ್ನು ನಾವು ಹೇಳುತ್ತಿದ್ದರೂ ಕೂಡ ಇವತ್ತು ಅದೇನು ಅಷ್ಟೊಂದು

ಸುಧಾರಣೆಯಾಗಿಲ್ಲ. ನಾನು ಬಹಳ ವಾಸ್ತವಿಕವಾದಂತಹ ವಿಚಾರವನ್ನು ಹೇಳುತ್ತಿದ್ದೇನೆ, ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೂಡ ಇದು ಸುಧಾರಣೆಯಾಗಿಲ್ಲ. ಆದರೆ ಇದನ್ನು ಇದೇ ರೀತಿ ಬಿಡುವುದಕ್ಕೆ ನಮ್ಮ ಸರ್ಕಾರ ಇವತ್ತು ಸಿದ್ಧವಿಲ್ಲ, ಸನ್ಮಾನ್ಯ ಮುಖ್ಯಮಂತ್ರಿಗಳು ಅವರು ಹಿಂದೆ ಉಪಮುಖ್ಯಮಂತ್ರಿಗಳಾಗಿದ್ದಾಗಲೂ ಕೂಡ ವಿದ್ಯುತ್ ಖಾತೆಯನ್ನು ನಿರ್ವಹಿಸಿದಂತಹವರು, ಈಗ ಬಹಳಷ್ಟು ವ್ಯಾಪಕವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಾವಿರಾರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅದರಲ್ಲೂ ಕೇಂದ್ರ ಸರ್ಕಾರದ ಜೊತೆಯಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡು ಸುಮಾರು 10,000 ಕೋಟಿ ರೂಪಾಯಿಗಳ ಆರ್ಥಿಕ ನೆರವನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಂಡು ಈ ವಿದ್ಯುತ್ ವಿತರಣಾ ವ್ಯವಸ್ಥೆ ಹಾಗೂ ವಿದ್ಯುತ್ ಉತ್ಪಾದನಾ ಕಾರ್ಯಕ್ರಮವನ್ನು ವ್ಯಾಪಕವಾಗಿ ಹಮ್ಮಿಕೊಳ್ಳಬೇಕೆನ್ನುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಕೈಗಾ ಅಣುಸ್ಥಾವರದ 220 ಮೆಗಾವಾಟ್ ಉತ್ಪಾದನೆ, ಅದರಲ್ಲಿ ನಮ್ಮ ಪಾಲು 54 ಮೆಗಾವ್ಯಾಟ್, ರಾಯಚೂರು ಶಾಖೋತ್ಪನ್ನ ಕೇಂದ್ರದ 7ನೇ ಘಟಕದ 210 ಮೆಗಾವ್ಯಾಟ್ ವಿದ್ಯುಚ್ಛಕ್ತಿಯ ಉತ್ಪಾದನೆ, ವಿಜಯನಗರದ ಶಾಖೋತ್ಪನ್ನ ಕೇಂದ್ರದ 500 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನಾ ಕೆಲಸ ಇಷ್ಟರಲ್ಲಿಯೇ ಪ್ರಾರಂಭವಾಗುವುದಿದ್ದು ಅದು ಕೂಡ ಪ್ರಾರಂಭವಾಗುತ್ತಿದೆ. ಆದರೆ ಬಿಡದಿ ವಿದ್ಯುತ್ ಉತ್ಪಾದನಾ ಕೇಂದ್ರ ಸುಮಾರು 3 ವರ್ಷಗಳಲ್ಲಿಯೇ ಪ್ರಾರಂಭವಾಗಬೇಕಾಗಿತ್ತು. ಭೂಮಿಯನ್ನೆಲ್ಲ ಸ್ವಾಧೀನಪಡಿಸಿಕೊಂಡು ನಮ್ಮ ವಿದ್ಯುತ್ ಉತ್ಪಾದನಾ ನಿಗಮದವರು ಇನ್ನು ಅಲ್ಲಿ ಕಾರ್ಯಕ್ರಮವನ್ನು ಪ್ರಾರಂಭಮಾಡಿಲ್ಲ. ಆದಷ್ಟು ಬೇಗ ಬಿಡದಿ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಕೂಡ ಪ್ರಾರಂಭ ಮಾಡುತ್ತಾರೆ ಎನ್ನತಕ್ಕಂತಹ ಮಾತನ್ನು ಇಲ್ಲಿ ಹೇಳುತ್ತೇನೆ.

ರಾಜ್ಯದಲ್ಲಿ ಆರೋಗ್ಯದ ಸೇವಾ ಸಂಸ್ಥೆಯನ್ನು ಸುಧಾರಿಸುವ ನಿಟ್ಟಿನಲ್ಲಿ ನಮ್ಮ ಮುಖ್ಯಮಂತ್ರಿಗಳಿಗೆ ಇದು ಒಂದು ಬಹಳ ಕಳಕಳಿ ಇರತಕ್ಕಂತಹ ಕಾರ್ಯಕ್ರಮವಾಗಿದೆ. ಇದಕ್ಕೆ ಡಾ|| ಹೆಚ್. ಸುದರ್ಶನ್‌ರವರ ಅಧ್ಯಕ್ಷತೆಯಲ್ಲಿ ಒಂದು ಉನ್ನತಮಟ್ಟದ ಕಾರ್ಯಾಚರಣೆ ಪಡೆಯ ದಳವನ್ನು ರಚಿಸಿ ಇವತ್ತು ಬಹಳ ಒಳ್ಳೆಯ ಕೆಲಸವನ್ನು ಈ ರಾಜ್ಯಸರ್ಕಾರ ಮಾಡಿದೆ. ಇದೆಲ್ಲಕ್ಕಿಂತ ಮಿಗಿಲಾಗಿ, ನಮ್ಮಲ್ಲಿ ಪ್ರಾದೇಶಿಕ ಅಸಮತೋಲನ ಎನ್ನತಕ್ಕಂತಹ ಮಾತು ಆಗಾಗ ಕೇಳಿಬರುತ್ತಿದೆ. ನಮ್ಮ ಉತ್ತರ ಕರ್ನಾಟಕದ ಅನೇಕ ಜನ ಸಹೋದರರು ಅಭಿವೃದ್ಧಿ ಕಾರ್ಯಗಳು ದಕ್ಷಿಣ ಕರ್ನಾಟಕದ ಭಾಗದಲ್ಲಿ ಹೆಚ್ಚಾಗಿ ಆಗುತ್ತವೆ. ಉತ್ತರ ಕರ್ನಾಟಕದ ಭಾಗವನ್ನು ಕಡೆಗಣಿಸುತ್ತಾರೆಂದು ಆಗಾಗ ಹೇಳುವ ಮಾತನ್ನು ನಾವು ಕೇಳಿದ್ದೇವೆ. ಅದಕ್ಕಾಗಿ ಈ ಪ್ರಾದೇಶಿಕ ಅಸಮತೋಲನವನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಕಟಿಬದ್ಧವಾಗಿರತಕ್ಕಂತಹ ನಮ್ಮ ಸರ್ಕಾರ ಪ್ರೊ|| ಅಲಗ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದು ಅವರ ಶಿಫಾರಸ್ಸಿನಂತೆ ಉತ್ತರ ಕರ್ನಾಟಕದ ಭಾಗಗಳಲ್ಲಿ ಆಗಲೇ ಬೇಕಾಗಿರುವಂತಹ ಅಭಿವೃದ್ಧಿ ಕಾರ್ಯಗಳ ಬಗ್ಗೆ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆಂಬ ಮಾತನ್ನು ಕೂಡ ನಾನು ಹೇಳುತ್ತೇನೆ.

4.00 ಪಿ.ಎಂ

ಇನ್ನು ಬೆಂಗಳೂರು ನಗರದ ಅಭಿವೃದ್ಧಿಯ ಬಗ್ಗೆ ನಮ್ಮ ಮುಖ್ಯಮಂತ್ರಿಗಳಾದಿಯಾಗಿ

ನಮ್ಮ ಸರ್ಕಾರ ತೋರಿಸುತ್ತಿರತಕ್ಕಂತಹ ಒಂದು ಆಸಕ್ತಿಯನ್ನು ಕೆಲವರು ಅದನ್ನು ತಮ್ಮ ಟೀಕಾಸ್ತ್ರವಾಗಿ ಬಳಸಿಕೊಂಡಿದ್ದಾರೆ. ಬೆಂಗಳೂರು ಅಭಿವೃದ್ಧಿಯ ಕಡೆಗೆ ಗಮನಕೊಡುವುದಲ್ಲದೆ ಇವರು ಇನ್ನೇನು ಮಾಡುತ್ತಿದ್ದಾರೆ ಎನ್ನತಕ್ಕಂತಹ ಮಾತುಗಳನ್ನು ಹೇಳುತ್ತಿದ್ದಾರೆ. ಆದರೆ ನಾನು ಈ ಸಭೆಯ ಮುಂದೆ ಒಂದು ಪ್ರಶ್ನೆಯನ್ನು ಇಡುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ನಗರ ನಮ್ಮದಲ್ಲವೇ, ಬೆಂಗಳೂರು ಈ ರಾಜ್ಯದ ರಾಜಧಾನಿ ಅಲ್ಲವೇ, ಬೆಂಗಳೂರು ನಗರವನ್ನು ಸರಿಪಡಿಸತಕ್ಕಂತಹ, ಅದನ್ನು ಅಡ್ಡಾದಿಡ್ಡಿಯಾಗಿ ಬೆಳೆಯುವುದಕ್ಕೆ ಬಿಡದೆ ಇರತಕ್ಕಂತಹ ಕರ್ತವ್ಯ ಅದು ಕೇವಲ ಮಹಾನಗರಪಾಲಿಕೆಯ ಮೇಲೆ ಅಲ್ಲ, ರಾಜ್ಯಸರ್ಕಾರದ ಮೇಲೆ ಅಲ್ಲ ಅಥವಾ ಈ ಸದನದ ಸದಸ್ಯರುಗಳ ಮೇಲೆಯೇ ಅಲ್ಲ, ಅದು ಇಡೀ ರಾಜ್ಯದ ಜನತೆಯ ಮೇಲೆ ಬಿದ್ದಿರತಕ್ಕಂತಹ ದೊಡ್ಡ ಜವಾಬ್ದಾರಿಯಾಗಿದೆ. ಹಿಂದೆ ಈ ಪಟ್ಟಣದ ಯೋಜನೆಯನ್ನು ರೂಪಿಸುವಾಗ, ನನಗೆ ಆಶ್ಚರ್ಯವಾಗುತ್ತದೆ, ಮಲ್ಲೇಶ್ವರಂ, ಬಸವನಗುಡಿ, ವಿಶ್ವೇಶ್ವರಪುರ, ಚಾಮರಾಜಪೇಟೆ ಇಂತಹ ಬಡಾವಣೆಗಳನ್ನು ರಚಿಸಿರುವಂತಹ ಅವತ್ತಿನ ಇಂಜಿನಿಯರುಗಳಿಗೆ ಅಷ್ಟೊಂದು ದೂರದೃಷ್ಟಿ ಇತ್ತು. ಏಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಂತರ ಆದಂತಹ ಬಡಾವಣೆಗಳು ಜಯನಗರವೊಂದನ್ನು ಬಿಟ್ಟರೆ ಇನ್ಯಾವ ಬಡಾವಣೆಗಳು ಕೂಡ ಇವತ್ತು ಮಲ್ಲೇಶ್ವರಂ ಆಗಲಿ, ಚಾಮರಾಜಪೇಟೆ, ಬಸವನಗುಡಿಯಾಗಲಿ, ವ್ಯವಸ್ಥಿತವಾಗಿ, ಯೋಜನಾಬದ್ಧವಾಗಿ ಈ ಬಡಾವಣೆಗಳು ಬೆಳೆಯುವುದಕ್ಕೆ ಹಾಗೂ ನಿರ್ಮಾಣವಾಗುವುದಕ್ಕೆ ಸಾಧ್ಯವಾಗಲಿಲ್ಲ. ಅವತ್ತು ಅವರಿಗಿದ್ದಂತಹ ದೂರದೃಷ್ಟಿ, ನಂತರ ಬಂದಂತಹ ಇತ್ತೀಚಿನ ನಮ್ಮ ಯೋಜಕರಿಗೆ ಇರಲಿಲ್ಲ ಎಂಬ ಮಾತನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಈಗ 50 ವರ್ಷಗಳಿಂದ ಇದು ಬೆಳೆಯುತ್ತಿತ್ತು, ಈ ಊರು ಯಾವುದೋ ಒಂದು ರೀತಿಯಲ್ಲಿ ಬೆಳೆಯುತ್ತಿದೆ, ಈ ಊರಿಗೆ ಏನು ಒಂದು ಪ್ರಾಮುಖ್ಯತೆ ಇದೆ, ಇಡೀ ರಾಷ್ಟ್ರದಲ್ಲೇ ಅಲ್ಲ, ಇಡೀ ವಿಶ್ವದಲ್ಲಿ ಬೆಂಗಳೂರು ಒಂದು ಪ್ರಾಧ್ಯಾನ್ಯತೆಯನ್ನು ಪಡೆಯುವಂತಹ ಊರಾಗುತ್ತದೆ ಎಂದು ಊಹೆ ಮಾಡಬೇಕಾಗಿತ್ತು. ಆ ಊಹೆಯ ಕೊರತೆ, ಇವತ್ತು ಯೋಜನೆಗಳು ಬಹಳಷ್ಟು ಕುಂಠಿತವಾಗಿದೆ, ನಾವು ವಿಜಯನಗರ ಬಡಾವಣೆಗೆ ಹೋಗಲಿ, ಆರ್‌ಪಿಸಿ, ಕೋರಮಂಗಲ ಬಡಾವಣೆಗಳಿಗೆ ಹೋಗಿ ನೋಡಿದರೆ ಇದೇನು ಎಷ್ಟು ಶತಮಾನಗಳ ಹಿಂದೆ ರಚಿಸಿದಂತಹ ಬಡಾವಣೆಗಳೆಂದು ನಾವು ಆಶ್ಚರ್ಯಪಡಬೇಕಾಗುತ್ತದೆ. ಅಷ್ಟು ಚಿಕ್ಕ ಚಿಕ್ಕ ರಸ್ತೆಗಳು, ತಿರುವು ರಸ್ತೆಗಳು, ಅಡ್ಡ ರಸ್ತೆಗಳು, ಇಷ್ಟೆಲ್ಲಾ ಇರುವಂಥದ್ದು, ಇದಕ್ಕಾಗಿ ಇವತ್ತು ವಿಶ್ವದ ಗಮನವನ್ನು ಸೆಳೆದಿರುವಂಥಾದ್ದು ಈ ಬೆಂಗಳೂರು ನಗರ. ಇವತ್ತು ಪ್ರಪಂಚದ ಪ್ರಬಲವಾದ ರಾಷ್ಟ್ರದ ಪ್ರಬಲ ಅಧ್ಯಕ್ಷರಾದ ಶ್ರೀ ಬಿಲ್ ಕ್ಲಿಂಟನ್‌ರವರು ನಿನ್ನೆಯ ದಿನ ದೆಹಲಿಯ ಸೆಂಟ್ರಲ್‌ಹಾಲ್‌ನಲ್ಲಿ ನಮ್ಮ ಭಾಷಣವನ್ನು ಮಾಡುತ್ತಾ ಬೆಂಗಳೂರಿನ ಬಗ್ಗೆ ಒಂದು ಪ್ರಸ್ತಾಪವನ್ನು ಮಾಡಿದ್ದಾರೆ. ಅಂದರೆ ಇಡೀ ವಿಶ್ವದಲ್ಲಿ ಬೆಂಗಳೂರಿನ ಬಗ್ಗೆ ಎಷ್ಟು ಮಹತ್ವವಿದೆ, ಎಂಬುದನ್ನು ನಾವು ಯೋಜನೆ ಮಾಡಬೇಕು. ಅದಕ್ಕಾಗಿ ಇವತ್ತಿನ ನಮ್ಮ ಸರ್ಕಾರ ಬೆಂಗಳೂರು ನಗರವನ್ನು ಒಂದು ಅಚ್ಚುಕಟ್ಟಾದ ನಗರವನ್ನಾಗಿ ಮಾರ್ಪಾಟು ಮಾಡುವುದಕ್ಕೆ, ಮಾಲಿನ್ಯ ರಹಿತವಾದಂತದ್ದು, ಸಂಚಾರ ಯೋಗ್ಯವಾಗಿರತಕ್ಕಂಥದ್ದು, ಕುಡಿಯುವ ನೀರಿನ ವ್ಯವಸ್ಥೆಯಾಗಬೇಕಾಗಿರುವಂಥದ್ದು, ಇಲ್ಲಿಗೆ ಯಾರೇ

ಬಂದು ನೋಡಿದರೂ ಸಹ ಇದೊಂದು ಸುಂದರವಾದ ನಗರವೆನ್ನುವ ಕಲ್ಪನೆ ಬರುವಂತಹ ರೀತಿಯಲ್ಲಿ ಈ ಬೆಂಗಳೂರು ನಗರವನ್ನು ನಿರ್ಮಾಣ ಮಾಡಬೇಕು ಎಂದು ಒಂದು ಕಾರ್ಯಯೋಜನೆಯನ್ನು ಹಾಕಿಕೊಂಡು ಹೊರಟಿರುವುದಕ್ಕಾಗಿ, ಇದರ ಬಗ್ಗೆ ಯಾರೂ ಕೂಡ ಅದನ್ನು ಒಂದು ಟೀಕೆಯ ವಸ್ತುವಾಗಿ ಬಳಸಿಕೊಳ್ಳುವುದು ಬೇಕಾಗಿಲ್ಲ. ಇದು ಎಲ್ಲರ ಕರ್ತವ್ಯವಾಗಿದೆ, ಈಗಾಗಲೇ ಹಿಂದಿನ ಸರ್ಕಾರ ಸಿರ್ಸಿ ಸರ್ಕಲ್‌ನಿಂದ ಕೆ.ಆರ್. ಮಾರ್ಕೆಟ್‌ವರೆಗೂ ಒಂದು ಫ್ಲೈಓವರನ್ನು ಮಾಡಿದ್ದು, ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇದನ್ನು ಬಹಳ ಹಿಂದೆಯೇ ಕಾಂಗ್ರೆಸ್ ಸರ್ಕಾರವಾಗಲಿ, ಅಥವಾ ಹಿಂದಿನ ಸರ್ಕಾರವಾಗಲಿ, ಮಾಡಬೇಕಾಗಿದ್ದಂತಹ ಕೆಲಸ, ಕಳೆದ ವರ್ಷ ಈ ಕೆಲಸವಾಯಿತು. ಆದರೆ ಅದರ ಉಪಯೋಗ ಎಷ್ಟರಮಟ್ಟಿಗೆ ಇವತ್ತು ಆಗಬೇಕಾಗಿತ್ತೋ ಅಷ್ಟು ಆಗುತ್ತಿಲ್ಲ. ಕಾರಣವೇನೆಂದರೆ, ಮತ್ತೇ ವಾಹನಗಳ ದಟ್ಟಣೆಯನ್ನು ಕೆಳಗಡೆ ನಾವು ನೋಡುತ್ತಿದ್ದೇವೆ. ಅದಕ್ಕಾಗಿ ನಾನು ಸರ್ಕಾರವನ್ನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಮೈಸೂರು ರಸ್ತೆಯ ರಾಜರಾಜೇಶ್ವರಿ ನಗರದ ಗೇಟಿನಿಂದ ಹಿಡಿದು ಹಡ್ಸನ್ ಸರ್ಕಲ್‌ವರೆಗೂ ಆ ಒಂದು ಫ್ಲೈಓವರನ್ನು ಮುಂದುವರಿಸಿದರೆ ಒಳ್ಳೆಯದು. ಅಲ್ಲಿಂದ ಬರುವಂತಹ ಬಹಳಷ್ಟು ವಾಹನಗಳು ಆ ಫ್ಲೈಓವರ್‌ನ ಬಳಕೆಯಿಂದ ಪ್ರಯಾಣ ಮಾಡಿ, ಕೆಳಗಡೆ ಸಂಚಾರ ಮಾಡತಕ್ಕಂತಹ ವಾಹನಗಳಿಗೆ ಸುಲಲಿತವಾದಂತಹ ಮಾರ್ಗ ಕಲ್ಪನೆಯಾಗುತ್ತದೆಂಬ ಮಾತನ್ನು ಹೇಳುತ್ತಿದ್ದೇನೆ. ಇವತ್ತು ಸರ್ಕಾರ ಬೆಂಗಳೂರು ನಗರವನ್ನು ಒಂದು ಸಮರ್ಥವಾಗಿ ಯೋಜನಾಬದ್ಧವಾಗಿ, ಅಡ್ಡಾದಿಡ್ಡಿಯಾಗಿ ಬೆಳೆಯುವುದಕ್ಕೆ ಬಿಡದೆ ಈ ರಾಷ್ಟ್ರದ ಮತ್ತು ವಿಶ್ವದ ಅತಿ ಸುಂದರ ನಗರವನ್ನಾಗಿ ಮಾಡುವುದಕ್ಕೆ ಹೊರಟಿರುವುದಕ್ಕೆ ನಾವು ನಿಜವಾಗಲೂ ಅಭಿನಂದನೆಯನ್ನು ಹೇಳಬೇಕಾಗುತ್ತದೆ.

ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡಬೇಕೆನ್ನುವ ಸಂದರ್ಭದಲ್ಲಿ ನಮ್ಮ ಸ್ನೇಹಿತರು ಹರಿಜನ ಗಿರಿಜನರ ಬಗ್ಗೆ ಸರ್ಕಾರ ಎಷ್ಟರಮಟ್ಟಿಗೆ ಕಾಳಜಿಯನ್ನು ಇಟ್ಟುಕೊಂಡಿದೆ ಎಂಬುದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಈಗಾಗಲೇ ಇದರ ಬಗ್ಗೆ ಸದನದಲ್ಲಿ ಸಾಕಷ್ಟು ವ್ಯಾಪಕವಾಗಿ ಚರ್ಚೆಯಾಗಿದೆ, ಈ ಬಗ್ಗೆ ಸರ್ಕಾರವು ಸಹ ಉತ್ತರವನ್ನು ಕೊಟ್ಟಿದೆ. ಸನ್ಮಾನ್ಯ ಗೃಹ ಸಚಿವರು ಕೂಡ ಸಮರ್ಥವಾಗಿ ಉತ್ತರವನ್ನು ಕೊಟ್ಟಿದ್ದಾರೆ, ಈ ರಾಜ್ಯದಲ್ಲಿ ಯಾವ ಮೂಲೆಯಲ್ಲಾಗಲಿ, ಹರಿಜನ ಗಿರಿಜನರ ಮೇಲೆ ಯಾವುದೇ ರೀತಿಯ ದೌರ್ಜನ್ಯವಾದಾಗ ಸರ್ಕಾರ ಕಿಂಚಿತ್ತು ಕೂಡ ಹಿಂದುಮುಂದು ನೋಡದೆ ಬಹಳ ಕಠಿಣವಾದ ಕ್ರಮಗಳನ್ನು ತೆಗೆದುಕೊಂಡು ಅದನ್ನು ನಿಗ್ರಹ ಮಾಡುತ್ತದೆ ಎಂಬ ಮಾತನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇಷ್ಟೇ ಅಲ್ಲದೆ ಎಲ್ಲೆಲ್ಲಿ ಕೋಮುಗಲಭೆಗಳು, ಸಣ್ಣಪುಟ್ಟ ಗಲಭೆಗಳು ಆದರೂ ಕೂಡ ಸರ್ಕಾರ ಇವತ್ತು ಸಮರ್ಥವಾಗಿ ನಿಗ್ರಹಿಸಿ ಈ ರಾಜ್ಯದಲ್ಲಿ ಎಲ್ಲರೂ ಕೂಡ ಸಮಾನತೆಯನ್ನು ಕಂಡುಕೊಂಡು ಅಣ್ಣತಮ್ಮಂದಿರಂತೆ ಬಾಳುವುದಕ್ಕೂ, ಶಾಂತಿ ಮತ್ತು ಸುವ್ಯವಸ್ಥೆಯ ಪಾಲನೆ ಯಾಗುವುದಕ್ಕೂ ಕೂಡ ಸರ್ಕಾರ ಇವತ್ತು ಕಂಕಣಬದ್ಧವಾಗಿ ಕಾರ್ಯೋನ್ಮುಖವಾಗಿದೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಇವತ್ತು ನನ್ನ ಭಾಷಣದ ಕೊನೆಯ ಘಟ್ಟಕ್ಕೆ ಬರುತ್ತಾ, ಮಾನ್ಯ ರಾಜ್ಯಪಾಲರ

ಭಾಷಣದ 32ನೇ ಪ್ಯಾರದಲ್ಲಿರತಕ್ಕಂತಹ ಕೆಲವು ವಿಚಾರಗಳನ್ನು ಮತ್ತೆ ಈ ಸಭೆಯ ಮುಂದೆ ಓದುವುದಕ್ಕೆ ನಾನು ಇಷ್ಟಪಡುತ್ತೇನೆ. ಪ್ರಜೆಗಳಿಗೂ ಸರ್ಕಾರಕ್ಕೂ ಅಥವಾ ಸರ್ಕಾರದ ಪರಿಕಲ್ಪನೆ ಎನ್ನತಕ್ಕಂಥಾದ್ದು ಹಿಂದೆ ಏನಿತ್ತು ಅಥವಾ ಇನ್ನು ಮುಂದೆ ನಾವು ಸರ್ಕಾರ ಏನು ಎಂದು ಹೇಳಿ, ನಾವು ಜನರ ಮತ್ತು ಸರ್ಕಾರದ ಸಂಬಂಧ ಯಾವ ರೀತಿ ರೂಢಿಸಿಕೊಂಡು ಹೋಗಬೇಕೆನ್ನುವ ದಿಕ್ಕಿನಲ್ಲಿ ಹೇಳಿರತಕ್ಕಂತಹ ಮಾತು ಇದು. "ಕಳೆದ ಶತಮಾನದಲ್ಲಿದ್ದ ಆಡಳಿತದ ಪರಿಕಲ್ಪನೆ ಕ್ರಮೇಣ ಬದಲಾಗುತ್ತಾ ಬಂದಿದೆ. ಲಕ್ಷಾಂತರ ಜನರ ಭವಿಷ್ಯವನ್ನು ಗಣ್ಯವರ್ಗವು ನಿಯಂತ್ರಿಸುವ ಕಾಲ ಹೋಯಿತು. ಹಿಂದೆ ಸರ್ಕಾರವು ಒಂದು ನಿಯಂತ್ರಣ ಸಂಸ್ಥೆಯಾಗಿ ಕೆಲಸ ಮಾಡುತ್ತಿತ್ತು. ಈ ಸಹಸ್ರಮಾನದ ಪ್ರಾರಂಭದಲ್ಲಿ ಸರ್ಕಾರವು ಬದಲಾವಣೆ ಮತ್ತು ಪ್ರಗತಿಯ ಚಾಲಕ ಶಕ್ತಿಯೆಂಬ ವ್ಯಾಖ್ಯಾನ ನೀಡಲಾಗುತ್ತಿದೆ. ಈಗ ಸರ್ಕಾರವು ಸರ್ವ ಸಹಭಾಗಿತ್ವದ ವ್ಯವಸ್ಥೆಯಾಗಿ ರೂಪುಗೊಂಡಿದೆ ಮತ್ತು ಸಾಮಾನ್ಯ ಪ್ರಜೆಗೂ ಇಲ್ಲಿ ಧ್ವನಿಯಿದೆ. ಆದಕಾರಣ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ತರಬೇಕಾದ ತೀವ್ರ ಅಗತ್ಯವಿದೆ. ನನ್ನ ಸರ್ಕಾರವು ಆಡಳಿತದಲ್ಲಿ ಭ್ರಷ್ಟಾಚಾರ ಮತ್ತು ಅದಕ್ಷತೆಯನ್ನು ಹೋಗಲಾಡಿಸಿ ಜನಪರ ಆಡಳಿತವನ್ನು ನೀಡಲು ಪ್ರಯತ್ನಿಸುತ್ತದೆ. ಜನರು ಸಹಿಷ್ಣುತೆ, ಶಾಂತಿ ಮತ್ತು ಸಾಮರಸ್ಯದ ವಾತಾವರಣದಲ್ಲಿ ಬಾಳುವ ಸಂಪದ್ಭರಿತ ಕರ್ನಾಟಕದ ಬೆಳವಣಿಗೆಗೆ ಈ ಎಲ್ಲಾ ಕ್ರಮಗಳು ಸಹಕಾರಿಯಾಗಲಿವೆ ಎಂಬ ನಂಬಿಕೆ ನನಗಿದೆ" ಎಂಬ ಮಾತನ್ನು ಇವತ್ತು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದರಲ್ಲೇ ಅರ್ಥವಾಗುತ್ತದೆ, ಸರ್ಕಾರ ಇವತ್ತು ಯಾವ ದಿಕ್ಕಿನಲ್ಲಿ ಆಡಳಿತವನ್ನು ನಡೆಸಿಕೊಂಡು ಹೋಗಬೇಕು, ಜನತೆಗೂ ಮತ್ತು ಸರ್ಕಾರಕ್ಕೂ ಯಾವ ರೀತಿಯ ಭಾಂದವ್ಯ ಉಂಟಾಗಬೇಕೆನ್ನುವಂತಹ ಒಂದು ಸ್ಪಷ್ಟ ಚಿತ್ರವನ್ನು ನಾವು ಇಲ್ಲಿ ಕಾಣುತ್ತಿದ್ದೇವೆ. ಇವತ್ತು ನಮ್ಮ ಸರ್ಕಾರ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರ ನೇತೃತ್ವದಲ್ಲಿ, ಅವರ ಎಲ್ಲಾ ಅನುಭವಿ ಹಾಗೂ ಹಿರಿಯ ಸಚಿವರ ಸದಸ್ಯರುಗಳ ಜೊತೆಯಲ್ಲಿ ಬಹಳ ಯಶಸ್ವಿಯಾಗಿ ಕೆಲಸವನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ನಾವು ಮುಂದಿನ ವಾರ ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡತಕ್ಕಂತಹ ಒಂದು ಆಯವ್ಯಯವನ್ನು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ. ಮುಂದಿನ ವಾರ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯವನ್ನು ಮಂಡಿಸುತ್ತಾರೆ. ದಿನಾಂಕ 15-3-2000ದಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿಸುವ ವಿಧಾನಸಭೆಯ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆಂದು ಈ ಸೂಚನೆಯನ್ನು ಮಂಡಿಸಿ ಅದರ ಬಗ್ಗೆ ಕೆಲವಾರು ವಿಚಾರಗಳನ್ನು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಸನ್ಮಾನ್ಯ ಅಧ್ಯಕ್ಷರಿಗೂ ಹಾಗೂ ಉಪಾಧ್ಯಕ್ಷರಿಗೂ ವಂದಿಸಿ ಈ ಸೂಚನೆಯನ್ನು ಈ ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

+ ಶ್ರೀ ಬಿ.ಆರ್. ಯಾವಗಲ್(ನರಗುಂದ) : ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ರಾಜ್ಯಪಾಲರು ಮಾಡಿದಂತಹ ಭಾಷಣಕ್ಕೆ ನಾನು ನನ್ನ ಅನುಮೋದನೆಯನ್ನು ವ್ಯಕ್ತ ಮಾಡುತ್ತಾ, ಅವರು ಕೊಟ್ಟಂತಹ

ರೇಖಾ ವಿಚಾರಗಳ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣ, ವಿಶೇಷವಾಗಿ ಮಹಿಳಾ ರಾಜ್ಯಪಾಲರ ಭಾಷಣ ಕರ್ನಾಟಕದ ವಿಧಾನಸಭೆಗೆ ಹೊಸದು. ಅವರು ಒಬ್ಬ ಮಹಿಳೆಯಾಗಿ ಮೊಟ್ಟಮೊದಲನೆಯದಾಗಿ ವಿಧಾನಸಭೆಯಲ್ಲಿ ಮಾಡುವ ರಾಜ್ಯಪಾಲರ ಭಾಷಣವನ್ನು ಮಾಡಿದ್ದಾರೆ. ಅವರದು ಸ್ವಂತ ಭಾಷೆ ಬೇರೆಯಾದರೂ ಅತ್ಯಂತ ಕಡಿಮೆ ಅವಧಿಯಲ್ಲಿ ಶುದ್ಧವಾದ ಕನ್ನಡದಲ್ಲಿ ನಾವು ಆ ಭಾಷೆಯ ಬಗ್ಗೆ ಅಭಿಮಾನ ಪಡುವ ರೀತಿಯಲ್ಲಿ ಅವರು ಭಾಷಣವನ್ನು ಮಾಡಿದ್ದಾರಲ್ಲದೆ ಬಹುತೇಕ ಈ ವಿಧಾನಮಂಡಲದ ಇತಿಹಾಸದಲ್ಲಿ ಕನ್ನಡದಲ್ಲಿ ಭಾಷಣ ಮಾಡಿದಂತಹ ರಾಜ್ಯಪಾಲರು ಅವರಾಗಿದ್ದಾರೆ. ಇನ್ನೊಂದು ವಿಚಾರ ಅವರು ಏನು ಮಾಡಿದ್ದಾರೆಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಈ ಸದನದಲ್ಲಿ ಹಿಂದೆ ರಾಜ್ಯಪಾಲರ ಭಾಷಣವನ್ನು ನಾವೆಲ್ಲ ಕೇಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ, ಅದು ಗದ್ದಲದಲ್ಲಿ ಮುಕ್ತಾಯವಾಗುತ್ತಿತ್ತು, ಇಲ್ಲವೆ ರಾಜ್ಯಪಾಲರು ತಮ್ಮ ಭಾಷಣವನ್ನು ಮೊಟಕುಗೊಳಿಸಿಬಿಡುತ್ತಿದ್ದರು. ನಾನು ನೋಡಿದ ಹಾಗೆ ನನ್ನ ಅನುಭವದಲ್ಲಿ ಈ ಭಾರಿ ರಾಜ್ಯಪಾಲರ ಭಾಷಣವನ್ನು ವಿಧಾನಸಭೆಯ ಎಲ್ಲಾ ಪಕ್ಷದವರು ಬಹಳ ಶಾಂತಿಯಿಂದ ಕೇಳಿದ್ದಾರೆ. ಬಹುತೇಕವಾಗಿ ಪ್ರತಿಸಾರಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಘೋಷಣೆ ಕೂಗುತ್ತಾ ಹೊರಗೆ ಹೋಗುತ್ತಿದ್ದರು; ಆ ಪ್ರದೇಶದಿಂದ ಬಂದವರು ಸಹ ಸುಮ್ಮನಿದ್ದರು. ಈ ಸಹಸ್ರಮಾನಕ್ಕೆ ಮೊದಲೇ ರಾಜ್ಯಪಾಲರು ಹೊಸದಾಗಿ ಸರ್ಕಾರ ಬಂದಾಗ ಭಾಷಣವನ್ನು ಮಾಡಿದ್ದರು. ಹೀಗಾಗಿ ನಮ್ಮ ನೆನಪಿನಾಳದಲ್ಲಿ ನಾವು ಇರುವವರೆಗೂ ಈ ಭಾಷಣದ ನೆನಪು ಉಳಿಯುತ್ತದೆನ್ನುವ ಭಾವನೆಯನ್ನು ನಾನು ವ್ಯಕ್ತ ಮಾಡುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣ ಅದೊಂದು ಸಂವಿಧಾನದ ಪ್ರಕಾರ ಮಾಡಲೇಬೇಕಾದ ಕ್ರಿಯೆ. ಆದರೆ ಅದರ ಹಿಂದೆ ಒಂದು ಉದ್ದಿಶ್ಯ ಇದೆಯೆಂದು ಹೇಳಿ ಹಲವಾರು ವರ್ಷಗಳ ಅನುಭವ ಇಲ್ಲಿರಬಹುದು, ಅದರ ತಾಯಿತಂದೆಯಾದ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿದೆ. ಇವತ್ತು ನಾವು ಹಲವಾರು ಭಾಷಣಗಳನ್ನು ನೋಡಿದ್ದೇವೆ. ಮಾನ್ಯ ರಾಜ್ಯಪಾಲರ ಭಾಷಣ ಬಹುತೇಕ ಆ ಸರ್ಕಾರದ ಆಡಳಿತದ ವರದಿಯಂತೆ ಇದ್ದದನ್ನು ಸಹಿತ ನಾವು ನೋಡಿದ್ದೇವೆ. ಆದರೆ ಈ ಸಾರಿ ಆದಂತಹ ರಾಜ್ಯಪಾಲರ ಭಾಷಣ, ಈ ರಾಜ್ಯದಲ್ಲಿ ಬರುವ ಒಂದು ವರ್ಷದವರೆಗೆ ಮತ್ತು ತದನಂತರ ಮುಂದಿನ ಐದು ವರ್ಷಗಳಿರಬಹುದು ಅಥವಾ ಅದಕ್ಕಿಂತ ಕಡಿಮೆ ವರ್ಷಗಳಿರಬಹುದು; ಆ ಚಿತ್ರಣದ ಒಂದು ಸ್ಥೂಲವಾದ ನೋಟವನ್ನು ರಾಜ್ಯಪಾಲರ ಭಾಷಣ ನೀಡಿದೆಯೆಂದು ಹೇಳುತ್ತೇನೆ. ಇವತ್ತು ರಾಜ್ಯಪಾಲರ ಭಾಷಣವನ್ನು ಸೂಚಿಸಿದಂತಹ ಮಾನ್ಯ ಸಿ.ಎಂ. ಲಿಂಗಪ್ಪನವರು ಹೇಳಿದ ಹಾಗೆ ಬಹಳ ಚೆನ್ನಾಗಿ ವಿವರಿಸಿದರು. ಸರ್ಕಾರದ ಕಲ್ಪನೆ ಇವತ್ತು ಬದಲಾವಣೆಯಾಗಿದೆಯೆಂದು ಹೇಳಿದರು. ಸರ್ಕಾರದ ಪರಿಕಲ್ಪನೆ ಬಹಳಷ್ಟು ಎಜಲೂಷನ್ ಆಗಿದೆ ಬೆಳಕು ಬಂದಿದೆ. ಇವತ್ತಿನ ಚಿತ್ರಣದ ಅಗತ್ಯ ಏನಿದೆ ಅಂದರೆ ಸರ್ಕಾರ ಇವತ್ತು ಕೆಲವೇ ಕೆಲವು ಜನರನ್ನು ನಿಯಂತ್ರಣ ಮಾಡುವ ಸಂಸ್ಥೆಯಲ್ಲವೆಂದು ರಾಜ್ಯಪಾಲರು ಹೇಳಿದ್ದಾರೆ. ಇದು ನೂರಕ್ಕೆ ನೂರರಷ್ಟು ಸತ್ಯ. ಇವತ್ತು ಸರ್ಕಾರ ಯಾರದೇ ಸರ್ಕಾರವಾಗಿಲ್ಲ. ಇದು ವಿಶೇಷವಾಗಿ ಇವತ್ತಿನ ಕಲ್ಪನೆಯಿದೆ, ಕನ್ಸೆಪ್ಟ್ ಇದೆ ಈ ಪ್ರಜಾತಂತ್ರದ ವ್ಯವಸ್ಥೆಯೊಳಗಡೆ ಸಾಮಾನ್ಯ ಪ್ರಜೆಯೂ ಸಹಿತ ಅದರಲ್ಲಿ ಅವನ ಪಾತ್ರವಿದೆ, ಅವನ ಧ್ವನಿಯಿದೆ, ಅದನ್ನು ಅರಿತುಕೊಂಡು ಸರ್ಕಾರ ನಡೆಯಬೇಕೆನ್ನತಕ್ಕ, ಸರ್ಕಾರ ಎನ್ನುವುದು ಎಲ್ಲಾ

ಸರ್ವಾಂತರ್ಯಾಮಿ, ಎಲ್ಲರೂ ಮಾಡುತ್ತಾರೆಂದು ಎನ್ನುವುದಕ್ಕಿಂತ ಮಾಡುವಂತಹ ಕ್ರಿಯೆಗೆ ಚಾಲನೆ ನೀಡುವಂತಹ ಅತೀ ಶೀಘ್ರವಾಗಿ ಫಲಿತಾಂಶಗಳನ್ನು ಒದಗಿಸಿಕೊಳ್ಳುವಂತಹ ಒಂದು ಏಜೆನ್ಸಿಯಾಗಿದೆ. ಒಂದು ಕ್ಯಾಟಲಿಸ್ಟ್ ಆಗಿ ಅದು ಆಗಬೇಕೆನ್ನುವ ಒಂದು ಕಲ್ಪನೆ ಏನಿದೆ, ಆಸೆ ಇದೆ, ನಿರೀಕ್ಷೆಯಿದೆ, ಜನಗಳ ನಿರೀಕ್ಷೆ ಏನಿದೆ ಆ ರೀತಿಯಾಗಿ ಇವತ್ತು ಬದಲಾವಣೆಯಾಗಬೇಕಾಗಿದೆ. ಆಗಿದೆ ಕೆಲವುಮಟ್ಟಿಗೆ. ಅವೊಂದು ಕಲ್ಪನೆಯನ್ನು ಸಹಿತ, ಅವೊಂದು ವಿಚಾರವನ್ನು ಸಹಿತ, ರಾಜ್ಯಪಾಲರ ಭಾಷಣದ ಮೂಲಕ ಇವತ್ತು ಸರ್ಕಾರ ಹೇಳಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅದಕ್ಕಾಗಿ ಇವುಗಳನ್ನೆಲ್ಲ ಇಟ್ಟುಕೊಂಡು ಮುಂದಿನ ವರ್ಷ ಮತ್ತು ವರ್ಷಗಳ ಅಗತ್ಯಗಳನ್ನು ಧೋರಣೆಗಳನ್ನು ಇಟ್ಟುಕೊಂಡು ಸರ್ಕಾರ ಹಲವಾರು ಕ್ಷೇತ್ರಗಳಲ್ಲಿ ತನ್ನ ಒತ್ತನ್ನು ತನ್ನ ದೃಢಸ್ಥೈರ್ಯವನ್ನು ನಿರ್ಧಾರ ಮಾಡಿಕೊಂಡಿದೆ, ಅದರ ಬಗ್ಗೆ ಸೂಕ್ಷ್ಮ ಸುಳಿವುಗಳನ್ನು ಕೊಟ್ಟಿದೆ. ಹೊಸ ಸರ್ಕಾರ ಅಧಿಕಾರಕ್ಕೆ ಬಂದಾಗ ಅಕ್ಟೋಬರ್ ತಿಂಗಳಿನಲ್ಲಿ ರಾಜ್ಯಪಾಲರು ಏನು ಭಾಷಣ ಮಾಡಿದ್ದಾರೆ ಅವೊತ್ತು ಸಹಿತ ಆ ಬಗ್ಗೆ ಸರ್ಕಾರ ತನ್ನ ವಿಚಾರವನ್ನು ಸ್ವಲ್ಪಮಟ್ಟಿಗೆ ಹೇಳಿಕೊಂಡಿದೆ. ಅದನ್ನು ಇವತ್ತು ಇನ್ನು ಹೆಚ್ಚು ಬೆಳಸಿ ಅದನ್ನು ಡೆವಲಪ್ ಮಾಡಿ ಅಭಿವೃದ್ಧಿಗೊಳಿಸಿ ಸ್ಪಷ್ಟವಾಗಿ ತನ್ನ ಕಾರ್ಯಕ್ರಮವೇನು, ತನ್ನ ಗುರಿಯೇನು ಎನ್ನುವ ಒಂದು ವಿಚಾರವನ್ನು ನಮ್ಮ ಎದುರಿಗೆ ಇಟ್ಟಿದ್ದಾರೆ. ಹಾಗಾಗಿ ಸಂಪೂರ್ಣವಾಗಿ ರಾಜ್ಯಪಾಲರು ಹೇಳಿದ ವಿಚಾರಗಳು ನಾಲ್ಕಾರು ವಿಭಾಗಗಳನ್ನು ಅದು ಹಂಚಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಮೊಟ್ಟಮೊದಲನೆಯದಾಗಿ ಇವತ್ತು ಇನ್‌ಫರ್ಮೇಷನ್ ಟೆಕ್ನಾಲಜಿ, ಐ.ಟಿ. ಏರಿಯಾ ಮತ್ತು ಅದಕ್ಕೆ ಪೂರಕವಾಗಿ ಕೈಗಾರಿಕೆಗಳು, ಪವರ್‌ಸೆಕ್ಟಾರ್, ಇನ್ನೊಂದು ಕೃಷಿ ಮತ್ತು ಇರಿಗೇಷನ್. ಮೂರನೆಯದಾಗಿ ಪಂಚಾಯತ್ ರಾಜ್ ಮತ್ತು ರೂರಲ್ ಡೆವಲಪ್‌ಮೆಂಟ್, ಇನ್ನೊಂದು ಸಮಾಜಕ್ಕೆ ಬಹಳ ಅಗತ್ಯವಾದಂತಹ ಗ್ರಾಮೀಣ ಅಭಿವೃದ್ಧಿಯಲ್ಲಿಯೇ ಬರುವಂತಹ ಹೌಸಿಂಗ್ ಸೆಕ್ಟಾರ್‌ನಲ್ಲಿ ಹೌಸಿಂಗ್ ಮತ್ತು ಕುಡಿಯುವ ನೀರಿನ ಯೋಜನೆಗಳ ಬಗ್ಗೆ ಮತ್ತು ರಸ್ತೆ ಇನ್‌ಫ್ರಾಸ್ಟ್ರಕ್ಚರ್‌ಗೆ ಹೆಚ್ಚು ಒತ್ತನ್ನು ಕೊಡುವ ಬಗ್ಗೆ ಈ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದೆ ಎಂದು ಹೇಳುತ್ತೇನೆ. ಸ್ಪಷ್ಟ ಚಿತ್ರಣವನ್ನು ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನೋಡುತ್ತಿದ್ದೇವೆ. ಇವತ್ತು ನಾವು ಹೊಸ ಯುಗದ ಅಗತ್ಯ, ಮಾಹಿತಿ ತಂತ್ರಜ್ಞಾನ. ಅತ್ಯಂತ ಅಗತ್ಯವಾದಂತಹ ಒಂದು ವಲಯ. ಜೊತೆಗೆ ಈ ಮಟ್ಟಕ್ಕೆ ತಿಳುವಳಿಕೆ ಹೋಗಿದೆ ಅಂದರೆ, ನಾವೇನು ಕಲಿತಿದ್ದೇವೆ ನಾವು ಪಡೆದಂತಹ ವಿದ್ಯೆಯಾಗಲೀ, ಡಿಗ್ರಿಗಳಾಗಲೀ ಇವತ್ತು ಯಾವುದಕ್ಕೂ ಮಹತ್ವ ಉಳಿದಿಲ್ಲ. ಇವು ಆ ಕಾಲದ ನನ್ನ ಕಾಲದ ಅಗತ್ಯಗಳಾಗಿದ್ದವು. ಈ ಕಾಲಕ್ಕೆ ನಾವೇನಾದರೂ ಸುಶಿಕ್ಷತರು ಅನ್ನಿಸಿಕೊಳ್ಳಬೇಕಾದರೆ ನಮಗೆ ಮಾಹಿತಿ ತಂತ್ರಜ್ಞಾನ ಬೇಕೇ ಬೇಕು. ಮಾಹಿತಿ ತಂತ್ರಜ್ಞಾನ ಇಲ್ಲದೇ ಇದ್ದರೆ ಆತ ಒಬ್ಬ ಅಶಿಕ್ಷಿತ ಆಗುತ್ತಾನೆ ಎನ್ನುವ ಮಟ್ಟಿಗೆ ವಿಚಾರ ಬೆಳೆದಿದೆ. ವಾಸ್ತವವಾಗಿ ಇವತ್ತು ಒಂದು ಪರಿಸ್ಥಿತಿ ಇದೆ. ಕಳೆದ ಐದು ವರ್ಷಗಳಲ್ಲಿ ನಾನು ಈ ಸದನದಲ್ಲಿ ಇದ್ದೆ. ಅವತ್ತು ವಿಚಾರಗಳು ಆ ತರಹ ಇದ್ದವು. ಆ ಕಡೆ ಇವತ್ತು ಏನು ಆಡಳಿತ ಮಾಡುವಂಥ ಪಕ್ಷ ವಿರೋಧಪಕ್ಷವಾಗಿ ಕುಳಿತಿದ್ದಾಗ ಹೈದರಾಬಾದ್‌ನಲ್ಲಿ ಇಲ್ಲಿಂದ ಐ.ಟಿ. ಇಂಡಸ್ಟ್ರೀಸ್ ಹೋಗುತ್ತಿವೆ, ಮೈಕ್ರೋ ಸಾಫ್ಟ್‌ವೇರ್ ಮತ್ತೊಂದು ಹೋಯಿತು, ಅಲ್ಲಿ ದೊಡ್ಡದಾದಂಥ ಟೆಕ್ನಾಲಜಿ ಪಾರ್ಕ್

ಮಾಡಿದರು, ಮಾನ್ಯ ಚಂದ್ರಬಾಬು ನಾಯಿಡು ಅವರು ಎಲ್ಲವನ್ನು ತೆಗೆದುಕೊಂಡು ಹೋಗಿ ಅಲ್ಲಿ ಕೂಡಿ ಹಾಕಿಕೊಳ್ಳುತ್ತಿದ್ದಾರೆ ಎನ್ನುವಂಥ ದೊಡ್ಡ ಕೂಗು ಇತ್ತು. ಅದು ಕೆಲಮಟ್ಟಿಗೆ ನಿಜವೂ ಹೌದು. ಆ ರೀತಿಯ ಒಂದು ವಾತಾವರಣ ನಿರ್ಮಾಣವಾಗಿತ್ತು. ಆ ರೀತಿಯಲ್ಲಿ ಕೆಲಸವೂ ನಡೆಯುತ್ತಿತ್ತು. ಆಗ ಒಂದು ನಿರುತ್ಸಾಹದಾಯಕವಾದಂಥ ವಾತಾವರಣ ಇದ್ದಂಥ ಪರಿಸ್ಥಿತಿಯಲ್ಲಿ ನಾವು ಎಷ್ಟೇ ವೇಗವಾಗಿ ಹೋಗಬೇಕೆಂದು ಪ್ರಯತ್ನ ಮಾಡಿದರೂ ಬಹುತೇಕ ಆ ಹಿಂದಿನ ಸರ್ಕಾರಕ್ಕೆ ಸಾಧ್ಯವಾಗಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಅದರ ಅರ್ಥ ನಾನು ಬೆಂಗಳೂರು ಅಥವಾ ಕರ್ನಾಟಕ ಇನ್‌ಫಾರ್ಮೆಷನ್ ಟೆಕ್ನಾಲಜಿಯಲ್ಲಿ ಬಹಳ ಹಿಂದುಳಿದಿದೆ ಎಂದು ಹೇಳಿದರೆ ತಪ್ಪಾದೀತು. ಇನ್ನೂ ನಾವು ಮುಂಚೂಣಿಯಲ್ಲಿದ್ದೇವೆ. ಆದರೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹಮಂತ್ರಿ) : ಒಂದು ನಿಮಿಷ ಮಾನ್ಯ ಅಧ್ಯಕ್ಷರೇ, ನಿನ್ನೆ ಮಾನ್ಯ ಬಿಲ್ ಕ್ಲಿಂಟನ್‌ರವರು ಪಾರ್ಲಿಮೆಂಟಿನ ಜಂಟಿ ಸದನದಲ್ಲಿ ಸದಸ್ಯರ ಮುಂದೆ ಮಾತನಾಡುವಾಗ ಅವರೇ ಹೇಳಿದ್ದಾರೆ, ಏನೆಂದರೆ ಬೆಂಗಳೂರು ಇನ್‌ಫಾರ್ಮೇಷನ್ ಟೆಕ್ನಾಲಜಿಯಲ್ಲಿ ಮುಂಚೂಣಿಯಲ್ಲಿದೆ ಮತ್ತು ಇದರ ನೇತೃತ್ವ ಜಗತ್ತಿಗೇ ಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಮತ್ತು ಅಲ್ಲಿಯ ಮಾರ್ಕೆಟ್‌ಗೆ ಸಾಕಷ್ಟು ಅವಕಾಶ ಇದೆ ಎನ್ನುವ ಮಾತನ್ನು ಅವರೇ ಒಪ್ಪಿಕೊಂಡಿದ್ದಾರೆ. ಅವರು ನಮ್ಮ ಬೆಂಗಳೂರಿಗೆ ವಿಸಿಟ್ ಕೊಡದೇ ಹೋದರೂ ಕೂಡ ಬೆಂಗಳೂರಿನಲ್ಲಿ, ಕರ್ನಾಟಕದಲ್ಲಿ ಇನ್‌ಫಾರ್ಮೆಷನ್ ಟೆಕ್ನಾಲಜಿಯಲ್ಲಿ ಆದಂಥ ಪ್ರಗತಿ ಬಗ್ಗೆ ಅವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಶ್ರೀ ಬಿ.ಆರ್. ಯಾವಗಲ್ : ನಾನು ಈ ಮಾತನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಇವತ್ತು ನಾವು ಮಾಹಿತಿ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿದ್ದೇವೆ ಎನ್ನುವ ಮಾತನ್ನು ನಾನೂ ಕೂಡ ಹೇಳಿದ್ದೇನೆ. ಆದರೆ ಇವತ್ತು ಬರೇ ಅಮೆರಿಕಾ ಅಧ್ಯಕ್ಷರಾದ ಶ್ರೀ ಬಿಲ್‌ಕ್ಲಿಂಟನ್ ಅವರು ಹೇಳಿದರು ಅಂತ ಹೇಳಿ ನಾವು ಏನಾದರೂ ಕುಳಿತರೆ ಅದು ಬಹುತೇಕ ಮಾನ್ಯ ಚಂದ್ರಬಾಬು ನಾಯಿಡು ಅವರು ನಮಗೆ ಗೊತ್ತಿಲ್ಲದ ಹಾಗೆ ಅದೆಲ್ಲವನ್ನು ತೆಗೆದುಕೊಂಡು ಹೋಗಬಹುದೋ ಏನೋ ಎನ್ನುವಂಥ ಭಾವನೆ ಇದೆ. ಅದನ್ನೇ ನಾನು ಹೇಳುವುದಕ್ಕೆ ಬಯಸುತ್ತಿರುವುದು. ನಮಗೆ ಅಗತ್ಯತೆ ಇತ್ತು, ಅನಿವಾರ್ಯತೆ ಇತ್ತು. ಅಂತಹ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಮಾನ್ಯ ಎಸ್.ಎಂ. ಕೃಷ್ಣ ಅವರ ನೇತೃತ್ವದಲ್ಲಿ ಮಂತ್ರಿಮಂಡಲ ರಚನೆ ಮಾಡುವಂಥ ಜವಾಬ್ದಾರಿ ಅವರಿಗೆ ಸಿಕ್ಕಿದೆ. ಬಹುತೇಕ ಬೇಕಾದಂಥ ವಿದ್ವತ್ ಆಗಲಿ, ಹಿನ್ನೆಲೆಯಾಗಲಿ, ಟ್ರೈನಿಂಗ್ ಆಗಲಿ, ಆ ಮುಖಂಡತ್ವವಾಗಲಿ ಅವರ ಮಂತ್ರಿಮಂಡಲಕ್ಕೆ ಇದ್ದುದ್ದರಿಂದ ಸಮರ್ಥವಾಗಿ ಎದುರಿಸಲಿಕ್ಕೆ ಸಾಧ್ಯವಾದೀತು ಎನ್ನುವ ಆಸೆ ನನಗಿದೆ. ಕಳೆದ ಆರು ತಿಂಗಳಲ್ಲಿ ಈ ಕೆಲಸವನ್ನು ಬಹಳ ಸಮರ್ಥವಾಗಿ ನಿರ್ವಹಣೆ ಮಾಡಿದ್ದಾರೆ. ಇವತ್ತು ಆ ಭಾವನೆ ಏನಿತ್ತು, ಬಿಲ್ ಕ್ಲಿಂಟನ್ ವರೆಗೆ ಹೋಗಿ ಮುಟ್ಟುವಂಥ ಸಾಧನೆ ಏನಿದೆ, ಇದು ಕಡಿಮೆ ಸಾಧನೆಯಲ್ಲ. ಕಾರಣಾಂತರಗಳಿಂದ ಅದು ಬೆಂಗಳೂರಿಗೆ ಬರುವುದು ತಪ್ಪಿರಬಹುದು. ಆದರೆ ಇದರಿಂದ ಬೆಂಗಳೂರಿನ ಪ್ರಾಮುಖ್ಯತೆ

ಕಡಿಮೆಯಾಗಿದೆಯೆಂದಲ್ಲ. ಅದಕ್ಕೆ ಕಾರಣ ಇವರುಗಳು ಇದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದಕ್ಕಾಗಿ ಬಹುತೇಕವಾಗಿ ಅವರು ಇಲ್ಲದೇ ಇದ್ದರೆ ಯಾವರೀತಿ ವೇಗವಿರುತ್ತಿತ್ತು ಎನ್ನುವ ಒಂದು ಶಂಕೆ ನಮಗೆ ಉದ್ಭವವಾಗುತ್ತದೆ. ನಾನು ಅವರನ್ನು ಮುಖಸ್ತುತಿ ಮಾಡಬೇಕು ಎಂದಲ್ಲ. ಇವತ್ತು ಹಲವಾರು ರಂಗಗಳಲ್ಲಿ ಆಗಿರುವ ಸಾಧನೆ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನೋಡುತ್ತಿದ್ದೇವೆ. ಪ್ರತಿಯೊಂದು ಇಲಾಖೆಯಲ್ಲಿ ಕಂಪ್ಯೂಟರೀಕರಣ ಮಾಡಬೇಕಾಗುತ್ತದೆ. ಹಲವಾರು ಇನ್‌ಫಾರ್ಮೇಷನ್ ಸೆಂಟರ್‌ಗಳನ್ನು ತೆಗೆಯಬೇಕೆಂದು ಹೇಳುತ್ತೇವೆ, ಅವರಿಗೆಲ್ಲ ಟ್ರೈನಿಂಗ್ ಕೊಡಬೇಕೆಂದು ಹೇಳುತ್ತೇವೆ, ಅದಕ್ಕೆ ಬೇಕಾದ ಕೈಗಾರಿಕೆಗಳಿಗೆ ಅನುಕೂಲ ಮಾಡಿಕೊಡಬೇಕು, ಪವರ್ ಕೊಡಬೇಕು ಎಂದೆಲ್ಲ ಹೇಳುತ್ತೇವೆ, ಆ ಕೈಗಾರಿಕೆಗಳಿಗೆ ಬೇಕಾದಂಥ ಲೈನ್‌ಗಳನ್ನು ಹಾಕಿ ದೂರದೂರದವರೆಗೆ ಅದನ್ನು ಹಾಕಿ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಅದಕ್ಕಾಗಿ ಪ್ರತಿ ವಿಭಾಗದಲ್ಲಿ ತಾವೇನು ಮಾಡುತ್ತಿದ್ದೀರಿ, ಸರ್ಕಾರ ಏನು ಮಾಡುತ್ತಿದೆ ಅದರ ವೇಗವನ್ನು ಹೆಚ್ಚಿಸಬೇಕು. ತಾವು ಇವತ್ತು ದೊಡ್ಡ ಕಾರ್ಯಪಡೆ-ಟಾಸ್ಕ್‌ಫೋರ್ಸನ್ನು ಮಾಡಿದ್ದೀರಿ. ಬಹಳಷ್ಟು ಹಣವನ್ನು ಬೆಂಗಳೂರಿನ ಇಂಡಸ್ಟ್ರಿಗಳನ್ನು ಬೆಳೆಸುವ ರೀತಿಯಿಂದ ತಾವು ಖರ್ಚುಮಾಡುತ್ತಿದ್ದೀರಿ. ಇದು ಅತ್ಯಂತ ಸ್ವಾಗತಾರ್ಹವಾದ ಕೆಲಸ. ಇದರಲ್ಲಿ ಬಹಳ ಪ್ರಸಿದ್ಧರಾದ ವ್ಯಕ್ತಿಗಳು ಇದ್ದಾರೆ. ಅದು ಮಾನ್ಯ ನಾರಾಯಣಮೂರ್ತಿಯವರು ಇರಬಹುದು, ಮಾನ್ಯ ಪ್ರೇಮ್‌ಜಿಯವರು ಆಗಿರಬಹುದು ಅಥವಾ ಮಾನ್ಯ ಗುರುರಾಜ ದೇಶಪಾಂಡೆಯವರು ಇರಬಹುದು. ಈ ರಾಜ್ಯ ಇಡೀ ಜಗತ್ತಿನಲ್ಲಿ ಅಭಿವೃದ್ಧಿ ಹೊಂದಿದ ರಾಜ್ಯವೆಂದು ಹೇಳಿದರೆ ತಪ್ಪಾಗಲಾರದು. ಅದು ವಿಶೇಷವಾಗಿ ಬೆಂಗಳೂರಿನಂಥ ನಗರದಲ್ಲಿ, ದೊಡ್ಡ ದೊಡ್ಡ ಮಹಾವಿದ್ಯಾಲಯಗಳು ಇರುವಂಥ, ಕಾಲೇಜುಗಳು ಇರುವಂಥ ನಗರಗಳಲ್ಲಿ ಬಹುತೇಕ ಮನೆಗಳಲ್ಲಿ ಸಾಫ್ಟ್‌ವೇರ್ ಇಂಜಿನಿಯರುಗಳು ಹೊರಗಡೆಗೆ ಹೋಗುತ್ತಿದ್ದಾರೆ. ಅದು ಅಮೆರಿಕಾ ಇರಬಹುದು, ವಿದೇಶ ಇರಬಹುದು, ಅಥವಾ ಇಲ್ಲೇ ಇರಬಹುದು. ಸಾಫ್ಟ್‌ವೇರ್‌ನಲ್ಲಿ ನಾವು ಮುಂಚೂಣಿಯಲ್ಲಿ ಹೋಗುತ್ತಿದ್ದೇವೆ. ಆ ರೀತಿಯಲ್ಲಿ ನಾವು ಇನ್ನಷ್ಟು ಬೆಳೆಸುವಂಥ ರೀತಿಯಲ್ಲಿ ಪ್ರಯತ್ನ ಮಾಡಬೇಕು. ಇವತ್ತು ಅವರೆಲ್ಲರ ಬಗ್ಗೆ, ಟಾಸ್ಕ್‌ಫೋರ್ಸ್ ಬಗ್ಗೆ ನನಗೆ ಗೌರವ ಇದೆ. ಆದರೆ ಇದು ಬರೇ ಬೆಂಗಳೂರಿಗೆ ಮಾತ್ರ ಸೀಮಿತವಾಗಬಾರದು. ಬೆಂಗಳೂರಿಗೆ ಮಾತ್ರ ಇದರ ಲಾಭ ತಟ್ಟಬಾರದು. ಬರೇ 80-90 ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡವರಿಗೆ ಬುದ್ಧಿವಂತರಿಗೆ ಮಾತ್ರ ಇದು ತಲುಪಬಾರದು. ನನ್ನ ಉದ್ದೇಶ ಅವರಿಗೆ ಕೊಡಬಾರದು ಎಂದಲ್ಲ. ಆದರೆ ಇದೆಲ್ಲ ಅವರೇ ಮಾಡುವಂಥ ಕೆಲಸ ಅಲ್ಲ. ಆ ಸಾಫ್ಟ್‌ವೇರ್ ಆಗಲಿ ಅಥವಾ ಹಾರ್ಡ್‌ವೇರ್ ಟೆಕ್ನಾಲಜಿಯಾಗಲಿ, ಅಲಾಯ್ಡ್ ಇಂಡಸ್ಟ್ರಿಗಳಾಗಲಿ, ಅದು ಬರೇ ಅಷ್ಟಕ್ಕೆ ಮಾತ್ರ ಸೀಮಿತವಾಗಿಲ್ಲ. ಅಲ್ಲಿ ಸ್ವಲ್ಪಮಟ್ಟಿಗೆ ಟ್ರೈನಿಂಗ್ ಇಲ್ಲದೇ ಇರುವವರು ಇರಬಹುದು, ಬೇರೆ ಬೇರೆ ಮೂಲಗಳಿಂದ ವೃತ್ತಿಪರ ಶಿಕ್ಷಣ ಪಡೆದವರು ಇರಬಹುದು. ಅವರಿಗೂ ಕೂಡ ಅಲ್ಲಿ ಕೆಲಸ ಇದೆ. ಅದಕ್ಕಾಗಿ ಇವತ್ತು ತಮ್ಮ ಕಾರ್ಯಯೋಜನೆ ಅದು ಬರೇ ಬೆಂಗಳೂರು, ಮೈಸೂರು, ತುಮಕೂರಿಗೆ ಮಾತ್ರ ಸೀಮಿತವಾಗದೆ

ಪ್ರತಿ ತಾಲ್ಲೂಕಿಗೂ ಹೋಗಬೇಕು. ಹಳ್ಳಿಯಲ್ಲಿರುವ ಸಾಮಾನ್ಯ ವ್ಯಕ್ತಿಗೂ ಅದರ ಲಾಭ ತಟ್ಟಬೇಕು. ಒಬ್ಬ ಎಸ್.ಎಸ್.ಎಲ್.ಸಿ. ಓದಿದವ ಇರಬಹುದು, ವ್ಯಾಪಕವಾಗಿ ಇದು ಎಲ್ಲ ಕಡೆ ಹೋಗುವಂತೆ ಕಾರ್ಯ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಇದರಿಂದ ಮಾತ್ರ ಈ ಇನ್‌ಫಾರ್ಮೇಷನ್ ಟೆಕ್ನಾಲಜಿಯ ವರ ಏನಿದೆ, ಅದನ್ನು ನಾವೆಲ್ಲರೂ ಕೂಡ ಪಡೆಯುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಇದು ಬೆಂಗಳೂರಿನಂಥ ದೊಡ್ಡ ನಗರಗಳಿಗೆ ಮಾತ್ರ ಸೀಮಿತವಾಗುತ್ತದೆ. ಹಾಗೆ ಆಗಬಾರದು. ಕೆಲವು ಬುದ್ಧಿವಂತರಿಗೆ, ಕೆಲವು ಪ್ರದೇಶಗಳಿಗೆ ಮಾತ್ರ ಇದು ಸೀಮಿತವಾಗಬಾರದು. ಕೆಲವರು ಮಾತ್ರ ಹೊರಗಡೆ ಹೋಗುವುದಕ್ಕೆ, ಹೆಚ್ಚು ಸಂಪಾದನೆ ಮಾಡುವುದಕ್ಕೆ ಮಾತ್ರ ಅಳವಡಿಸಿಕೊಳ್ಳುವಂಥ ಪರಿಸ್ಥಿತಿಯನ್ನು ತಾವು ತರಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡಬಯಸುತ್ತೇನೆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆಯನ್ನು ಇನ್ನು ಎರಡು ಮೂರು ತಿಂಗಳಲ್ಲಿ ಕರೆದು, ಜಗತ್ತಿನ ಅತ್ಯಂತ ಬೃಹತ್ ಕೈಗಾರಿಕೆಗಳವರನ್ನು ಆಮಂತ್ರಿಸಿ ಚರ್ಚಿಸುವುದು ಬಹಳ ಒಳ್ಳೆಯ ಕೆಲಸ. ಈ ದಿಸೆಯಲ್ಲಿ ಅವರು ಖಂಡಿತವಾಗಿಯೂ ಮುಂದುವರೆಯಲಿ ಎಂದು ಹೇಳುತ್ತಾ, ಇನ್ನು ಕೃಷಿ ಬಗ್ಗೆ ಅಷ್ಟೇ ಪ್ರಾಶಸ್ತ್ಯದ ಕ್ರಮವನ್ನು ಈ ಸರ್ಕಾರ ತೆಗೆದುಕೊಂಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಒಂದು ಕಡೆ ಕೈಗಾರಿಕಾ ರಂಗದಲ್ಲಿ ಅಥವಾ ವ್ಯಾಪಾರೀಕರಣದ ಶೃಂಗಸಭೆಯಲ್ಲಿ ಭಾಗವಹಿಸಿ ಬಂದಂಥ ಮಾನ್ಯ ಮುಖ್ಯಮಂತ್ರಿಗಳು ಸುಮಾರು ಎರಡು-ಮೂರು ದಿವಸಗಳಲ್ಲೇ ಕೃಷಿ ಬಗ್ಗೆಯೂ ಅಷ್ಟೇ ತಮಗೆ ಕಳಕಳಿಯಿದೆ ಎನ್ನುವುದನ್ನು ತೋರಿಸಲಿಕ್ಕೆ ಮತ್ತು ಕೊನೆಯ ಹಂತದ ಪ್ರಯತ್ನವನ್ನು ಮಾಡುವುದಕ್ಕೆ, ಈ ಕ್ಷೇತ್ರದಲ್ಲಿ ಕೊನೆಯ ಹಂತದವರೆಗೆ ಹೋಗಿ ಅಭಿವೃದ್ಧಿ ಮಾಡಲು ತಾವು ಸಿದ್ಧರಿದ್ದೇವೆ ಎಂದು ಆ ಕಡೆಗೆ ತಮಗೆ ಇದ್ದಂಥ ಕಳಕಳಿಯನ್ನು ತೋರಿಸಿಕೊಳ್ಳಲಿಕ್ಕೆ ಅಥವಾ ವ್ಯಕ್ತಮಾಡುವುದಕ್ಕೆ ಪಟ್ಟಂಥ ಪ್ರಯತ್ನವೇ ಧಾರವಾಡದಲ್ಲಿ ನಡೆದ ಕೃಷಿ ಶೃಂಗಸಭೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾವೆಲ್ಲರೂ ಅದರಲ್ಲಿ ಭಾಗವಹಿಸಿದ್ದೆವು. ಆವತ್ತು ಭಾಗವಹಿಸಿದಂಥ ಅನೇಕ ರಾಷ್ಟ್ರದ ಹಿರಿಯ ಕೃಷಿತಜ್ಞರು ಇರಬಹುದು, ಅಥವಾ ಆರ್ಥಿಕ ತಜ್ಞರಾಗಿರಬಹುದು, ಅಥವಾ ಹೈನುಗಾರಿಕೆ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನು ಮಾಡಿದಂಥ ಕುರಿಯನ್ ಆಗಿರಬಹುದು, ಸ್ವಾಮಿನಾಥನ್ ಇರಬಹುದು, ಪ್ಲಾನಿಂಗ್ ಕಮೀಷನ್ ಸದಸ್ಯರಾಗಿ ಬಹಳ ವರ್ಷಗಳ ಕಾಲ ಈ ದೇಶಕ್ಕೆ ಒಂದು ಗತಿಯನ್ನು ತೋರಿಸಿದಂಥ ಹನುಮಂತರಾವ್ ಆಗಿರಬಹುದು, ಅವರುಗಳು ತಮ್ಮ ವಿಚಾರಗಳನ್ನು ವ್ಯಕ್ತ ಮಾಡಿದ್ದೇ ಅಲ್ಲದೆ, ಉನ್ನತಮಟ್ಟದಲ್ಲಿ ಚರ್ಚೆ ಮಾಡುವಂಥ ವ್ಯವಸ್ಥೆಯೂ ಆಗಿತ್ತು. ಇಷ್ಟೇ ಅಲ್ಲದೆ ಅವತ್ತಿನ ಸಭೆಯಲ್ಲಿ ಈ ಕೃಷಿಗೆ ಬರೇ ಏನೋ ಕೆಲವು ಸಬ್ಸಿಡಿ ಕೊಟ್ಟೆವು, ಏನೋ ಕೆಲವು ಬೀಜಗಳನ್ನು ಕೊಟ್ಟೆವು, ಎಲ್ಲೋ ಅಲ್ಲಿಷ್ಟು ಇಲ್ಲಿಷ್ಟು ನುಸಿ ಪೀಡೆಯಾಯಿತು, ನಮ್ಮ ಕಡೆ ಉಳ್ಳಾಗಡ್ಡಿ, ಈರುಳ್ಳಿಗೆ ರೋಗ ಬಂತು, ಅಥವಾ ತೊಗರಿಬೇಳೆ ನಾಶವಾಗಿ ಹೋಯಿತು ಎಂಬುದರ ಬಗ್ಗೆ ಮಾತ್ರ ಚರ್ಚೆ ಮಾಡಿದಂಥ ಸಭೆ ಅದಾಗಿರಲಿಲ್ಲ. ಒಂದು ದೂರಗಾಮಿ ದೃಷ್ಟಿಯನ್ನು ಇಟ್ಟುಕೊಂಡು ಅದಕ್ಕೆ ಏನು ಮಾಡಬೇಕೆಂದು ಯೋಚನೆ ಮಾಡುವುದಕ್ಕೆ ಆ ತಜ್ಞರಿಗೆ ವಹಿಸಿಕೊಡುವಂಥ ಕೃಷಿ ಆಯೋಗ ಇರಬಹುದು...

4.30 ಪಿ.ಎಂ

ಮತ್ತೆ ಕೆಲವು ಭಾಗಗಳಲ್ಲಿ ಇದೇನು ರೀಜನಲ್ ಡಿಸ್‌ಪಾರಿಟಿ ಎಂದು ಪದೇ ಪದೇ ಬರುತ್ತಾ ಇತ್ತು ಅದನ್ನೂ ಸಹಿತ ಮಾಡುವಂತಾದ್ದಾಗಿರಬಹುದು; ಒಂದು ಹಂತಕ್ಕೆ ಹೋಗಿ ಶ್ರೀ ಕುರಿಯನ್‌ರವರು ಆ ಸಭೆಯಲ್ಲೇ, ಆ ಕೋರಂನಲ್ಲೇ, ಆ ಪ್ಲಾಟ್‌ಫಾರಂನಲ್ಲೇ ಹೈನಿಗೆ ಮತ್ತು ಕೃಷಿ ಕ್ಷೇತ್ರಕ್ಕೆ ತೋಟಗಾರಿಕೆ ಇರಬಹುದು ಅಥವಾ ಬೇರೆ ಕ್ಷೇತ್ರ ಇರಬಹುದು, ಇವುಗಳಿಗೆ ಸುಮಾರು 5-6 ನೂರು ಕೋಟಿ ಹಣವನ್ನು ನಾವು ಎನ್.ಡಿ.ಡಿ.ಬಿ.ಯಿಂದ ನಾವು ಒದಗಿಸಿಕೊಡುತ್ತೇವೆ ಎಂಬ ಆಶ್ವಾಸನೆ ಕೊಡತಕ್ಕ ದೊಡ್ಡ ಕೆಲಸವನ್ನು ಮಾಡಿದರು. ಹೀಗಾಗಿ ಅದು ಕೂಡಲೇ ಕಾರ್ಯಗತ ಆಗಬೇಕು. ಬರೀ ಘೋಷಣೆಗಳಾಗಿ ಉಳಿಯಬಾರದು. ಈ ದೇಶದ ಮತ್ತು ರಾಜ್ಯದ ರೈತರಿಗೆ ಇರಬಹುದು. ಅವರು ಇವತ್ತು ಕೊನೆಯ ಹಂತಕ್ಕೆ ಬಂದುಬಿಟ್ಟಿದ್ದಾರೆ. ಇವತ್ತು ದಿವಾಳಿ ಆಗಿದ್ದಾರೆ ಎಂದು ಹೇಳಿದರೂ ತಪ್ಪಿಲ್ಲ. ಇವತ್ತು ಅವನು ಬೆಳೆಯುವ ಎಲ್ಲಾ ಶಕ್ತಿಯನ್ನು ಕಳೆದುಕೊಂಡಿದ್ದಾನೆ. ಸಾಲಗಾರರಾಗಿದ್ದಾರೆ, ಅವರು ಸಾಲಗಳನ್ನು ಕಟ್ಟಲಿಕ್ಕೆ ಸಾಧ್ಯವಾಗುತ್ತಾ ಇಲ್ಲ. ಮುಂದೆ ಕೃಷಿಯನ್ನು ಮಾಡಲಿಕ್ಕೂ ಇವತ್ತು ಪರಿಸ್ಥಿತಿ ಇಲ್ಲ. ಹೀಗಾಗಿ ಇದರ ಬಗ್ಗೆ ಒಂದು ಸಮಗ್ರವಾದ ಕಾರ್ಯ ಯೋಜನೆಯನ್ನು ಆದಷ್ಟುಬೇಗ ಹಾಕಿಕೊಳ್ಳಬೇಕು. ಅಷ್ಟೇ ಅಲ್ಲ, ತಾವು ಇವತ್ತು ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ನಮ್ಮನ್ನು ಇಟ್ಟಿದ್ದೀರಿ. ಅದು ಕೃಷಿಕ ವರ್ಗ ಮತ್ತು ಹಳ್ಳಿಗಾಡಿನಲ್ಲಿ ಇರತಕ್ಕ ಕೂಲಿಕಾರರು ನಮಗೆ, ನಿಮಗೆ ಪೂರಕವಾಗಿ ಕೆಲಸ ಮಾಡುವಂಥಾದ್ದು. ಇದು ಬರೀ ನಮ್ಮನ್ನು ಒಂದನೇ ಹಂತದ ಲಿಬರಲೈಸೇಷನ್ ಫಸ್ಟ್ ಫೇಸ್‌ನಲ್ಲಿ ಆಯಿತು. ಫಸ್ಟ್ ಫೇಸ್‌ನಲ್ಲಿ ನಾವೆಲ್ಲಾ ದಿವಾಳಿಯಾಗಿದ್ದೇವೆ. ಇನ್ನು 2ನೇ ಹಂತದ ಯೋಜನೆಯಲ್ಲಿ ಏನಾದರೂ ಈ ಕೃಷಿವರ್ಗವನ್ನು ಹಾಗೆಯೇ ಬಿಟ್ಟುಬಿಟ್ಟರೆ ಬಹುತೇಕ ಯಾರೂ ಕೃಷಿ ಮಾಡಲಿಕ್ಕೆ ಸಾಧ್ಯವಿಲ್ಲ. ಕೃಷಿಯಿಂದ ಜೀವನ ಮಾಡಲಿಕ್ಕೆ ಸಾಧ್ಯವಿಲ್ಲ. ಇವತ್ತು ಬೆಳೆದಂಥ ಮಾಲಿಗೆ ಯೋಗ್ಯ ಬೆಲೆ ಸಿಕ್ಕುತ್ತಾ ಇಲ್ಲ. ಕನಿಷ್ಟ ಹಾಕಿದಂಥ ಬಂಡವಾಳ ಸಹಿತ ಬರುವುದಕ್ಕೆ ಸಾಧ್ಯವಿಲ್ಲ. ಇವತ್ತು ನಾವು ಇಂಡಸ್ಟ್ರಿಯಲ್ ಬಗ್ಗೆ ಹೇಳುವಾಗ ಕೈಗಾರಿಕೆಗಳ ಉದ್ಯಮಿಗಳು ಏನಿದ್ದಾರೆ ಅವರೂ ಕೂಡ ಈ ಉದಾರೀಕರಣ ಬಂದಾಗ ಬಹಳ ಸ್ವಾಗತ ಮಾಡುತ್ತಿದ್ದರು. ದೇಶಕ್ಕೆ ಬಂಡವಾಳ ಬರಲಿ, ನಾವೆಲ್ಲಾ ದೊಡ್ಡವರಾಗುತ್ತೇವೆ ಜಾಗತೀಕರಣ ಆಗುತ್ತೇವೆ. ದೊಡ್ಡ ದೊಡ್ಡ ಇಂಡಸ್ಟ್ರೀಗಳ ಜೊತೆ ನಾವು ಭಾಗವಹಿಸುತ್ತೇವೆ. ಇವತ್ತು ಅನೇಕ ಇಂಡಸ್ಟ್ರೀಗಳು ಬಂದ್ ಆಗಿವೆ. ದೊಡ್ಡ ದೊಡ್ಡ ಕೈಗಾರಿಕೆಗಳು ಈ ದೇಶದಲ್ಲಿ ಮಲ್ಟಿನ್ಯಾಷನಲ್ ಮಟ್ಟದಲ್ಲಿದ್ದ ಇಂಡಸ್ಟ್ರೀಗಳು ಸಹಿತ ಕ್ಲೋಸ್ ಆಗುವ ಹಂತಕ್ಕೆ ಬರುತ್ತಾ ಇವೆ. ಇವತ್ತು ಅವರೇ ನಮಗೆ ಕೇಳುತ್ತಿದ್ದಾರೆ. ನಮಗೆ ಸರಿಸಮನಾದಂಥ ಆಟದ ಮೈದಾನ ಬೇಕು. ಇನ್ನು ಒಬ್ಬ ಸಾಮಾನ್ಯ ರೈತ, ಹಿಡುವಳಿದಾರ, ಅದರ ಮೇಲೆ ಜೀವನ ಮಾಡುವಂಥ ವ್ಯಕ್ತಿಗೆ ಯಾವ ಮಟ್ಟದ ಮೈದಾನವಿದೆ. ಇವತ್ತು ತಾವು ಹೇಳಿದ್ದೀರಿ. ಮಾಡ್ರನೈಸೇಷನ್ ಬೇಕೆಂದು ಹೇಳುತ್ತೀರಿ. ಇವತ್ತು ಷೂರಿಟಿ ಜಾಸ್ತಿ ಬೇಕೆಂದು ಹೇಳುತ್ತೀರಿ. ಕ್ವಾಲಿಟಿ ಅಸ್‌ಪೆಕ್ಟ್ ಬಹಳ ಚೆನ್ನಾಗಿರಬೇಕು. ನಾವು ಇದನ್ನೆಲ್ಲಾ ದೇಶ ವಿದೇಶಕ್ಕೆ ಕಳುಹಿಸಬೇಕು. ನಮಗೇ ಸಾಕಾಗದಿರುವಂಥ ಪರಿಸ್ಥಿತಿಯೊಳಗೆ ಹೊರಗಡೆ ಕಳುಹಿಸುವುದಕ್ಕೆ ನಮ್ಮ ಹತ್ತಿರ ಸಬ್‌ಸಿಸ್ಟೆನ್ಸ್ ಎಕಾನಮಿ ಇರುತ್ತದೆಯೇ? ನಾವು

ಬೆಳೆದದ್ದು ನಮಗೇ ಸಾಕಾಗದೇ ಇರುವಾಗ ನಾವು ಬೆಳೆಯುವುದಕ್ಕೂ ಸರಿಯಾದ ವ್ಯವಸ್ಥೆ ಇಲ್ಲದಿರುವಾಗ ನಾವು ಹೇಗೆ ಮಾಡಬೇಕು? ಅದಕ್ಕಾಗಿ ನೀವು ಇದಕ್ಕೆ ಒಂದು ಕಾರ್ಯ ಯೋಜನೆಯನ್ನು ಹಾಕಿಕೊಳ್ಳದೇ ಇದ್ದರೆ, ಬಂಡವಾಳವನ್ನು ಇದಕ್ಕೆ ತೊಡಗಿಸದೇ ಇದ್ದರೆ, ತಾಂತ್ರಿಕ ಜ್ಞಾನವನ್ನು ಕೊಡಲಿಕ್ಕೆ ಸಾಧ್ಯವಾಗದೇ ಇದ್ದರೆ ಇದು ಆಗುವುದಕ್ಕೆ ಸಾಧ್ಯ ಇಲ್ಲವೆಂದು ಈ ಸಂದರ್ಭದಲ್ಲಿ ತಿಳಿದುಕೊಳ್ಳಬಹುದು. ಅದಕ್ಕಾಗಿ ಇವತ್ತು ತಾವು ಯಾವ ಹಂತದ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಿ, ಎನ್ನುವುದು ಬಹಳ ಮುಖ್ಯ. ತಾವು ಹೇಳಿದ್ದೀರಿ, ಪುನಶ್ಚೇತನವಾಗಬೇಕು. ಇವತ್ತು ನಮ್ಮ ಹತ್ತಿರ ಏನಿದೆ? ಇವತ್ತು ಕೃಷಿ ವಿಶ್ವವಿದ್ಯಾನಿಲಯಗಳು ಇವೆ. ಇವತ್ತು ಕಾಲಾಂತರದೊಳಗೆ ಬಹುತೇಕ ಇವೆಲ್ಲಾ ಸಂಬಳ ತೆಗೆದುಕೊಳ್ಳತಕ್ಕ ಸಂಸ್ಥೆಗಳಾಗಿ ಪರಿವರ್ತನೆಯಾಗಿದೆ. ಒಂದು ಹೊಸ ಸಂಶೋಧನೆಗಳನ್ನು ಮಾಡುತ್ತಾ ಇಲ್ಲ. ಅವರು ಹೇಳಬಹುದು, ಇಲ್ಲ ನಡೆದಿದೆ, ನಾವು ಹಾಗೆ ಮಾಡಿದ್ದೇವೆ, ಯಾವಾಗ ಇದು ಗ್ರೀನ್ ರೆವಲ್ಯೂಷನ್ ಆದ ನಂತರದ ಕಾಲದಲ್ಲಿ ಇವರಿಂದ ಹೊಸ ಕೊಡುಗೆಗಳೂ ಏನೂ ಆಗಿಲ್ಲ. ಇದ್ದುದನ್ನೇ ಅಪ್‌ಗ್ರೇಡೇಷನ್ ಮತ್ತೊಂದು ಇಂಪ್ರೂವ್‌ಮೆಂಟ್ ಮಾಡಿಕೊಂಡಿದ್ದಾರೆ. ನಮ್ಮ ಭಾಗದಲ್ಲಿ ಬೆಳೆಯುತ್ತಾ ಇದ್ದರು. ಹತ್ತಿಬೀಜ ವರಲಕ್ಷ್ಮಿ ಆಗಿರಬಹುದು, ಡಿ.ಸಿ.ಹೆಚ್. ಆಗಿರಬಹುದು. ಆ ಕಾಲದಲ್ಲಿ ಬಂದು ಹೋಯಿತು. ಇವತ್ತು ಯಾರೂ ಹತ್ತಿ ಬೆಳೆಯಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಉಪಾಧ್ಯಕ್ಷರೇ, ತಮ್ಮ ಪ್ರದೇಶದಲ್ಲೇ ಬೆಳೆಯುತ್ತೀರಿ. ನಾವೆಲ್ಲಾ ಬಯಲುಸೀಮೆಯಲ್ಲಿ ಬೆಳೆಯುತ್ತಾ ಇದ್ದೆವು. ಇವತ್ತು ಮಲೆನಾಡಿನಲ್ಲಿ ಬೆಳೆಯುತ್ತಾ ಇದ್ದಾರೆ. ಇವತ್ತು ಎಷ್ಟು ಇಳುವರಿ ಬರುತ್ತಾ ಇದೆ ಎಂಬುದನ್ನು ತಾವೇ ಹೇಳಿ. ಪ್ರಾರಂಭದಲ್ಲಿ ಎಲ್ಲಿ ಬೆಟ್ಟಗುಡ್ಡ ಇತ್ತು. ಎಲ್ಲಿ ಕಾಡು ಇತ್ತು, ಒರಿಜಿನಲ್ ಲ್ಯಾಂಡ್ ಇತ್ತು, ಬೆಳೆ ಬೆಳೆಯುತ್ತಾ ಇರಲಿಲ್ಲ. ಅಂತಹ ಕಡೆಗಳಲ್ಲೂ 10-15 ಕ್ವಿಂಟಾಲ್ ಬರುತ್ತಿತ್ತು. ಇವತ್ತು ಕಿಲೋದಲ್ಲಿ ಬರುತ್ತಾ ಇದೆ. ಇದಕ್ಕೆ ಕಾರಣ ಏನು? ಇದಕ್ಕೇನು ಕ್ರಮ ತೆಗೆದುಕೊಂಡಿದ್ದೇವೆ? ಇದು ಯಾವುದೇ ಕೆಲಸವನ್ನು ಇವತ್ತು ಕೃಷಿ ವಿಶ್ವವಿದ್ಯಾನಿಲಯಗಳು ಮಾಡುತ್ತಾ ಇಲ್ಲ. ಇವತ್ತು ಏನಾದರೂ ಕೃಷಿ ಇಲಾಖೆ ರೈತರ ಮಟ್ಟಕ್ಕೆ ಬರಬೇಕಾದರೆ ಮತ್ತು ಹೆಚ್ಚಿನ ಫಲಿತಾಂಶ ತರಿಸುವುದಕ್ಕೆ ಅವರಿಗೆ ಹೆಚ್ಚು ಹೆಚ್ಚು ಹಣವನ್ನು ಕೊಡಬೇಕು. ಅವರು ತಮ್ಮ ದೃಷ್ಟಿಕೋನವನ್ನು ಬದಲಾವಣೆ ಮಾಡುವುದಕ್ಕೆ ಅಡ್ವೈಸ್ ಮಾಡಬೇಕು, ಕಾರ್ಯಕ್ರಮವನ್ನು ಕೊಡಬೇಕು. ಸಹಯೋಗದೊಂದಿಗೆ ಕೆಲಸ ಮಾಡಬೇಕು. ಹೊಸ ವಿಚಾರಗಳನ್ನು ತಿಳಿದುಕೊಳ್ಳುವಾಗ, ಆ ರೀತಿಯಾದ ಹೊಸ ಸಂಶೋಧನೆಗಳನ್ನು ನಾವು ಕೂಡಿ ಮಾಡುವಂಥ ಕೆಲಸಗಳನ್ನು ಮಾಡಬೇಕು. ಇಲ್ಲದೇ ಹೋದರೆ, ಎಂದೂ ನಾವು ಆ ಮಟ್ಟಕ್ಕೆ ಮುಟ್ಟಲಿಕ್ಕೆ ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ. ಕೃಷಿ ಇಲಾಖೆಯೂ ಈಗಿರುವಂಥ ಪರಿಸ್ಥಿತಿಯಿಂದ ಅದು ಸ್ಕ್ರಾಪ್ ಮಾಡಿದರೂ ಸರಿ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಎಲ್ಲೋ ಒಂದು ಕಡೆ ಹೋಗಿ 4 ಕೆ.ಜಿ. ಬೀಜ ಕೊಟ್ಟೆ ಎಲ್ಲೋ ಒಂದು ಕಡೆ ಹೋಗಿ 10 ಲೀಟರ್ ಸಬ್ಸಿಡೈಸ್ಡ್ ಔಷಧಿ ಕೊಟ್ಟೆ, ಎಂದು ಇಷ್ಟಕ್ಕೆ ಮಾತ್ರ ಸೀಮಿತವಾಗಿದೆ. ವಿಸ್ತರಣಾ ಕಾರ್ಯಕ್ರಮಗಳು ಒಂದು ಕೂಡ ಸರಿಯಾಗಿ ನಡೆಯುತ್ತಾ ಇಲ್ಲ. ಅದು ಬೀಜ ಕೊಡುವುದಾಗಿರಬಹುದು ಮತ್ತೊಂದು ಆಗಿರಬಹುದು. ಟೆಕ್ನಾಲಜಿ ಬಗ್ಗೆಯೂ ಕೂಡ ಅವರು ಕಳಕಳಿಯಿಂದ ಮಾಡುವಂಥ ಕೆಲಸ ಆಗಿಲ್ಲ. ಇವತ್ತು ಮಾನ್ಯ ರಾಜ್ಯಪಾಲರ

ಭಾಷಣದಲ್ಲಿ ಪ್ರತ್ಯೇಕವಾಗಿ ಒಣ ಭೂಮಿ ಅಭಿವೃದ್ಧಿ ಯೋಜನೆಗೆ ನಿರ್ದೇಶನವನ್ನು ಮಾಡಿದ್ದೀರಿ, ಅದು ಒಳ್ಳೆಯ ಕೆಲಸ. ಬರೀ ಸಿಬ್ಬಂದಿಯನ್ನು ಹೆಚ್ಚು ಮಾಡದೇ, ಇರತಕ್ಕ ಸಿಬ್ಬಂದಿಯನ್ನೇ ತೆಗೆದುಕೊಂಡು ಕೆಲಸಗಳನ್ನು ಮಾಡಿಸಬೇಕು. ಇವತ್ತು ದಯವಿಟ್ಟು ಹೊಸದಾಗಿ ಸಿಬ್ಬಂದಿಯನ್ನು ಸೃಷ್ಟಿ ಮಾಡಲಿಕ್ಕೆ ಹೋಗಬೇಡಿ. ಅದರೊಳಗೆ ಇರತಕ್ಕ ಸಿಬ್ಬಂದಿಯನ್ನೇ ಉಪಯೋಗ ಮಾಡುವುದರ ಮೂಲಕ, ಇದ್ದಂಥ ಸಿಬ್ಬಂದಿಯನ್ನು ಜಾಗ್ರತಗೊಳಿಸಿ, ನಿಶ್ಚಿತವಾದ ಕಾರ್ಯಕ್ರಮವನ್ನು ಅವರಿಗೆ ಕೊಡಿ ಎಂದು ಹೇಳಿ ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸರ್ಕಾರಕ್ಕೆ ನಾನು ಹೇಳಬಯಸುತ್ತೇನೆ.

ಇನ್ನೊಂದು ವಿಷಯದ ಬಗ್ಗೆ ನನ್ನ ವಿಚಾರಗಳನ್ನು ಹೇಳುತ್ತೇನೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ವಿಶೇಷವಾಗಿ ನೀರಾವರಿ ಬಗ್ಗೆ ರಾಜ್ಯದಲ್ಲಿ ಬಹಳಷ್ಟು ಕೆಲಸಗಳು ನಡೆಯುತ್ತಾ ಇವೆ. ಒಂದು ಕಾಲದಲ್ಲಿ ಇತ್ತು. ನನಗೆ ನೆನಪು ಇದೆ. 300 ಕೋಟಿ ರೂಪಾಯಿಗಳನ್ನು ಯು.ಕೆ.ಪಿ.ಗೆ ಬಜೆಟ್‌ನಲ್ಲಿ ಕೊಟ್ಟು, ಖರ್ಚು ಮಾಡಿರುವುದು ದೊಡ್ಡ ಸಾಧನೆ ಎಂಬ ಕಾಲ ಇತ್ತು. ಆದರೆ, ಇವತ್ತು ಒಂದು ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡುತ್ತಾ ಇದೆ. ಇವತ್ತು ನೀರಾವರಿಗೆ ಹೇಗೆ ಹಣ ಒದಗಿಸಬೇಕು, ಯು.ಕೆ.ಪಿ. ಅಂದರೆ ಎರಡು ಸಾವಿರ ವರ್ಷದೊಳಗಡೆ ಬಚಾವತ್ ತೀರ್ಪಿನ ಒಳಗಡೆ ಬರುವಂಥ ನೀರನ್ನು ಹೇಗೆ ಉಪಯೋಗ ಮಾಡಬೇಕು. ಅಥವಾ ಕಾವೇರಿ ಕಣಿವೆಯಲ್ಲಿ ನಾವು ಎಷ್ಟು ನೀರನ್ನು ಹೇಗೆ ಉಪಯೋಗ ಮಾಡಬೇಕು. ಇದರ ಬಗ್ಗೆ ಬಜೆಟ್‌ನಲ್ಲಿ ನಾವು ಹೇಗೆ ದುಡ್ಡು ತೆಗೆದಿಡಬೇಕು. ನಾವು ಹೇಗೆ ಹಣಕಾಸಿನ ವ್ಯವಸ್ಥೆಯನ್ನು ನಿಭಾಯಿಸಬೇಕೆಂಬ ಸಮಸ್ಯೆ ಇತ್ತು. ಆದರೆ ಇವತ್ತು ಪರಿಸ್ಥಿತಿ ತಿರುವು ಮುರುವು ಆಗಿದೆ. ಇವತ್ತು ಹಣ ಇದೆ. ಸಾಕಷ್ಟು ನಿಗಮಗಳನ್ನು ಮಾಡಲಾಗಿದೆ. ಅದು ಕೃಷ್ಣಾ ಜಲಭಾಗ್ಯ ನಿಗಮ ಆಗಿರಬಹುದು, ನೀರಾವರಿ ನಿಗಮ ಆಗಿರಬಹುದು ಅಥವಾ ಮತ್ತೊಂದು ಆಗಿರಬಹುದು. ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ಕಾವೇರಿ ಕಣಿವೆಗೆ ಕೊಡುವಂಥದ್ದು ಆಗಿರಬಹುದು. ಇದನ್ನು ಮಾಡಿ ಸಾಕಷ್ಟು ಹಣ ಒಂದು ಕಡೆಗೆ ಇದ್ದರೆ, ಕೆಲಸದ ಗತಿ ಮಾತ್ರ ಬದಲಾವಣೆಯಾಗ್ಗಿಲ್ಲ. ನಾವು ಹಿಂದೆ ಆ ಕಡೆ ಹೋದಾಗ ಗಲಾಟೆಗಳೋ ಗಲಾಟೆಗಳು, ಕಂಟ್ರಾಕ್ಟರುಗಳು ನಮಗೆ ದುಡ್ಡು ಬಂದಿಲ್ಲ, ಕೆಲಸ ಆಗಲಿಲ್ಲವೆಂದರೆ, ದುಡ್ಡು ಬಂದಿಲ್ಲ ಎಂಬುದಿತ್ತು. ಇವತ್ತು ಏಕೆ ಕೆಲಸ ಆಗಲಿಲ್ಲ? ಹಣವನ್ನು ಏಕೆ ಖರ್ಚು ಮಾಡಲಿಲ್ಲವೆಂಬ ಪರಿಸ್ಥಿತಿ ಇದೆ. ವೇಗದ ಗತಿ ಇನ್ನೂ ಹೆಚ್ಚಾಗಬೇಕು. ತಾವು ಈ ರೀತಿ ಸದಾಕಾಲ ಹಣವನ್ನು ಪಡೆಯುವಂಥ ಪರಿಸ್ಥಿತಿ ಇರುವುದಿಲ್ಲ. ಸಾಲ ಪಡೆಯುವಂಥ ಅವಕಾಶ ಇದೇರೀತಿ ಇರುತ್ತದೆ ಎಂದಲ್ಲ. ಇವತ್ತು ನಾವು ಸಾಕಷ್ಟು ಸಾಲ ತೆಗೆದುಕೊಂಡು, ಹಣವನ್ನು ಇಟ್ಟಿದ್ದೇವೆ. ಆ ಹಣ ಸರಿಯಾಗಿ ಉಪಯೋಗ ಆಗಬೇಕು. ಮಾನ್ಯ ನೀರಾವರಿ ಸಚಿವರು ಯುವಕರಿದ್ದಾರೆ, ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅದರ ಬಗ್ಗೆ ಏನೂ ಇಲ್ಲ. ಅದರ ಕೂಡ ಕೆಲಸದ ವೇಗವನ್ನೂ ಸಹಿತ ಮಾಡಬೇಕು. ಅವರೇನು ಪಾರದರ್ಶಕತೆ ತರಬೇಕೆಂದು ಹೇಳುತ್ತಾರೆ ಮತ್ತೊಂದು ಗುತ್ತಿಗೆಯಲ್ಲಿ ಎಲ್ಲಾ ಅವ್ಯವಹಾರಗಳನ್ನು ತಡೆಯಬೇಕೆಂದು ಹೇಳುತ್ತಾರೆ. ಅದರ ವೇಗವನ್ನೂ ಕೂಡ ಹೆಚ್ಚು ಮಾಡಬೇಕು. ಇವತ್ತು ಹಲವಾರು ವರ್ಷಗಳಿಂದ ನೀರಾವರಿ ಯೋಜನೆಗಳು ಹಾಗೆಯೇ ನಿಂತಿವೆ. ಮಾನ್ಯ ಹಿಂದಿನ ಸಭಾಧ್ಯಕ್ಷರಾದ ಕೌಜಲಗಿಯವರ ಕ್ಷೇತ್ರದಲ್ಲಿ

ಘಟಪ್ರಭಾ ಬಲದಂಡೆ ಕಾಲುವೆ ಬರುತ್ತದೆ. ನಾವು ಪ್ರಥಮಸಾರಿ ಶಾಸಕರಾದಾಗ ಹೋಗಿ ನೋಡಿದ್ದೆವು. ಆ ಕಾಲದಿಂದ ಇದುವರೆಗೂ ಅದು ಇನ್ನೂ ಅರ್ಧಂಬರ್ಧ ನಿಂತಿದೆ. ಮಲಪ್ರಭಾ ಯೋಜನೆ ನಾನು ಬರುವಂಥ ಕ್ಷೇತ್ರದಲ್ಲಿ 1980ರ ಗಲಾಟೆ ಆದದ್ದೇ ಅದಕ್ಕಾಗಿ. ಅವ್ಯವಸ್ಥಿತವಾಗಿ, ಎಲ್ಲಾ ಯದ್ವಾತದ್ವಾ ಮಾಡಿದಂಥ ಕೆಲಸಗಳನ್ನು ಸರಿ ಮಾಡುವ ವ್ಯವಸ್ಥೆಗೆ ಅವತ್ತಿನಿಂದಲೂ ಇದು ಬಹಳಷ್ಟು ಪರಿಸ್ಥಿತಿ ಬದಲಾವಣೆಯಾಗಿದೆ ಎಂದು ನಾನು ಹೇಳುವುದಿಲ್ಲ. ಆದರೆ, ಆ ಪ್ರಾಜೆಕ್ಟ್‌ನ್ನು ಮುಗಿಸುವಂಥ ವ್ಯವಸ್ಥೆ ಮಾಡಲಿಕ್ಕೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕು. ಈಗ ತೆಗೆದು ಕೊಳ್ಳುತ್ತಿದ್ದಾರೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಮೊಟ್ಟಮೊದಲಬಾರಿಗೆ ಆ ಭಾಗದಿಂದ ನೀರಾವರಿ ಸಚಿವರಾಗಿ ಬಂದು, ಆ ಭಾಗದ ಜನರ ಆಸೆಯನ್ನು ಅವರು ಈಡೇರಿಸುತ್ತಾರೆ. ಅದರೂ ಕೂಡ ಇವತ್ತು ಮಹಾದಾಯಿ ಯೋಜನೆ ಬಗ್ಗೆ ಬಹಳಷ್ಟು ಒತ್ತು ಅಲ್ಲಿದೆ. ಅಲ್ಲಿಯ ಜನರ ಆಗ್ರಹ ಇದೆ. ಅದನ್ನೂ ಸಹಿತ ಆದಷ್ಟು ಬೇಗ ಈಡೇರಿಸಬೇಕೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಈ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಬಹಳ ದೊಡ್ಡ ಗಲಾಟೆ ನಡೆದು, ಎರಡು ಮೂರು ದಿವಸಗಳು ಈ ಸಭೆಯ ವೇಳೆಯನ್ನು ಕಳೆದುಕೊಂಡೆವು. ಇವತ್ತು ಪಂಚಾಯತ್ ರಾಜ್ ವ್ಯವಸ್ಥೆ, ನಾನು ಆ ಕಾಲದಲ್ಲಿ ಇದ್ದೆ. ಮಾನ್ಯ ಉಪಾಧ್ಯಕ್ಷರೇ ತಾವು ಆ ಅವಧಿಯಲ್ಲಿ ಇರಲಿಲ್ಲ. ಅವತ್ತು ಪಂಚಾಯತ್‌ರಾಜ್ ವ್ಯವಸ್ಥೆಯನ್ನು ದಿವಂಗತ ಮಾನ್ಯ ನಜೀರ್‌ಸಾಬ್‌ರವರು ತಂದರು. ಆಗಿನ ಸರ್ಕಾರದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರೂ ಇದ್ದರು. ನಾನೂ ಸಹಿತ ರಾಜ್ಯಸಚಿವನಾಗಿ ಕೆಲಸ ಮಾಡಿದ್ದೆ. ಅವರದು ಬಹಳ ಸ್ಪಷ್ಟವಾದ ಕಲ್ಪನೆ ಇತ್ತು. ಪಂಚಾಯತ್‌ರಾಜ್ ವ್ಯವಸ್ಥೆಯಿಂದ ಈ ದೇಶಕ್ಕೆ, ಈ ರಾಜ್ಯಕ್ಕೆ ಅದೂ ಹಳ್ಳಿಗಾಡಿನ ಪ್ರದೇಶದಲ್ಲಿ ಒಂದು ಹೊಸ ಚಾಲನೆ ಬರುತ್ತದೆ. ಒಂದು ತರಹ ಜಡಭರಿತ ಹಳ್ಳಿ ಸಮಾಜ ಏನಿದೆ, ಅಶಿಕ್ಷಿತ ಸಮಾಜ ಏನಿದೆ, ಒಂದು ಅಮಾಯಕ ಸಮಾಜ ಏನಿದೆ, ಎಲ್ಲಾ ರೀತಿಯ ಜನ ತುಂಬಿದಂತಹ ಸಮಾಜ ಏನಿದೆ, ಅದಕ್ಕೆ ಒಂದು ತರಹ ಚಲನಕ್ರಿಯೆ ಅಲ್ಲಿ ಪ್ರಾರಂಭ ಆಗುತ್ತದೆ. ಅವರ ದೇಶಕ್ಕೆ ಇನ್‌ಹರೆಂಟ್ ಕ್ವಾಲಿಟೀಸ್ ಏನಿದೆ ಅದು ಅವರ ನ್ಯಾಯಪರತೆ ಇರಬಹುದು, ಸರಳತೆ ಇರಬಹುದು ಮತ್ತು ಅವರು ಹಳ್ಳಿಮಟ್ಟಿಗೆ ತಮ್ಮ ಕೆಲಸಕಾರ್ಯಗಳನ್ನು ಮಾಡುವಾಗ ಅವರ ಕಾರ್ಯಕ್ಷಮತೆ, ಅವರ ಯೋಗ್ಯತೆ ಇರಬಹುದು. ಅವುಗಳನ್ನೆಲ್ಲಾ ಉಪಯೋಗ ಮಾಡಿಕೊಂಡು, ಇದೇನೂ ಹೊಸ ಕಲ್ಪನೆ ಎಂದಲ್ಲ. ಗ್ರಾಮ ಸ್ವರಾಜ್ಯವನ್ನು ಸದೃಢಗೊಳಿಸಬೇಕೆಂಬುದು ಗಾಂಧೀಜಿಯವರ ಸ್ಪಷ್ಟ ಕಲ್ಪನೆಯಾಗಿತ್ತು. ಕೊನೆಯ ಹಂತದ ಘಟಕ ಏನಿದೆ, ಗ್ರಾಮೀಣ ಸ್ವರಾಜ್ಯ ಅಥವಾ ಗ್ರಾಮ ಪಂಚಾಯತ್ ಇರಬಹುದು, ಆ ಮೂಲದಿಂದ ಇದನ್ನು ಮೈಕ್ರೋ ಲೆವಲ್‌ನಿಂದ ಮ್ಯಾಕ್ರೋ ಲೆವಲ್‌ಗೆ ಹೋಗಲಿ, ಮೇಲಿನಿಂದ ಬಂದು ನಮಗೆ ಹೇರುವುದು ಬೇಡ ಎಂಬ ಕಲ್ಪನೆ ಏನು ಇತ್ತು, ಅಲ್ಲಿಂದ ಪ್ರಾರಂಭವಾಗಲಿ. ಅದಕ್ಕೆ ಅವರು ಏನೂ ತಿಳಿದುಕೊಳ್ಳುವುದಿಲ್ಲ. ಇಲ್ಲಿ ನಾವು ಬೆಂಗಳೂರಿನಲ್ಲೋ, ಡೆಲ್ಲಿಯಲ್ಲೋ ಕುಳಿತು ಮಾಡುವುದು ಬೇಡ. ಕೆಳಗಿನಿಂದ ಬರಲಿ ಎಂಬ ಕನಸು ಏನಿತ್ತು, ಅದನ್ನು ಅವತ್ತು ಜಾರಿಗೆ ತಂದರು. ಅವತ್ತು ಮಂಡಲ್ ಪಂಚಾಯತ್ ಘಟಕವನ್ನು ಮಾಡಿದರು. 73ರ ತಿದ್ದುಪಡಿ ಬಂತು. ಅದಕ್ಕೂ ಇದಕ್ಕೂ ಬಹಳ ವ್ಯತ್ಯಾಸವಿತ್ತು

ಎಂದು ನಾನು ಭಾವಿಸುತ್ತೇನೆ. ಹೆಚ್ಚು ಸಂವಿಧಾನಾತ್ಮಕವಾದ ಒಂದು ಹಕ್ಕನ್ನು ಸಹಿತ, ಒಂದು ಸ್ಟೇಟಸ್ಸನ್ನು ಸಹಿತ ಈ ಪಂಚಾಯತ್ ರಾಜ್ ಸಂಸ್ಥೆಗಳಿಗೆ 73ನೇ ತಿದ್ದುಪಡಿ ತಂದರು. ಆ ಕಾಲದಲ್ಲಿ ಅನೇಕ ಕಡೆ ಹೋಗಿದ್ದೆವು, ನಾನೂ ಹೋಗಿದ್ದೆ, ಈ ಸದನದ ಜಾಯಿಂಟ್ ಕಮಿಟಿಯೂ ಹೋಗಿತ್ತು. ಈ ಕಾನೂನಿಗೆ ರಾಷ್ಟ್ರಪತಿಯವರಿಂದ ಅನುಮತಿ ಪಡೆಯುವುದಕ್ಕೆ ಸಾಕಷ್ಟು ಕಾಲ ಹಿಡಿಯಿತು. ಅದರ ಪೂರ್ವದಲ್ಲಿ ಪಶ್ಚಿಮ ಬಂಗಾಳದಲ್ಲಿ ಅದರ ಪ್ರಯೋಗ ಆಗಿತ್ತು. ಆದರೆ, ಅಲ್ಲಿ ಅವರು ಕಾನೂನನ್ನು ತಿದ್ದುಪಡಿ ಮಾಡದೇ ಬರೀ ಒಂದು ಎಕ್ಸಿಕ್ಯುಟಿವ್ ಆರ್ಡರ್ ಮಾಡುವ ಮೂಲಕ ಅಲ್ಲಿ ಆ ವ್ಯವಸ್ಥೆಯನ್ನು ತಂದಿದ್ದರು. ಸರ್ಕಾರದ ಭಾವನೆ ಅಥವಾ ವಿಚಾರದ ಮೇಲೆ ಅಲ್ಲಿ ನಡೆಯುತ್ತಿತ್ತು. ಈ ವ್ಯವಸ್ಥೆ ಸರ್ಕಾರಕ್ಕೆ ಬೇಕು ಎಂದರೆ ಇರುತ್ತಾ ಇತ್ತು, ಇಲ್ಲ ಎಂದರೆ ಇಲ್ಲ ಎನ್ನುವ ಪರಿಸ್ಥಿತಿ ಇತ್ತು. ಹಾಗಾಗಿ ಮೂಲಭೂತವಾಗಿ ಅದಕ್ಕೂ ಮತ್ತು 73ನೇ ತಿದ್ದುಪಡಿ ಮಾಡಿದಂಥ ಪಂಚಾಯತ್‌ರಾಜ್ ವ್ಯವಸ್ಥೆಗೂ ಬಹಳಷ್ಟು ವ್ಯತ್ಯಾಸಗಳು ಇಲ್ಲ. ಅದಕ್ಕೆ ಒಳಗಡೆ ಮತ್ತೊಂದು ತಿದ್ದುಪಡಿ ಮಾಡಿ, ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮಾಡಿದರು. ಮೂಲಭೂತವಾಗಿ ಅವತ್ತಿನ ದಿವಂಗತ ನಜೀರ್‌ಸಾಬ್‌ರವರ ಕನಸು ಏನಾಗಿತ್ತು ಎಂದರೆ, ದುರ್ದೈವಕ್ಕೆ ಅವರಿಗೆ ಯಾವುದೇ ಸರ್ಕಾರ ಇರಲಿ ಅವರು ನೀಡಿದಂಥ ಒಂದು ದೊಡ್ಡ ಕೊಡುಗೆ ಈ ರಾಜ್ಯಕ್ಕೆ, ವಿಕೇಂದ್ರೀಕರಣ ವ್ಯವಸ್ಥೆಯ ಕೊಡುಗೆ. ಅವತ್ತು ಅವರ ಕಲ್ಪನೆ ಏನಾಗಿತ್ತು ಎಂದರೆ, ಅವರು ಹೇಳುತ್ತಾ ಇದ್ದರು. ಪದೇ ಪದೇ ಹೇಳುತ್ತಾ ಇದ್ದರು. ಸ್ವಲ್ಪ ಹೆಚ್ಚು ಕಡಿಮೆ ಸುಮಾರು 3,500 ಮಂಡಲ್ ಪಂಚಾಯ್ತಿಗಳು ಇದ್ದವು ಎಂದು ನಾನು ಹೇಳಿದೆ. ಪ್ರತಿಯೊಂದಕ್ಕೂ ಭೇಟಿ ಕೊಡುವ ಆಸೆ ಇದೆ, ಯಾವಗಲ್ ಎಂದು ಹೇಳುತ್ತಾ ಇದ್ದರು. ಪ್ರತಿಯೊಂದಕ್ಕೂ ಹೋಗಬೇಕು. ಅವರ ಉದ್ದಿಶ್ಯ ಇದಾಗಿತ್ತು. ಅವತ್ತಿನ ಜಿಲ್ಲಾ ಪರಿಷತ್ತುಗಳಾಗಲೀ ಅಥವಾ ನಡುವೆ ಇದ್ದಂಥ ತಾಲ್ಲೂಕು ಅಡ್ವೈಸರಿ ಕಮಿಟಿಗಳಾಗಲೀ ಯಾರು ಶಾಸಕರು ಅಧ್ಯಕ್ಷರಾಗಿದ್ದರು, ಆ ಕಮಿಟಿಗಳಾಗಲೀ ಇವರು ಕಾಲಾಂತರದಲ್ಲಿ ನಶಿಸಿ ಹೋಗಬೇಕೆಂಬ ಕಲ್ಪನೆ ಅವರಿಗಿತ್ತು. ಏನಾದರೂ ಆದರೆ ಆ ಮಂಡಲ್ ಪಂಚಾಯ್ತಿಗಳು ಬೆಳೆಯಲಿ ಅವು ಸದೃಢವಾಗಲೀ, ಆಡಳಿತ ಮಾಡಲಿ ಎನ್ನುವಂಥ ಕಲ್ಪನೆ ಅವರಿಗಿತ್ತು. ಆದರೆ, ಅವರಿಗೆ ಆರೋಗ್ಯ ಕೆಟ್ಟುಹೋಯಿತು. ಅವರು ಹೋದರು. ಮತ್ತೆ ಏನೋ ಬದಲಾವಣೆಗಳಾದವು. ತದನಂತರ ಬಂದಂಥ ಕಾನೂನು ಸಹಿತ ಸಂವಿಧಾನದ ಬೆಂಬಲವನ್ನು ಪಡೆದು ಏನು ಬಂದಿದೆ, ಇದು ಹಂತದಿಂದ ಹಂತಕ್ಕೆ ಹೆಚ್ಚು ಬೆಳೆಯುತ್ತಾ ಇದೆ. ಇದನ್ನು ಇವತ್ತು ಯಾರೂ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಆದರೆ, ಇವರ ಪೀರಿಯಡ್ ಏನಾಗಿದೆ, ಕಾಲಾಂತರದೊಳಗೆ, ಇವತ್ತು ಜಿಲ್ಲಾ ಪಂಚಾಯತ್ ನಮ್ಮ ಕಾಲದಲ್ಲಿ ಬಹಳ ಸಬಲವಾಗಿದ್ದವು. 1986-87ರಲ್ಲಿ ಜಿಲ್ಲಾಪರಿಷತ್ತುಗಳು ಬಹಳಷ್ಟು ಸದೃಢವಾಗಿದ್ದವು. ಎಲ್ಲಾ ಅಧಿಕಾರವೂ ಕೇಂದ್ರೀಕೃತವಾಗಿತ್ತು. ತಾಲ್ಲೂಕು ಪಂಚಾಯ್ತಿಗಳಿಗೆ, ಮಂಡಲ್ ಪಂಚಾಯ್ತಿಗಳಿಗೆ ಅಥವಾ ತಾಲ್ಲೂಕು ಅಡ್ವೈಸರಿ ಕಮಿಟಿಗಳಿಗೆ ಅಷ್ಟು ಅಧಿಕಾರ ಸಿಕ್ಕಿರಲಿಲ್ಲ. ಆದರೆ, ಇವತ್ತು ಏನಾಗಿದೆ ತಾಲ್ಲೂಕು ಪಂಚಾಯ್ತಿಗಳಿಗೆ ಹೆಚ್ಚು ಅಧಿಕಾರವನ್ನು ಪಡೆಯುತ್ತಾ ಇವೆ. ಅದೇನು ಉದ್ದಿಶ್ಯ ಇತ್ತು, ಅದು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹರಿದುಹೋಗಬೇಕು. ಸದೃಢವಾಗಬೇಕು. ಆ ವ್ಯವಸ್ಥೆಯನ್ನು ಸ್ವಲ್ಪ ತಿರುವು ಮುರುವು

ಮಾಡುವ ಕೆಲಸವೂ ಸಹಿತ ಸರ್ಕಾರದವರು ರಾಜ್ಯಪಾಲರ ಮೂಲಕ ಏನು ತಮ್ಮ ಕಮಿಟ್‌ಮೆಂಟ್ ಹೇಳಿದ್ದಾರೆ, ಅದನ್ನು ಮಾಡಿಸುವಂಥ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇವತ್ತು ಬಹಳ ಗಲಾಟೆ ಮಾಡಿಕೊಂಡೆವು. ನೀವೆಲ್ಲಾ ಹಾಗೆ ಹೇಳಿದಿರಿ, ಹೀಗೆ ಹೇಳಿದಿರಿ, ನೀವು ಇದನ್ನೇ ವಿರೋಧ ಮಾಡಿದಿರಿ ಎಂದ ಆ ಕಡೆಯವರು ಹೇಳಿದರು. ನಾನೂ ಆ ಪಕ್ಷದಲ್ಲಿ ಇದ್ದೆ. ಅವತ್ತು ಇದೇ ಜಿಲ್ಲಾ ಪಂಚಾಯ್ತಿ ಚುನಾವಣೆ ಬದಲಾವಣೆ ಆದನಂತರ ಹಿಂದಿನ ಸರ್ಕಾರದವರು ಪಂಚಾಯತ್ ಚುನಾವಣೆ ಮಾಡಿದರು. ನಂತರ ಬಂದಂತಹ ದಳ ಸರ್ಕಾರದವರು ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಯನ್ನು ನಡೆಸುತ್ತಾ ಇದ್ದರು. ಆಗ ಇದೇನೂ ಕಾನೂನು ಇರಲಿಲ್ಲ. ಈ ಚುನಾವಣಾ ಆಯೋಗಕ್ಕೆ ಬಿಟ್ಟುಕೊಡುವಂಥ ಮನಸ್ಸು ಅವರಿಗೆ ಬರಲಿಲ್ಲ. ನಮಗೆ ಗೊತ್ತು ನಾವು ಹೇಳಿದ ಹಾಗೆಯೇ ಆಗಿತ್ತು, ಎಲ್ಲರೂ ಹೇಳಿದ ಹಾಗೆಯೇ ಆಗಿತ್ತು. ರಾಜಕೀಯ ತೀರ್ಮಾನ ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಯಾವುದೇ ಸರ್ಕಾರ ಇದ್ದರೂ ತೆಗೆದುಕೊಳ್ಳುವುದೇ. ಅವತ್ತು ರಾಜಕೀಯ ತೀರ್ಮಾನ ತೆಗೆದುಕೊಂಡರು. ಯಾರು ಯಾರಿಗೆ ಹೇಗೇಗೆ ಬೇಕು ಮಾಡಿದರು. ಕೊನೆಗೆ ಎಲ್ಲಾ ಮುಗಿದುಹೋಗಿ, ಇದನ್ನು ಚುನಾವಣಾ ಆಯೋಗಕ್ಕೆ ಒಪ್ಪಿಸಿಬಿಡೋಣ ಎಂದು ತಿದ್ದುಪಡಿ ಮಾಡಿ ಮಾಡಿದರು. ಇವತ್ತು ಅದರ ಬಗ್ಗೆ ಬಹಳಷ್ಟು ಕೂಗಾಡುತ್ತಿರುವಂಥ ನಮ್ಮ ಸ್ನೇಹಿತರು, ಅವತ್ತು ಏಕೆ ಇದನ್ನು ಸಮರ್ಥನೆ ಮಾಡುವಂಥ ಪರಿಸ್ಥಿತಿ ಆಗಿತ್ತು? ಸರ್ಕಾರದಲ್ಲಿ ಅಧಿಕಾರವನ್ನು ಪಡೆದು ಆ ರೀತಿ ಮಾಡಿಕೊಳ್ಳುವಂಥ ಕೆಲಸಕ್ಕೆ ಏಕೆ ಆ ರೀತಿ ಕೂಗಾಡಬೇಕೆಂದು ನನಗೆ ಅರ್ಥವಾಗುತ್ತಾ ಇಲ್ಲ. ಯಾರಿಗೂ ಈ ಪ್ರೋಸೆಸನ್ನು ತಿರುವು ಮುರುವು ಮಾಡುವುದಕ್ಕೆ ಸಾಧ್ಯವಿಲ್ಲ. ಆದರೂ ಕೂಡ ಇನ್ನು ಒಳ್ಳೆಯ ಅಂಶವನ್ನು ಮಾನ್ಯ ಘೋರ್ಪಡೆಯವವು ಒಂದು ಒಳ್ಳೆಯ ಅಂಶವನ್ನು ಇದರಲ್ಲಿ ಅಳವಡಿಸಿದ್ದಾರೆ. ಬಹುತೇಕ ಹಿಂದಿನ ಕಾಯಿದೆಯಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ಒತ್ತನ್ನು ಅಥವಾ ಅವಕಾಶವನ್ನು ಇಟ್ಟಿರಲಿಲ್ಲ. ಬರೀ ರಿಸರ್ವೇಷನ್ ಮಾತ್ರ ಇತ್ತು. ಪರಿಶಿಷ್ಟ ವರ್ಗ, ಪರಿಶಿಷ್ಟ ಜಾತಿ ಮತ್ತು ಮಹಿಳೆಯರಿಗೆ ಮಾತ್ರ ರಿಸರ್ವೇಷನ್ ಇತ್ತು. ಇದು ಇನ್ನೂ ಒಂದು ಹಂತಕ್ಕೆ ಹೋಗಿ ಹಿಂದುಳಿದ ವರ್ಗಗಳಿಗೆ, ಹೆಣ್ಣುಮಕ್ಕಳಿಗೆ ಇನ್ನೂ ಹೆಚ್ಚಿನ ಪಾಲು ಸಿಕ್ಕಿದೆ. ಇವತ್ತು ಮಹಿಳೆಯರಿಗೆ 60ಕ್ಕಿಂತಲೂ ಹೆಚ್ಚಿನ ಪಾಲು ರಿಸರ್ವೇಷನ್ ಸಿಕ್ಕುತ್ತಾ ಇದೆ. ಬಹುತೇಕ ಒಂದು ಮಾತು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಚುನಾವಣೆ ಮಾಡಲಿಕ್ಕಾಗಲಿಲ್ಲವೆಂದು ಮಾನ್ಯ ಘೋರ್ಪಡೆಯವರು ತಮ್ಮ ಅಧಿಕಾರವನ್ನೂ ಬಿಟ್ಟರು. ಆದರೆ, ಅವರು ಮಾಡಿದಂಥ ಕೆಲಸ ಬಹುತೇಕ 12ನೇ ಶತಮಾನದಲ್ಲಿ ಬಸವಣ್ಣನವರ ಸಾಮಾಜಿಕ ನ್ಯಾಯವನ್ನು ಕೊಡುವಂಥ ಪ್ರಯತ್ನ ಏನಿದೆ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಒಳ್ಳೆಯ ಕೆಲಸವನ್ನು ಮಾಡಿದರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇವತ್ತು ಸಮಾಜದ ನಾವೆಲ್ಲರೂ ಒಪ್ಪಬೇಕಾಗಿದೆ. ಇವತ್ತು ನೋಡುತ್ತಾ ಇದ್ದೇವೆ. ಆ ವರ್ಗದಿಂದ, ಮಹಿಳೆಯರರಿಂದ ಅನೇಕ ಮುಖಂಡರು ಬರುತ್ತಿದ್ದಾರೆ. ನಮ್ಮನ್ನು ಕೇಳುತ್ತಾರೆ, ನಿಮ್ಮನ್ನು ಯಾವಾಗ ಇದಕ್ಕೆ ಅನ್ವಯಿಸಿಕೊಳ್ಳುತ್ತೀರಿ ವಿಧಾನ ಸಭೆ ಮತ್ತು ಪಾರ್ಲಿಮೆಂಟ್ ಎಂದು ಹೇಳಿ. ಅದನ್ನು ತೀರ್ಮಾನ ಮಾಡುವಂಥ ಅಧಿಕಾರ ಪಾರ್ಲಿಮೆಂಟಿಗೂ ಮತ್ತು ಸಂಬಂಧಪಟ್ಟ ಸಂಸ್ಥೆಗಳಿಗೆ ಇದೆ ಎಂದು ನಾವು ಹೇಳುತ್ತೇವೆ.

ಅದೂ ಕಾಲಾಂತರದಲ್ಲಿ ಬರಲೇಬೇಕು. ಹಾಗಾಗಿ ಅವತ್ತು ಮಾನ್ಯ ನಜೀರ್‌ಸಾಬ್‌ರವರ ಕನಸು ಏನಿತ್ತು, ಅವರು ಪದೇ ಪದೇ ಹೇಳುತ್ತಾ ಇದ್ದರು. ಹೌಸ್‌ನಲ್ಲಿ ಇಲ್ಲಿ ಹೇಳುತ್ತಿದ್ದರು, ಅಲ್ಲಿ ಹೇಳುತ್ತಿದ್ದರು. ಇವತ್ತು "ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು" ಎಂದು ಹೇಳುತ್ತಾ ಇದ್ದರು. ಅದರ ಕೂಡ ಮಾನ್ಯ ಘೋರ್ಪಡೆಯವರು ಸಾಮಾಜಿಕ ನ್ಯಾಯ ಸೇರಿಸಿ ಒಂದು ಹೊಸವಿಚಾರವನ್ನು ಈ ರಾಜ್ಯಕ್ಕೆ ಕೊಟ್ಟಿದ್ದಾರೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಅದಕ್ಕಾಗಿ ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಇನ್ನೂ ಬಹಳಷ್ಟು ವಿಚಾರಗಳು ಇವೆ. ಇದರಲ್ಲಿ ಸರ್ಕಾರ ಬಹಳ ಸ್ಪಷ್ಟವಾದ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ ಎಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸಭೆಗೆ ಹೇಳುತ್ತಾ ಆ ಕೆಲಸಕಾರ್ಯಗಳು ಅತ್ಯಂತ ಯಶಸ್ವಿಯಾಗಲಿ ಮಾನ್ಯ ರಾಜ್ಯಪಾಲರು ಇಲ್ಲೇನು ಭಾಷಣ ಮಾಡಿದ್ದಾರೆ, ಆ ಭಾಷಣಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ ಮತ್ತು ಈ ಸಭೆಯೂ ಸಹಿತ ಸರ್ವಾನುಮತದಿಂದ ಬೆಂಬಲಿಸುತ್ತದೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತೇನು ನಮ್ಮ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ, ಅದಕ್ಕೆ ವಂದನೆಯನ್ನು ಸಲ್ಲಿಸುವಂಥ ಈ ಸಂದರ್ಭದಲ್ಲಿ ನಾನು ಮಾತನಾಡಲು ಎಂತಹ ಸಮಯದಲ್ಲಿ ಅವಕಾಶ ಸಿಕ್ಕಿದೆ ಎಂದರೆ ನಮಗೆ ನಿಂದಕರೇ ಇಲ್ಲದ ಸಮಯದಲ್ಲಿ ಸಿಕ್ಕಿಬಿಟ್ಟಿದೆ, ಎಲ್ಲಾ ಖಾಲಿ ಕುರ್ಚಿಗಳಿಗೆ ಭಾಷಣ ಮಾಡುವ ಪರಿಸ್ಥಿತಿ ಬಂದುಬಿಟ್ಟಿದೆ. ಒಂದು ಜೋಕು ಇದೆ. ಭಾಷಣ ಮಾಡುವಾಗ ಕುರ್ಚಿ ಎಲ್ಲಾ ಖಾಲಿ ಇದೆಯಲ್ಲಾ ಏನು ಎಂದು ಒಬ್ಬನನ್ನು ಕೇಳಿದರಂತೆ. ಅವರೆಲ್ಲಾ ಇದ್ದರೆ ಪ್ರಶ್ನೆ ಮಾಡುತ್ತಿದ್ದರು, ಈಗ ಅವರು ಯಾರೂ ಇಲ್ಲದೇ ಇರುವುದು ಒಳ್ಳೆಯದಾಯಿತು ಎಂದನಂತೆ. ಅಂದರೆ, ನಾವು ಈ ನಿಂದಕರು ಇಲ್ಲದೇ ಇರುವಾಗ ಭಾಷಣ ಮಾಡುವ ಪರಿಸ್ಥಿತಿ ಬಂದಿದೆ. ಅದೂ ಈ ಗುರುಸ್ವಾಮಿ ಕೊನೇ ರೋಲ್‌ನಲ್ಲಿ ನಿಂತು ಭಾಷಣ ಮಾಡುವಂಥ ಅವಕಾಶ ಸಿಕ್ಕಿರುವಂತಾದ್ದು ನಿಜಕ್ಕೂ ಕೂಡ ಒಂದು ಸದವಕಾಶ ನಾನು ಈ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರ ಭಾಷಣವನ್ನು ಸ್ವಾಗತ ಮಾಡುವ ಜೊತೆಗೆ ತಮ್ಮಿಂದ ಅನುಮತಿಯನ್ನು ಬೇಡುತ್ತೇನೆ. ಏನೆಂದರೆ, ನನ್ನ ಹೆಸರು ಕೂಗಿದಾಗೆಲ್ಲಾ ಏನಾದರೂ ಧರಣಿ, ಏನಾದರೂ ಕಾರ್ಯಕ್ರಮ, ಇಲ್ಲ ಕುರ್ಚಿಯೇ ಖಾಲಿ ಇರುತ್ತವೆ. ಹೀಗಾಗಿ ನನ್ನ ಹೆಸರನ್ನೇ ಬದಲಾಯಿಸುವುದು ಸರಿ ಎಂದು ನನಗೆ ಯೋಚನೆ ಬಂದು ಬಿಟ್ಟಿದೆ. ಇವತ್ತು ನಾನು ಭಾಷಣ ಮಾಡಬೇಕೆಂದು ನಿಂತಾಗ ಆ ಕಡೆಯ ಕುರ್ಚಿಗಳೆಲ್ಲಾ ಖಾಲಿ. ಮೊನ್ನೆ, ನನ್ನ ಪ್ರಶ್ನೆ ಬಂತು ಕೇಳೋಣ ಎಂದರೆ ಅವತ್ತು ಧರಣಿ ಸಮಸ್ಯೆ. ಮೊನ್ನೆ ಇನ್ನೊಂದು ಸಾರಿ ಪ್ರಶ್ನೆ ಕೇಳೋಣ ಎಂದರೆ, ಮೊನ್ನೆ ಕೂಡ ಇದೇ ಪರಿಸ್ಥಿತಿ ಆಯಿತು. ಆದ್ದರಿಂದ ದಯಮಾಡಿ ನನ್ನ ಹೆಸರನ್ನು ಬದಲಾಯಿಸುವುದಕ್ಕೆ ತಾವು ಪರ್ಮಿಷನ್ ಕೊಡಿ, ಇದು ಬಹಳ ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ.

ಶ್ರೀ ಎಂ. ಮಹದೇವ್ : ನೀವು ಏನಾದರೂ ಮಾತನಾಡಿ ಎಂದು ಆ ಕಡೆಯುವರೆಲ್ಲರೂ ಯಾರೂ ಇಲ್ಲದೆ ಹೊರಟು ಹೋಗಿದ್ದಾರೆ. ಈಗ ನೀವು ಎಷ್ಟು ಬೇಕಾದರೂ ಮಾತನಾಡಬಹುದು.

ಉಪಾಧ್ಯಕ್ಷರು : ನೀವು ನಿರಾತಂಕವಾಗಿ ಮಾತನಾಡಬಹುದು.

ಶ್ರೀ ಗುರುಸ್ವಾಮಿ ಎ.ಎಸ್ : ನಾನು ತಮ್ಮೆದುರು ಮಾತನಾಡುವಾಗ ಪುರಂದರದಾಸರ ಒಂದು ಪದವು ನೆನಪಿಗೆ ಬರುತ್ತದೆ. 'ನಿಂದಕರಿಲ್ಲದ ಬಾಳು ಬಡವಯ್ಯ' ಎಂದು ಹೇಳುತ್ತಾರೆ. ನಿಂದಕರು ಇಲ್ಲದ ಜೀವನ ಬಡ ಜೀವನ ಎಂದು ಅದರ ಅರ್ಥ. ನಮ್ಮ ಬೆನ್ನು ನಮಗೆ ಕಾಣಿಸುವುದಿಲ್ಲ. ನಮ್ಮ ಆಡಳಿತ ನಮಗೆ ಸರಿಯಾಗಿ ಕಾಣುವುದಿಲ್ಲ. ನಮಗೆ ಹೇಳುವಂಥರು, ಚುಚ್ಚಿ ನುಡಿಯುವಂತಹವರು ಇರಲೇ ಬೇಕಾಗುತ್ತದೆ. ಆದರೆ ಅವರು ಈ ಸಂದರ್ಭದಲ್ಲಿ ಹೊರಗೆ ಇರುವುದಕ್ಕಾಗಿ ನಾನು ಪಶ್ಚಾತಾಪ ಪಡುತ್ತೇನೆ. ಅವರುಗಳು ಇದ್ದಿದ್ದರೆ ಚೆನ್ನಾಗಿತ್ತು. ಅವರುಗಳು ನಾಳೆಗಾದರೂ ಬಂದು ಇಲ್ಲಿ ಏನು ತಮ್ಮ ವಿಚಾರಗಳನ್ನು ಪ್ರಸ್ತುತ ಮಾಡುತ್ತಾರೆ, ಅದನ್ನು ಇಲ್ಲಿ ಮಾಡಬೇಕು ಎಂದು ಮಾನ್ಯ ವಿರೋಧಪಕ್ಷದ ಸ್ನೇಹಿತರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಯವರಾದ ಶ್ರೀಮಾನ್ ಕೃಷ್ಣರವರ ನೇತೃತ್ವದಲ್ಲಿ ಹೊಸ ವರ್ಷದ ಮತ್ತು ಹೊಸ ಸಹಸ್ರಮಾನದ ಸರಕಾರ ರಚನೆಯಾಗಿದೆ. ಬಹುಶಃ ಕರ್ನಾಟಕ ರಾಜ್ಯದಲ್ಲಿ ಹೊಸ ಸಹಸ್ರಮಾನದ ಸರಕಾರ ಯಾರದ್ದು ಎಂದು ಕೇಳಿದರೆ ಅದು ಶ್ರೀ ಕೃಷ್ಣರವರದ್ದು ಎಂದು ಉತ್ತರಿಸಬೇಕಾಗುತ್ತದೆ. ಶ್ರೀಮಾನ್ ಕೃಷ್ಣರವರ ಸರ್ಕಾರದಲ್ಲಿ ಕನ್ನಡದಲ್ಲಿಯೇ ಭಾಷಣ ಮಾಡಿ ಮೆರೆದವರು ಯಾರೆಂದರೆ ಅದು ಗೌರವಾನ್ವಿತ ರಾಜ್ಯಪಾಲರಾದ ಶ್ರೀಮತಿ ರಮಾದೇವಿಯವರು. ಕನ್ನಡೀಕರಣವನ್ನು ಬಹಳ ಚೆನ್ನಾಗಿ ನಡೆಸಿದವರು ಅಂದರೆ ಅದು ನಮ್ಮ ಸರಕಾರ. ನನಗೆ ಗೊತ್ತಿರುವ ಹಾಗೆ ರಾಜ್ಯದಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡುವಾಗ ನಮಗೆ ಕನ್ನಡ ಭಾಷಣ ಬೇಕು ಎಂದು ಕೂಗುವಂತಹವದು, ಒತ್ತಾಯ ಮಾಡುವಂತಹವರು, ಗಲಾಟೆ ಮಾಡುವಂತಹವರು ಬಹಳ ಜನರು ಇದ್ದರು. ಆದರೆ ಈ ಸಲ ಯಾರಿಂದಲೂ ಹೇಳಿಸಿಕೊಳ್ಳುವಂಥ ಪ್ರಮೇಯ ಬರಲೇ ಇಲ್ಲ. ಕೇವಲ ಎರಡು ತಿಂಗಳಲ್ಲಿ ರಾಜ್ಯಪಾಲರಾಗಿ ಬಂದ ನಂತರ ಕನ್ನಡವನ್ನು ಕಲಿತು ಕನ್ನಡ ನಾಡಿನ ಸಂಸ್ಕೃತಿಯನ್ನು ಕಲಿತು, ಕನ್ನಡದಲ್ಲಿಯೇ ತಮ್ಮ ಭಾಷಣವನ್ನು ಮಾಡಿ ಅದ್ಭುತವಾದ ರೀತಿಯಲ್ಲಿ ನಮಗೆಲ್ಲರಿಗೂ ಗೌರವವನ್ನು ತಂದುಕೊಟ್ಟಿದ್ದಾರೆ. ಅವರು ಓದಿದಂಥ ಭಾಷಣವು ಕೇವಲ ಭಾಷಣ ಅಲ್ಲ. ಇದು ಒಂದು ಸರಕಾರದ ಅಜೆಂಡಾ. ಯಾವುದೇ ಒಂದು ಸಂಸ್ಥೆಯ ಪ್ರೋಗ್ರಾಂ ನಡೆಯಲಿ, ಅದಕ್ಕೊಂದು ಕಾರ್ಯಕ್ರಮ ಅಥವಾ ಅಜೆಂಡಾ ಇರುತ್ತದೆ. ಇದು ಸರ್ಕಾರದ ಅಜೆಂಡವಾಗಿದ್ದು ನಾವು ಏನು ಮಾಡುತ್ತೇವೆ, ಏನು ಮಾಡುವುದಕ್ಕಾಗುವುದಿಲ್ಲ ಎಂದು ವಿಷದವಾಗಿ ಇದರಲ್ಲಿ ಹೇಳುವುದು ಇದೆ. ಮಾನ್ಯ ಕೃಷ್ಣರವರ ನೇತೃತ್ವದಲ್ಲಿ ಸರಕಾರ ಏನೇನು ಮಾಡಬಲ್ಲದು ಎಂಬುದನ್ನು ಇದರಲ್ಲಿ ಅಳವಡಿಸಲಾಗಿದೆ. ಅನೇಕ ವಿಚಾರಗಳು ಇಲ್ಲಿ ಪ್ರಸ್ತುತವಾಗಿವೆ. ನಾನು ಕೆಲವೇ ವಿಚಾರಗಳನ್ನು ತಮ್ಮ ಮುಂದಿಡುತ್ತೇನೆ.

ಇವೊತ್ತು ಜಾಗತಿಕ ಉದಾರೀಕರಣದ ಒಂದು ಪ್ರಪಂಚದಲ್ಲಿ ನಾವಿದ್ದೇವೆ. ಅದನ್ನು ನೀವು ಬೇಡುತ್ತೀರೋ? ಬೇಡುವುದಿಲ್ಲವೋ? we are all subjected to changes. ಆ ಬದಲಾವಣೆಗೆ ನಾವೆಲ್ಲರೂ ಒಳಪಟ್ಟಿದ್ದೇವೆ. ನೀವು ಎಲೆಕ್ಟ್ರಾನಿಕ್ಸ್ ಬೇಡ ಅಂದರೂ ನೀವು ಅದನ್ನು ಯೂಸ್

ಮಾಡಲೇ ಬೇಕು. ಉದಾರೀಕರಣ ಬೇಡ ಎಂದರೆ ಅದನ್ನು ಮಾಡಲೇಬೇಕು. ಉದಾರೀಕರಣ ಬೇಕು ಅಂದರೆ ಅದನ್ನು ಒಪ್ಪಿಕೊಳ್ಳಲೇ ಬೇಕು. This is the order of the day. ಯಾರಾದರೂ ಇವೊತ್ತು ಕಂಪ್ಯೂಟರೀಕರಣ ಬೇಡ, ನಮಗೆ ಹೈಟೆಕ್ ವಿಚಾರಗಳು ಬೇಡ, ಇನ್ನೊಂದು ವಿಚಾರ ಬೇಡ ಅಂದರೆ he becomes a fool of the world. ಅದು ಆಗಲಿಕ್ಕೆ ಆಗುವುದಿಲ್ಲ. ನಮ್ಮ ಆಧುನಿಕ ಜೀವನ ಶೈಲಿಯು ನಮ್ಮ ಜೀವನದ ಹಾಸು ಹೊಕ್ಕಾಗಿದೆ. ನಮ್ಮ ಕೃಷ್ಣರವರ ಸರಕಾರವನ್ನು ಹೈಟೆಕ್ ಸರಕಾರ, ಕಂಪ್ಯೂಟರ್ ಸರ್ಕಾರ ಎಂದು ಜನ ಹೇಳುತ್ತಾ ಇದ್ದಾರೆ. ಅದು ತಪ್ಪೇನಲ್ಲ. ಅದು ನಿಜವಾಗಿದೆ. ಅದನ್ನು ಬಿಟ್ಟು ನಾವು ಆಡಳಿತವನ್ನು ನಡೆಸುವುದಕ್ಕೆ ಆಗುವುದಿಲ್ಲ, ಅದನ್ನು ಬಿಟ್ಟು ಇರುವುದಕ್ಕೂ ಆಗುವುದಿಲ್ಲ. ಈ ವಿಚಾರವನ್ನು ನಾವೆಲ್ಲರೂ ಮನಗಾಣಬೇಕಾಗುತ್ತದೆ. without computer you canno succeeed now. ಇದನ್ನು ಬಿಟ್ಟು ಬಿಸಿನೆಸ್‌ನವರು, ರಾಜಕಾರಣದವರು, ಇತರರು ಯಾರೂ ಸಕ್ಸೀಡ್ ಆಗುವ ಹಾಗಿಲ್ಲ. ಹೈಟೆಕ್‌ನ ವಿನಹ ನಮ್ಮ ಜೀವನ ಶೈಲಿ ಇಲ್ಲ. Fast life, fast changes and we are all subjected to pressures. ಪ್ರಪಂಚವೇ ಒಂದು ಸಣ್ಣ ಊರಾಗಿ ಕಾಣುವ ಪರಿಸ್ಥಿತಿ ಉಂಟಾಗಿದೆ. ಪ್ರಪಂಚವು ಒಂದು ಸಣ್ಣ ಹಳ್ಳಿಯ ತರಹ ಕಾಣುತ್ತಾ ಇದೆ. ಪ್ರಪಂಚದ ಎಲ್ಲೆಲ್ಲಿಂದಲೋ ನಾವು ಕುಳಿತಲ್ಲೇ ಮಾತನಾಡುತ್ತಾ ಇದ್ದೇವೆ. ಒಂದು ಕಾಲದಲ್ಲಿ ಅಷ್ಟು ದೂರವನ್ನು ಹೇಗೆ ಹೋಗುವುದು ಎಂಬ ವಿಚಾರ ಇತ್ತು. ಆದರೆ ಇವೊತ್ತು ಜಾಗತೀಕರಣವಾಗಿ ಮಾಡ್ರನೈಸ್ಡ್ ಟೆಕ್ನಿಕ್ಸ್‌ಗಳು ಬಂದು ಪ್ರಪಂಚವೇ ಸಣ್ಣದಾಗಿ ಕಾಣುವ ವಿಚಾರಧಾರೆಯಲ್ಲಿ ನಾವು ಸರಕಾರ ನಡೆಸುವಾಗ ನಾವು ಕೂಡ ಹೈಟೆಕ್ ಆಗಿ ಇರಬೇಕಾಗುತ್ತದೆ. ನಾವು ಕಂಪ್ಯೂಟರೈಸ್ಡ್ ಆಗಿ ಇರದಿದ್ದರೆ ನಡೆಯುವುದಿಲ್ಲ. You cannot survive. Survival of the fittest is the order of the day. ಇವೊತ್ತು ನೀವು ಒಪ್ಪುತ್ತೀರೋ, ಬಿಡುತ್ತೀರೋ, ಅದು ಮುಖ್ಯವಲ್ಲ. ಇವೊತ್ತು ಪ್ರಪಂಚದ ಎಲ್ಲಾ ವಸ್ತುಗಳು ನಮ್ಮಲ್ಲಿ ಸಿಗುತ್ತವೆ. ಇವೊತ್ತು ಯಾವುದಾದರೂ ಎಲೆಕ್ಟ್ರಾನಿಕ್ಸ್ ವಸ್ತುಗಳು, ಮೆಶಿನರಿಗಳು ಬೇಕೆಂದು ವಿದೇಶಕ್ಕೆ ಹೋಗಬೇಕಾಗಿಲ್ಲ. ಮಾಡರ್ನ್ ಕಾರು ಬೇಕೆಂದು ನೀವು ಜಪಾನ್ ದೇಶಕ್ಕೆ ಹೋಗಬೇಕಾಗಿಲ್ಲ. It is available in India. What are all required, everything is available here. It means they are bringing more changes on you. ಇದರ ಅರ್ಥ ನಮ್ಮ ಸರಕಾರದ ರಚನೆಯಲ್ಲಿ, ಆಡಳಿತದಲ್ಲಿ ಮತ್ತು ನೋಟದಲ್ಲಿ ಕೂಡ ಇಂಥ ಒಂದು ಬದಲಾವಣೆಯನ್ನು ತರುವ ಕೆಲಸವು ಇವೊತ್ತು ಆಗಿದೆ. ಇದನ್ನು ನಾವೆಲ್ಲರೂ ತುಂಬು ಹೃದಯದಿಂದ ಯಾವುದೇ ಪಕ್ಷಬೇಧಗಳನ್ನು ಮರೆತು, ಭಾಷಣ ಮಾಡಿದಂಥ ವಿಶೇಷವಾದ ಮಾತುಗಳು ಇವುಗಳಾಗಿವೆ. ಹಿಂದೆ ಯಾವುದೇ ಸರಕಾರ ಇದ್ದರೂ ಕೂಡ ಆಗಿನ ಪರಿಸ್ಥಿತಿಯು ಬೇರೆ ಇತ್ತು. 2000ನೇ ವರ್ಷದ ಹಿಂದಿನ ವರ್ಷಗಳ ಪರಿಸ್ಥಿತಿಯನ್ನು ನೋಡಿ. ಅಟಂಬಾಂಬ್ ಬಿತ್ತು, ಹೈಡ್ರೋಜನ್ ಬಾಂಬ್ ಬಿತ್ತು, ಇನ್ನಿತರ ವಿಚಾರಧಾರೆಗಳೆಲ್ಲವೂ ಬಂದುವು, Conflict of issue ಇತ್ತು, conflict of capitalism, conflict of socialism and conflict of neo-colonism ಅವುಗಳೆಲ್ಲವೂ ಈಗ ಎಲ್ಲಿದೆ? ಕ್ಯಾಪಿಟಲಿಸಂ ಬದಲು Lesseiz Faire ಎನ್ನತಕ್ಕಂಥಾದ್ದು ಬಂದಿದೆ. ಎಕನಾಮಿಕ್ಸ್ ಓದಿದವರಿಗೆ

ಇದು ಅರ್ಥವಾಗಬಹುದು. Lesseiz Faire ಥಿಯರಿ ಏನಿದೆ ಅಂದರೆ, those who produce can survive. Those who share the life they can survive. This is basic philosophy of the Lesseiz faire ಎನ್ನತಕ್ಕಂಥ ಒಂದು ಜರ್ಮನ್ ವರ್ಡ್ ಅದು. ಬಹುಶ ಎಕನಾಮಿಕ್ಸ್‌ನಲ್ಲಿ ಓದಿದಂತಹವರಿಗೆ ಇದರ ವಿಚಾರ ಗೊತ್ತಿರುತ್ತದೆ. So we are in world of Lesseiz Faire. ನನ್ನ ಸರಕಾರ ಕೂಡ ಈ ಒಂದು Lesseiz faire ಒಳಗಡೆ ಕೆಲಸ ಮಾಡತಕ್ಕಂಥ ಸರಕಾರ ಎಂಬ ಮಾತನ್ನು ಹೇಳುವುದಕ್ಕೆ ನಾನು ತುಂಬಾ ಸಂತೋಷ ಪಡುತ್ತೇನೆ. ನಾವು ಆರು ತಿಂಗಳುಗಳ ಹಿಂದೆ ಸರಕಾರವನ್ನು ರಚನೆ ಮಾಡಿದ್ದೇವೆ. ಸುಮ್ಮನೆ ನಾವು ಆರು ತಿಂಗಳೊಳಗಾಗಿ ಅದ್ಭುತ ಸಾಧನೆಯನ್ನು ಮಾಡಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ we are going in a right direction. ನಮ್ಮ ಫೌಂಡೇಷನ್ ಸರಿಯಾಗಿದೆ ಎನ್ನತಕ್ಕಂಥ ಮಾತನ್ನು ನಾವು ಹೆಮ್ಮೆಯಿಂದ ಹೇಳಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ನಾವು ಯಾವ ಡೈರೆಕ್ಷನ್‌ನಲ್ಲಿ ಹೋಗಬೇಕೆಂಬುದನ್ನು ನಾವು ನಿರ್ಧಾರ ಮಾಡಿಕೊಂಡಿದ್ದೇವೆ. That direction will take you to the prosperity and belovedness of Divine life. ಈ ದೃಷ್ಟಿಯಲ್ಲಿ ನಾನು ಹೇಳುವುದಾದರೆ, ಕೆಲವು ಸರ್ಕಾರಗಳು ಬಂದು ಅಧಿಕಾರ ನಡೆಸಿಕೊಂಡು ಹೋಗಿರುವುದನ್ನು ನಾವು ನೋಡಿದ್ದೇವೆ. ಉಂಡೂ ಹೋದ, ಕೊಂಡೂ ಹೋದ ಎಂಬ ರೀತಿಯಲ್ಲಿ ಕೆಲವು ಇದ್ದವು. ಆದರೆ ನಮ್ಮ ಸರಕಾರವು ಅಂಥ ರೀತಿಯ ಸರಕಾರವಲ್ಲ. ಇಲ್ಲಿಯೇ ಇದ್ದು, ನಿಮ್ಮೊಂದಿಗೇ ಇದ್ದು ಉಂಡು ಇರುವ ನಿಮ್ಮದೇ ಆದ ಸರಕಾರ ಇದು. ಆ ಒಂದು ದಾಟಿಯನ್ನು ಬೆಳೆಸಿಕೊಂಡಿರತಕ್ಕಂಥವರು ನಮ್ಮಲ್ಲಿ ನಮ್ಮ ಸರ್ಕಾರದಲ್ಲಿ ಇದ್ದಾರೆ. ಒಳ್ಳೆಯ ಪ್ರತಿನಿಧಿಗಳು, ಮಂತ್ರಿಗಳು ಬಂದು ಕೆಲಸ ಮಾಡುತ್ತಿದ್ದಾರೆ. ನಮ್ಮದ್ದು ಒಂದು ಕ್ರಿಯಾತ್ಮಕವಾದಂಥ ಸರಕಾರ. We are action oriented, result oriented and aim oriented ಸರ್ಕಾರ ಎಂದು ಹೇಳಲು ನಾನು ತುಂಬಾ ಹೆಮ್ಮೆ ಪಡುತ್ತೇನೆ. ನೀವು ಆರು ತಿಂಗಳುಗಳಲ್ಲಿ ಅದ್ಭುತ ಸಾಧನೆ ಮಾಡಿ ಬಿಟ್ಟಿದ್ದೀರಾ ಎಂದು ಕೇಳಬಹುದು. ಹೌದು, ಹಾಗೆ ಮಾಡುವಂಥ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಮಾನ್ಯ ರಾಜ್ಯಪಾಲರ ಭಾಷಣವನ್ನು ಓದಿದರೆ ಅದು ಅರ್ಥವಾಗುತ್ತದೆ. ಇದು ಪ್ರಾಕ್ಟಿಕಲ್ ಓರಿಯೆಂಟೆಡ್ ಅಜೆಂಡಾ ಎಂಬುದು ನಮಗೆ ಮನವರಿಕೆ ಆಗುತ್ತದೆ. ನಾವು ಆಕಾಶಕ್ಕೆ ಜನರನ್ನು ಏರಿಸುತ್ತೇವೆಂದು ಹೇಳಿಲ್ಲ. ಸೆಟಲೈಟ್‌ನಲ್ಲಿರುತ್ತೇವೆಂದು ನಾವು ಹೇಳಿಲ್ಲ. ಎಲ್ಲರಿಗೂ ಹೆಲಿಕಾಪ್ಟರ್ ಕೊಡುತ್ತೇವೆಂಬ ಮಾತನ್ನು ಕೂಡ ಹೇಳಿಲ್ಲ. ಎಲ್ಲರಿಗೂ ಎಲೆಕ್ಟ್ರಾನಿಕ್ ಸಾಮಾನುಗಳನ್ನು ಕೊಡುತ್ತೇವೆಂದು ಹೇಳಿಲ್ಲ. We are practical and we are practically oriented people. ಅದಕ್ಕೆ ಸಣ್ಣ ಕೆಲವು ಉದಾಹರಣೆಗಳನ್ನು ತಮ್ಮ ಮುಂದೆ ಹೇಳಬಯಸುತ್ತೇನೆ.

ಮಾನ್ಯ ಬಂಧುಗಳೇ, ಇವೊತ್ತು ನಮ್ಮ ಸರಕಾರದ ರಚನೆಯ ಕೆಲವು ವಿಚಾರಗಳನ್ನು ಹೇಳಿದ್ದೇನೆ. ಇದು ಲೋಕಕಲ್ಯಾಣವನ್ನು ಬಯಸುವ ಸರಕಾರ. ಎಲ್ಲಾ ಕ್ಷೇತ್ರದವರ ಹಿತರಕ್ಷಣೆಯನ್ನು ಬಯಸುವ ಸರಕಾರ ಇದು. ಕೃಷಿ, ಆರೋಗ್ಯ, ಶಿಕ್ಷಣ, ಗ್ರಾಮೀಣ ಪ್ರದೇಶ, ವಿದ್ಯುತ್, ಎಲೆಕ್ಟ್ರಾನಿಕ್ಸ್, ರಸ್ತೆ, ಹೀಗೆ ಪ್ರತಿಯೊಂದು ವಿಚಾರದಲ್ಲಿಯೂ ಕೂಡ ಸರಕಾರವು ಕಾಳಜಿಯನ್ನು ವಹಿಸಿ ಸರ್ವಾಂಗೀಣ

ಅಭಿವೃದ್ಧಿಯನ್ನು ಮಾಡಲು ಬದ್ಧವಾಗಿದೆ ಎಂಬುದನ್ನು anybody who read can understand it. ಇದರಿಂದ ನಮಗೆ 'ಸರ್ವೋಜನೋ ಸುಖಿನೋಭವಂತು' ಎನ್ನತಕ್ಕಂಥ ಒಂದು ಸಂಸ್ಕೃತದ ಫಿಲಾಸಫಿಯ ಬಗ್ಗೆ ನಂಬಿಕೆ ನಮಗೆ ಬರುತ್ತಾ ಇದೆ. ಇಲ್ಲಿ ಯಾವುದೇ ಒಂದು ವರ್ಗವನ್ನು ಸಂತೋಷಗೊಳಿಸುವ ಕೆಲಸವಿಲ್ಲ. ಯಾವುದೇ ಒಂದು ವರ್ಗವನ್ನು ಸೆಟ್‌ಅಪ್ ಮಾಡಿ ಬೇರೊಂದು ವರ್ಗದ ಮೇಲೆ ತೆಗೆದುಕೊಂಡು ಹೋಗುವ ವಿಚಾರವೇ ಇಲ್ಲ. We are almost like human body. Human body ಯಲ್ಲಿ ಯಾವುದೇ ಒಂದು ಹೆಚ್ಚು ಕಡಿಮೆಯಾದರೂ ಕೂಡ ನಾರ್ಮಲ್ ಫಂಕ್ಷನಿಂಗ್‌ನಲ್ಲಿ ಬದುಕುವುದಕ್ಕೆ ಆಗುವುದಿಲ್ಲ. ನಮ್ಮ ಅಂಗಾಂಗಳು ಚೆನ್ನಾಗಿರಬೇಕು, ನಾವು ಆರೋಗ್ಯವಾಗಿರಬೇಕೆಂಬ ರೀತಿಯಲ್ಲಿಯೇ ಇಂಥ ಕಾರ್ಯಕ್ರಮಗಳನ್ನು ಸರಕಾರದವರು ಹಾಕಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ನಾನು ಸದನಕ್ಕೆ ಮೊಟ್ಟಮೊದಲನೆಯದಾಗಿ ಪ್ರವೇಶ ಮಾಡಿದಾಗ ಒಂದು ಮಹತ್ತರ ಆಶೆ ಇಟ್ಟುಕೊಂಡಿದ್ದೆ. ಆದರೆ ನಮಗೆ ಬೆಟ್ಟ ಅಗೆದು ಇಲಿ ಸಿಕ್ಕಿದ ಹಾಗೆ ಅನಿಸಿತು. ಅದೂ ಕೊನೆಯ ಬೆಂಚ್ ಸಿಕ್ಕಿತು. ಇಲ್ಲಿ ನಮ್ಮ ಹಿರೀಕರು, ನಾಲ್ಕೈದು ಸಲ ಆಯ್ಕೆಯಾಗಿ ಬಂದವರು, ವಿರೋಧಪಕ್ಷದಲ್ಲಿರತಕ್ಕಂಥವರು, ಸರಕಾರ ನಡೆಸತಕ್ಕಂಥವರು, ಇವರೆಲ್ಲರೂ ನಮಗೆ ಅನುಭವವನ್ನು ಹೇಳಿಕೊಂಡುತ್ತಾರೆಂದು ಅಂದುಕೊಂಡಿದ್ದೆನು. ಇಲ್ಲಿ ಮೂರು ದಿನಗಳಿಂದ ಕೇವಲ ಧರಣಿ ಪ್ರೋಗ್ರಾಂ, ಬರೇ ಪ್ರೊಟೆಸ್ಟ್ ಪ್ರೋಗ್ರಾಂ, ಸರಕಾರದ ಟ್ಯಾಕ್ಸಪೇಯರ್ಸ್ ಹಣವನ್ನು ಈ ರೀತಿಯಾಗಿ ವ್ಯಯ ಮಾಡಿದ್ದಾರಲ್ಲ ಎಂದು ನನ್ನ ಮನಸ್ಸು ಕೊರಗುತ್ತಿದೆ.

5.00 ಪಿ.ಎಂ

ಇದೊಂದೇ ಅಲ್ಲ ಪಾರ್ಲಿಮೆಂಟಿನಲ್ಲಿ ಕೂಡ ನಾವು ಕಳೆದ ಸಲ ಹೋದಾಗ ಸತತವಾಗಿ 10 ದಿವಸ ಪಾರ್ಲಿಮೆಂಟ್ ಅಡಜರ್ನ್ ಆಯಿತು. ನಾನು ಸೆಕ್ರಟರಿ ಜನರಲ್‌ರವರ ಪ್ರೈವೇಟ್ ಸೆಕ್ರೆಟರಿಯನ್ನು ಕೇಳಿದೆ. ಒಂದು ದಿನಕ್ಕೆ ಎಷ್ಟು ಖರ್ಚಾಗುತ್ತದಪ್ಪ ಅಂತ, ಅದಕ್ಕೆ ಆತ ಒಂದು ಪಾರ್ಲಿಮೆಂಟ್ ಸೆಶನ್ ನಡೆಯಬೇಕಾದರೆ 6 ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಅಂದರು. ಇಲ್ಲೂ ನಮ್ಮ. ಸೆಶನ್ ನಡೆಯಲು ಒಂದು ದಿವಸಕ್ಕೆ ಎಷ್ಟು ಖರ್ಚಾಗುತ್ತದೆ. ಅಂತ ಗೊತ್ತಿಲ್ಲ, ಮಾನ್ಯ ಸಭಾಪತಿಗಳಿಗೆ ಗೊತ್ತಿದ್ದರೆ ದಯಮಾಡಿ ಅವರು ನಮಗೆಲ್ಲರಿಗೂ ತಿಳಿಸಬೇಕೆಂದು ಕೋರುತ್ತೇನೆ. ನಾನು ಬಂದಾಗ ಹುಮ್ಮನಸ್ಸಿನಿಂದ ಬಂದೆ. ಒಳ್ಳೆಯ ವಿಚಾರಗಳನ್ನು ಚರ್ಚೆ ಮಾಡೋಣ, ಒಳ್ಳೆ ಐಡಿಯೂಸ್ ಕೊಡೋಣ, ಹೊರದೇಶದಲ್ಲಿ ಓದಿಬಂದಿರುವ ಜನ ನಾವು ಅನೇಕ ವಿಷಯಗಳನ್ನು ಪ್ರಸ್ತುತಪಡಿಸೋಣ ಅಂತ ಆಶೆಪಟ್ಟೆವು. ಆದರೆ ಆ ರೀತಿ ಆಗದೆ ದುಃಖದಲ್ಲಿ ಸಿಕ್ಕಿಕೊಂಡಿರುವ ನಾನು ಕೊನೆಗೆ ನನ್ನ ಹೆಸರೇ ಸರಿ ಇಲ್ಲ, ಬದಲಾಯಿಸಿಕೊಳ್ಳೋಣ ಎಂಬ ಪರಿಸ್ಥಿತಿಗೆ ಬಂದಿದ್ದೇನೆ ನೋಡಿ. ಮಾನ್ಯ ಅಧ್ಯಕ್ಷರೇ, ಇದನ್ನು ನಾನು ಯಾಕೆ ಹೇಳುತ್ತಿದ್ದೇನೆ ಅಂದರೆ ಕಳೆದ ಮೂರ್ನಾಲ್ಕು ದಿವಸದ ಒಂದು ಬೆಳವಣಿಗೆಯನ್ನು ನೋಡಿದಾಗ ನಮ್ಮ democracy of discussions, our Government of discussions ಈ ಮಟ್ಟಕ್ಕೆ ಬಂತಲ್ಲ ಅಂತ ದುಃಖವಾಗುತ್ತದೆ. ನಮಗೆ ಯಾವುದನ್ನೂ ಯಾರ ಮೇಲೂ ಹೇರುವಂತಹುದಿಲ್ಲ. ಇದುವರೆಗೂ ಕೂಡ ತನ್ನ ಅಭಿಪ್ರಾಯವನ್ನು

ನಮ್ಮ ಸರ್ಕಾರ ಇನ್ನೊಬ್ಬರ ಮೇಲೆ ಹೇರಿಲ್ಲ. Ours is a people's Government. ಜನರ ಅಭಿಪ್ರಾಯಕ್ಕೆ ಸ್ಪಂದಿಸಿಕೊಂಡು ಕಾರ್ಯ ಮಾಡಿದ್ದೇವೆಯೇ ಹೊರತು ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ ನಾವು ನಡೆದಿಲ್ಲ. ಅಂತಹುದು ಶ್ರೀಮಾನ್ ಕೃಷ್ಣ ಅವರ ಸರ್ಕಾರ ಅಥವಾ ನಮ್ಮ ಸರ್ಕಾರ ಅಂತ ಈ ಸಂದರ್ಭದಲ್ಲಿ ಹೆಮ್ಮೆಯಿಂದ ನಾನು ಹೇಳಬೇಕಾಗುತ್ತದೆ. ಎಲ್ಲೂ ಕೂಡ ದುಬಾದುಬಿ ನಡೆದಿಲ್ರಿ ಇಲ್ಲಿ, Suppression of information ನಡೆದಿಲ್ಲ. ಪ್ರೆಸ್‌ನಲ್ಲಿ ಬರುವ ಅಭಿಪ್ರಾಯಗಳನ್ನು ನಾವು ಯಾವತ್ತಿಗೂ ವಿರೋಧಿಸುವ ಸರ್ಕಾರ ನಮ್ಮದಲ್ರಿ. We are proud of it. Mr. Krishna, being himself foreign educated like us-who has studied abroad. ಬಹಳಷ್ಟು ಸ್ಪಂದನೆ ಮಾಡಿದ್ದಾರೆ, ಜನರ ನೋವುಗಳಿಗೆ ಸ್ಪಂದಿಸುತ್ತಾರೆ ಅವರು. ಅದರ ಫಲವೇ ಮಾನ್ಯ ರಾಜ್ಯಪಾಲರ ಭಾಷಣ. All round development of Karnataka ಏನಾದರೂ ಆಗಬೇಕು ಮಾಡಬೇಕು, ಬದಲಾವಣೆ ಮಾಡಬೇಕು ಎಂಬ ಒಂದು ಗುಂಗು ಹುಚ್ಚಿನಿಂದ ಮಾಡಲಿಕ್ಕೆ ಅವರು ಹೊರಟಿದ್ದರೆ, ಅಂಥ ಸಂದರ್ಭದಲ್ಲಿ ನಮಗೆ ವಿರೋಧಪಕ್ಷದವರು ಸಹಕಾರ ಕೊಡಲಿಲ್ಲ ಅಂದರೆ ಅವರ ವಿಚಾರಧಾರೆ ಒಪ್ಪಲಿಲ್ಲ ಅಂದಾಗ ಎಷ್ಟು ಮನಸ್ಸು ನೋಯುತ್ತದೆ ಹೇಳ್ರಿ. ಆ ದೃಷ್ಟಿಯಿಂದ ನಾಳೆಗಾದರೂ ನಮ್ಮ ವಿರೋಧಿ ಮಿತ್ರರು ಬರಲಿ, ನಮ್ಮೊಡನೆ ಸಹಕಾರ ಮಾಡಲಿ ಎಂದು ನಾನು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ನಮ್ಮದು Honesty Declared Government, ಎಂಬ ವಿಚಾರ ಅಂದರೆ ಎಲ್ಲಾ ಸರ್ಕಾರಗಳು ಎಲ್ಲಾ ರೀತಿ ಸ್ಲೋಗನ್ ಹೇಳಿಯಾಯಿತು. ಹಿಂದಿನವರು ಏನೇನು ಕೊಡಬೇಕೋ ಮುಫತ್ತಾಗಿ ಕೊಟ್ಟು ಆಗಿಹೋಯಿತಿ, ಇನ್ನೇನೂ ಉಳಿದಿಲ್ಲ. ಮತ ತೆಗೆದುಕೊಳ್ಳುವುದಕ್ಕಾಗಿ ಎಲ್ಲ ಡಿಕ್ಲೇರ್ ಮಾಡಿದ್ದಾಗಿ ಹೋಗಿದೆ, ನಾವೇನೂ ಮಾಡುವುದಕ್ಕೆ ಬರುವಂತೆ ಇಲ್ಲ. ನಮಗೆ ಬಿಟ್ಟಿರುವುದು ಗಾಳಿ, ನೀರು, ಭೂಮಿ ಮತ್ತು ಬುದ್ಧಿಶಕ್ತಿ. ಈ ನಾಲ್ಕೇ ಉಪಯೋಗಕ್ಕೆ ಬರುವುದು. ಇನ್ಯಾವ ಸ್ಲೋಗನ್ನೂ ಕೂಡ ಇನ್ನು ಮುಂದೆ ನಡೆಯುವುದಿಲ್ರಿ. ಅಲ್ಲಿಗೆ ಬಂದು ನಿಂತಿದೆ ಶ್ರೀಮಾನ್ ಕೃಷ್ಣರವರ ಸರ್ಕಾರ. ನೀವ್ಯಾರಿಗಾದರೂ ಬಿಟ್ಟ ಜಮೀನು ಕೊಡುತ್ತೇವೆ ಅಂದರೆ ನಂಬುವುದಿಲ್ಲ. ಆ ಜಮೀನಿನಲ್ಲಿ ಏನು ಉತ್ಪತ್ತಿ ಬರುತ್ತಿದೆ ಹೋಗ್ರಿ, ಯಾರಿಗೆ ಬೇಕ್ರಿ ಜಮೀನು ಅಂತಾರೆ. ಇವತ್ತು ಎಲ್ಲರಿಗೂ ಆರಾಮ್ ಲೈಫ್ ಬೇಕು, ಹೇಗೋ ಸಂಪಾದನೆ ಮಾಡುವಂತಹ ಪರಿಸ್ಥಿತಿ. ಈ ಒಂದು ಸನ್ನಿವೇಶದಲ್ಲಿ ಹೇಗೆ ಸರ್ಕಾರ ನಡೆಸುವುದು ಎಂಬ ವಿಚಾರ ಬಂದಾಗ ಉತ್ತರ ಏನಪ್ಪ ಅಂದರೆ ನಮ್ಮ ಅಜೆಂಡಾದಲ್ಲಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದೇವೋ ಅದೇ. ಗ್ರಾಮೀಣ ಜನರಿಗೆ ರಸ್ತೆ ಬೇಕು. ಅದಕ್ಕೆ ಈಗಾಗಲೇ ಒಂದೊಂದು ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಕೊಟ್ಟಿದೆ. ಒಂದು ಕೆಲಸವನ್ನು ಎರಡು ಲಕ್ಷಕ್ಕಿಂತ ಕಡಿಮೆ ಮಾಡಕೂಡದು, ಹಣ ದುರುಪಯೋಗ ಆಗಬಾರದು. ಅಂತಹ ರಸ್ತೆಗಳನ್ನು ಡಾಂಬರೀಕರಣ ಮಾಡುವುದಕ್ಕೆ ಮತ್ತು ಎಲ್ಲಿ ನಡೆಯುವುದಕ್ಕಾಗುತ್ತಿಲ್ಲ ಅಲ್ಲಿ ರಿಪೇರಿ ಮಾಡುವುದಕ್ಕೆ ಕೆಲಸ ಮಾಡುತ್ತಿದ್ದಾರೆ. ಒಂದು ಕಾಲದಲ್ಲಿ ನನ್ನ ವಿರೋಧಿ ಮಿತ್ರರು ಹೇಳುತ್ತಿದ್ದರು, ನಮ್ಮ ಸರ್ಕಾರದ ರಸ್ತೆ ಹೆಂಗೈತಪ್ಪ ಅಂದರೆ, ಯಾವುದಾದರೂ ಹೆಣ್ಮಗಳು ಡೆಲಿವೆರಿ ಆಗುವ ಟೈಮಿನಲ್ಲಿ ಆ ರಸ್ತೆ ಮೇಲೆ ಕರೆದೊಯ್ದರೆ ಅವಳ ಕತೆ ಮುಗೀತು ಅಂತ. ಆದರೆ ನಮ್ಮ ಸರ್ಕಾರ ಆ ಪರಿಸ್ಥಿತೀಲಿಲ್ರಿ. ಹೆಚ್ಚು ಕಡಿಮೆ ಎಲ್ಲ ರಸ್ತೆಗಳನ್ನು ನೋಡಿಕೊಂಡು ಬನ್ರಿ,

ಸಾಧ್ಯವಾದಷ್ಟು ಮಟ್ಟಿಗೆ ನಿಮ್ಮ ಸೊಂಟವನ್ನು ಬಿಗಿಯಾಗಿ ಇಟ್ಟುಕೊಳ್ಳಬಹುದು, ತಕ್ಕಮಟ್ಟಿಗಾದರೂ ಅಷ್ಟು ಆಗಿದೆ ಎಂಬುದು ಬಹಳ ಹೆಮ್ಮೆಯಿಂದ ಹೇಳಬಹುದಾದ ವಿಚಾರ. ಇದನ್ನು ಮಾಡಿದ್ದೇವೆ. ಆದರೆ ನಮಗಾಗಿರುವ ತೊಂದರೆ ಏನು ಅಂದರೆ ನಮಗೆ ಹಳೇ ಸರ್ಕಾರಿ ಮೆಶಿನರಿ ಸಿಕ್ಕಿಬಿಟ್ಟಿದೆ. ಇನ್ನೂ ಅದು ಹದ್ದುಬಸ್ಸಿಗೆ ಬರುತ್ತಿಲ್ಲ, ಸ್ವಲ್ಪ ಎಡಕ್ಕೆ ಬಲಕ್ಕೆ ಹೋಗುತ್ತಿದೆ. ಇಲ್ಲಿ ಸ್ವಲ್ಪ ನಾವು ಎಚ್ಚರಿಕೆ ವಹಿಸಿ ಸಿಸ್ಟಂ ಅನ್ನು ಬದಲಾವಣೆ ಮಾಡದ ಹೊರತು ಅಫಿಶಿಯಲ್ಸ್ ಎಲ್ಲ ಸರ್ಕಾರದಲ್ಲೂ ಬಂದು ಕೂತಿದ್ದಾರೆ. ಯಾರಿಗೆ ಜನರ ಹಿತಾಸಕ್ತಿ ಇಲ್ಲವೋ ಯಾರಿಗೆ in Government officials, commitment of cause, ಇಲ್ಲ ಅಂಥವರು ಕೆಲವು ಸ್ಟ್ರಾಟೆಜಿಕ್ ಪಾಯಿಂಟ್ಸ್‌ನಲ್ಲಿದ್ದಾರೆ. ಇವರು ಬದಲಾವಣೆ ಆಗುವಂಥಾದ್ದು ಬಹಳ ಮುಖ್ಯವಿದೆ. ಯಾರಿಗೆ ಮನಸಾಕ್ಷಿ ಇರುತ್ತದೆ ಅವರಿಗೇ ಜನಪರ ಅಭಿಪ್ರಾಯವುಳ್ಳ, ವಿಷಯಗಳನ್ನು ಪ್ರಾಪರಾಗಿ ತೆಗೆದುಕೊಳ್ಳುವಂತಹ ಜನರನ್ನೂ ಪ್ರಾಪರ್ ಪ್ಲೇಸ್‌ನಲ್ಲಿ ತಂದರೆ ಬಹುಶಃ ಈ ಅಜೆಂಡಾದಲ್ಲಿರುವ ಎಲ್ಲ ಕಾರ್ಯಕ್ರಮಗಳಿಗೂ ನಾವು ಉತ್ತಮ ಭವಿಷ್ಯ ಕೊಡಬಹುದು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನೂ ಕೂಡ ಹೆಮ್ಮೆ ಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಮ್ಮ ದೇಶದ ಜನ, ಮಾನ್ಯ ನಾರಾಯಣಮೂರ್ತಿ, ಮಾನ್ಯ ಗುರುರಾಜ ಪಾಂಡೆ, ನನ್ನ ಧಾರವಾಡದ ಮಿತ್ರ ಇವರನ್ನು ನೋಡ್ರಿ, ಅವರು ನಮ್ಮ ದೇಶದಲ್ಲಿ ಹುಟ್ಟಿ ಬೆಳೆದು ಬುದ್ಧಿವಂತರಾಗಿ ವಿಜ್ಞಾನಿಗಳಾಗಿ ಹೊರದೇಶಕ್ಕೆ ಹೋಗಿ ಈ ದೇಶವನ್ನು ಸಂಪತ್ಭರಿತ ದೇಶವನ್ನಾಗಿ ಮಾಡಿಬಿಟ್ಟರು. ಈಗ ನಮ್ಮ ಸರ್ಕಾರದ ಯೋಜನೆ ಏನೆಂದರೆ, 'ಬನ್ರಪ್ಪ ನಿಮ್ಮ ಬುದ್ಧಿ ಅಲ್ಲಿ ಮಾರಬೇಡ್ರಿ, ಅದನ್ನೆಲ್ಲ ತಂದು ಇಲ್ಲಿ ಇನ್‌ವೆಸ್ಟ್ ಮಾಡಿರಪ್ಪ' ಅಂತ ಪ್ರಾರ್ಥನೆ ಮಾಡಿಕೊಂಡಮೇಲೆ ಅವರು ತಮ್ಮ ಎಕ್ಸ್‌ಪರ್ಟೈಸನ್ನು, ಅಲ್ಲಿ ಗಳಿಸಿರುವ ಹಣವನ್ನು ಭಾರತದಲ್ಲಿ ಹೂಡಲಿಕ್ಕೆ ಇವತ್ತು ಮುಂದೆ ಬರುತ್ತಿದ್ದಾರೆ. Is it not an achievement on the part of the Government? Braindrain ಏನಾಗುತ್ತಿತ್ತು? ಮಕ್ಕಳು ವಿದ್ಯಾವಂತರಾಗಿ ಆ ದೇಶವನ್ನು ಉದ್ಧಾರ ಮಾಡಲಿಕ್ಕೆ ಹೋಗುತ್ತಿದ್ದರು, ಅವರನ್ನು ಇಲ್ಲೇ ಉಳಿಸಿಕೊಳ್ಳುವಂತಹ ಕಾರ್ಯಕ್ರಮ ಅದರ ರಿಸಲ್ಟೇ ನಮ್ಮ ಟೆಕ್ನಲಾಜಿಕಲ್ ಪಾರ್ಕ್ ಎಂದು ಶ್ರೀ ಕೃಷ್ಣರವರು ಮಾಡಿದ್ದಾರೆ. ಹೈದರಾಬಾದಿನಲ್ಲಿ ಸೈಬರ್‌ಪಾರ್ಕ್ ಅಂತ ಇದೆ. ಬಹುಶಃ ಅದಕ್ಕಿಂತ ಇದು ಚೆನ್ನಾಗಿದೆ. ಆದ್ದರಿಂದ ಏನು ಬದಲಾವಣೆ ಬಯಸಲಿಕ್ಕೆ ನಮ್ಮ ಸರ್ಕಾರ ಹೊರಟಿದೆ. ಜನರ ನೈತಿಕ ಮತ್ತು ಜೀವನ ಮಟ್ಟವನ್ನು ಬದಲಾಯಿಸಬೇಕೆಂದು ಈ ಹುಚ್ಚಿನಿಂದ ಈ ಅಜೆಂಡಾ ಏನು ಹಮ್ಮಿಕೊಂಡಿದ್ದೇವೆ ಈ ದೃಷ್ಟಿಯಲ್ಲಿ ನಾವು ಎಲ್ಲರ ಸಹಕಾರದಿಂದ ಸಫಲರಾಗುತ್ತೇವೆ, ಅನ್ನುವುದರಲ್ಲಿ ಎರಡು ಮಾತಿಲ್ಲ. ಮಾನ್ಯ ಅಧ್ಯಕ್ಷರೇ ಒಂದು ಮಾತನ್ನು ನಾನು ಹೇಳಲು ಮರೆಯುವುದಿಲ್ಲ. ನಮ್ಮದು ಕೃಷಿ ಸರ್ಕಾರ. ನಮ್ಮ ಅಜೆಂಡಾ ತೆಗೆದುನೋಡಿ, ಯಾವ ಸರ್ಕಾರವೂ ಕೃಷಿ ಆಯೋಗವನ್ನು ನೇಮಕ ಮಾಡಿರಲಿಲ್ಲ, ನಮ್ಮ ಸರ್ಕಾರ ಅದನ್ನು ಮಾಡಿದೆ. ಇಂಡಸ್ಟ್ರಿ ತರದಲ್ಲೇ ಅದನ್ನೂ ಮಾಡಬೇಕೆಂದು ವಿಚಾರ ಮಾಡಿದೆ. ಇಂಡಸ್ಟ್ರೀಲಿ ಯಾವರೀತಿ ಬೆಲೆ ಸಿಗುತ್ತಿದೆಯೋ ಅದೇರೀತಿ ಕೃಷಿ ಉತ್ಪನ್ನಕ್ಕೂ ಬೆಲೆ ಸಿಗಬೇಕೆಂಬ ವಿಚಾರದಲ್ಲಿ ಚಿಂತನೆ ಮಾಡಿ ಅದನ್ನು ನಮ್ಮ ಅಜೆಂಡಾದಲ್ಲಿ ಸೇರಿಸಿ ರೈತರಿಗೆ ಹೆಚ್ಚಿನ ಆದಾಯ ಕೊಡುವುದಕ್ಕೆ ನಾವೆಲ್ಲ ಮುನ್ನುಗಿರುವುದು we are proud

of it. ನಾನು ಮಣ್ಣಿನಮಗ ಅಂತ ಏನು ಹೇಳುತ್ತಾರೆ ಅವರಿಗಿಂತ we are more than that, We have achieved, ಎಂಬ ಮಾತನ್ನು ಹೇಳಲು ನಾನು ಇಚ್ಛಿಪಡುತ್ತೇನೆ. ನಮ್ಮ ಸಮಾಜದ ವಿವಿಧ ವರ್ಗಗಳೇನಿವೆ ಹರಿಜನ-ಗಿರಜನ, ದುರ್ಬಲವರ್ಗಗಳಿದ್ದಾರೆ ಇವರೆಲ್ಲರಿಗೂ ಅಲ್‌ರೌಂಡ್ ಅಭಿವೃದ್ಧಿ ಸ್ಕೀಮನ್ನು ನಾವು ಅಳವಡಿಸಿಕೊಂಡು ಹಿಂದಿನ ಸರ್ಕಾರಕ್ಕಿಂತ ಹೆಚ್ಚಿನರೀತಿಯಲ್ಲಿ ಮಾಡುವುದಕ್ಕೆ ಉದ್ಯುಕ್ತರಾಗಿರುವುದನ್ನು ನಾವು ಇಲ್ಲಿ ನೋಡುತ್ತಿದ್ದೇವೆ. ಆದರೆ ನಮಗೆ ಬಂದಿರುವ ಕಷ್ಟ ಏನಪ್ಪ ಅಂದರೆ ನಮಗೆ ಕೆಲವು ಇಂಬೈಬ್ಡ್ ಸಮಸ್ಯೆಗಳಿವೆ, ಏನು ಅಂದರೆ ಯಾವುದೇ ಸರ್ಕಾರ ಚೇಂಜಾದಾಗ ಕೆಲವು ಕಾಯಿಲೆಗಳು ಬಂದು ಬಿಡುತ್ತವೆ. ಹೊಸ ಸರ್ಕಾರ ಬಂದ ಕೂಡಲೇ don't think we are now. We are new in coat. but body is the same that you should not forget it. Government body ವಿಧಾನಸೌಧದಲ್ಲಿ ಕೆಲಸ ಮಾಡುವವರಾಗಿರಲಿ ತಾಲ್ಲೂಕು ಆಫೀಸಿನಲ್ಲಿ ವರ್ಕ್ ಮಾಡುವವರಾಗಿರಲಿ ಯಾರೇ ಇರಲಿ that body remains as it is. Rules remains the same but our coat and cloth have changed. Here we have to examine ಏನಪ್ಪ, ಅದನ್ನು ಬದಲಾಯಿಸಲು ಬರುತ್ತದೆಯೇ ಎಂದು ನಾವು ವಿಚಾರ ಮಾಡಬೇಕಾಗುತ್ತದೆ. ಬ್ರಿಟಿಷರ ಬಗ್ಗೆ ನಮ್ಮ ದೂರಿದೆ, ಏನು? ನೀವೆಲ್ಲ ಕೊಳ್ಳೆಹೊಡೆದು ಹೋದಿರಿ ಅಂತ. ನಮ್ಮನ್ನೆಲ್ಲ ಹಾಳು ಮಾಡಿದಿರಿ, ನಮಗೆ ಒಳ್ಳೆಯ ಆಡಳಿತ ಕೊಡಲಿಲ್ಲ ಒಳ್ಳೆಯ ನೈತಿಕಮಟ್ಟ ಕೊಡಲಿಲ್ಲವೆಂಬ ಅಪಾದನೆಯನ್ನು ಕಲೋನಿಯಲ್ ರೂಲರ್ಸಾದ ಬ್ರಿಟಿಷರ ಮೇಲೆ ಆಪಾದನೆ ಮಾಡುತ್ತೇವೆ. ನಮ್ಮ ಸರ್ಕಾರಗಳು ಚೇಂಜಾದಾಗಲೂ ಅದೇ ಗೋಳ್ರಿ, ಹೋಗುವಾಗ ಖಜಾನೆ ಖಾಲಿ ಮಾಡಿರುತ್ತಾರೆ, ನೂರೈವತ್ತು ನೇಮಕಾತಿಗಳನ್ನು ಜಾಸ್ತಿ ಮಾಡಿರುತ್ತಾರೆ, ಇಲ್ಲ ಇನ್ನೊಬ್ಬ ಮೆಡಿಕಲ್ ಕಾಲೇಜ್ ಕೊಟ್ಟುಬಿಟ್ಟಿರುತ್ತಾನೆ. ಇದನ್ನೆಲ್ಲಾ ಸರಿಪಡಿಸಿ ಸರಿದಾರಿಗೆ ತರುವವರೆಗೆ 6 ತಿಂಗಳು ವರ್ಷ ಆಗಿಬಿಡುತ್ತದೆ. ಈ ಮಧ್ಯೆ ಕೆಲಸ ಆಗಿಲ್ಲ ಎಂಬ ಮಾತು ನೀವು ಹೇಳಿದಾಗ, ದಯಮಾಡಿ ನಮ್ಮ ನಮ್ಮ ಮನಸ್ಸಾಕ್ಷಿಯನ್ನು ಪರೀಕ್ಷಿಸಿಕೊಳ್ಳಬೇಕಾಗಿದೆ Whether we are right or wrong ಬ್ರಿಟಿಷರಲ್ಲಿ ಹೇಗಿದೆ ಅಂದರೆ ಒಬ್ಬ ಪ್ರಧಾನಿ ಅಧಿಕಾರ ಕಳೆದುಕೊಂಡ ಮಾರನೇ ದಿವಸೇ ನಂ. 10, Downing street ನಿಂದ ಖಾಲಿ ಮಾಡಿ ಹೋಗುತ್ತಾನೆ. ಇಂಥ ಪರಂಪರೆ, ಒಬ್ಬ ಅಮೆರಿಕಾದ ಅಧ್ಯಕ್ಷ ಸ್ವೇರ್ ಮಾಡಬೇಕಾದರೆ I swear in the name of tax payer's money. ಸರ್ಕಾರಕ್ಕೆ ಕೊಡುವ ಜನಗಳ ತೆರಿಗೆ ಹಣ ಏನಿದೆ ಅದಕ್ಕೆ ಅನ್ಯಾಯವಾಗದಂತೆ ನಡೆದುಕೊಳ್ಳುತ್ತೇನೆ ಎಂದು ಹೇಳುತ್ತಾನೆ. ನಮ್ಮಲ್ಲೂ ಅಂಥ ಪದ್ಧತಿಗಳು ಬರದೇ ಇದ್ದರೆ ಯಾವುದೇ ಸರ್ಕಾರ ಬಂದು ಏನೋ ಮಾಡಿಬಿಡುತ್ತೇವೆ ಎಂದು ಸುಲಭವಾಗಿ ಹೇಳಲು ಬರುವುದಿಲ್ಲ. ಅಧ್ಯಕ್ಷರೇ, ನಮ್ಮ ಸರ್ಕಾರ ಹಿಂದೆ ಕಲೋನಿಯಲ್ ಸರ್ಕಾರಗಳ ತರಹ ಅಲ್ಲ. ಆಟೋಕ್ರಾಟಿಕ್ ಸರ್ಕಾರದ ತರಹ ಅದನ್ನೂ ರನ್ ಮಾಡುವುದಕ್ಕಾಗುವುದಿಲ್ಲ. ಡಿಕ್ಟೇಟೋರಿಯಲ್ ತರಹದಲ್ಲೂ ಸರ್ಕಾರವನ್ನು ರನ್ ಮಾಡುವುದಕ್ಕಾಗುವುದಿಲ್ಲ. ಆದರೆ it is a people's Government ಎಂದು ನಡೆದುಕೊಂಡು ಹೋಗುವ ವಿಚಾರ ಏನಿದೆ ಇಲ್ಲಿ ನಮ್ಮ ಜನರ ಒಂದು ಸರ್ಕಾರ, ಅದು ಯಾವುದೇ ಸರ್ಕಾರವಿರಲಿ, ವಿರೋಧಿ ಸರ್ಕಾರಗಳೇ ಇರಬಹುದು,

ನಮ್ಮದೇ ಇರಬಹುದು. ಜನರ ಸಹಕಾರ, ಅವರ ಚಿಂತನೆ, ಸಲಹೆಗಳಿಲ್ಲದೇ ಇದು ನಡೆಯುವುದಕ್ಕೆ ಸಾಧ್ಯವೇ ಇಲ್ಲ. Because we are people's Government. ಜನರು ಹೇಳಿದ ಹಾಗೆ ನಾವು ಕೇಳಬೇಕಾಗುತ್ತದೆ. ಇಲ್ಲಿ ನಾವು ಎಚ್ಚೆತ್ತುಕೊಂಡು ಅವರು ಉತ್ತಮ ಸಲಹೆಗಳನ್ನು ಕೊಟ್ಟಾಗ ಬಹುಶಃ ನಾವಾಗಲೀ ನಮ್ಮ ಸರ್ಕಾರವಾಗಲೀ ಬಹಳ ಚೆನ್ನಾಗಿ ನಡೆಸುವ ಪರ್ಸೆಂಟೇಜ್ ಆಫ್ ಸಕ್ಸಸ್‌ನಲ್ಲಿ ಏನೂ ಕಡಿಮೆಯಾಗುವುದಿಲ್ಲ. We are going to be gold medallists. ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮದು ಇನ್ನೊಂದು ವಿಚಾರ ಏನೆಂದರೆ ನಮ್ಮದೇ ಆಗಿರುವ ಸೋಷಿಯಾಲಾಜಿಕಲ್ ಖಾಯಿಲೆಗಳು ಸಮಾಜದಲ್ಲಿ ಇವೆ. ನಾವು ಏನೋ ಮಾಡಬೇಕು ಎಂದರೆ ಸೋಷಿಯಲ್ ಕಂಡೀಷನ್‌ಗಳು ನಮ್ಮನ್ನು ಬಿಡುವುದಿಲ್ಲ. ಅದು ರಿಲಿಜಿಯನ್ ಇರಬಹುದು, ಭಾಷೆ ಇರಬಹುದು, ಮತ್ತೊಂದು ಇರಬಹುದು, ಕನ್‌ವೆನ್‌ಷನ್ ಇರಬಹುದು, ಪ್ರಾಕ್ಟೀಸ್ ಇರಬಹುದು ಇವುಗಳೆಲ್ಲವನ್ನೂ, ಈ ಅಡೆತಡೆಗಳನ್ನು ಜಯಿಸಿಕೊಂಡು ಕೆಲಸ ಮಾಡುವಂಥ ಒಂದು ಶಕ್ತಿ ನಮ್ಮ ಸರ್ಕಾರ ಬೆಳೆಸಿಕೊಂಡಿದೆ. ಇದಕ್ಕೆ ಉದಾಹರಣೆ ಎಂದರೆ ಮೊನ್ನೆ ನಡೆದಂಥ ಘಟನೆ. ಯಾರೋ ಒಂದು ಹುಯಿಲೆಬ್ಬಿಸಿದರು. ಸರ್ಕಾರದ ಮಠಗಳ ಬಗ್ಗೆ, ಮತ್ತೊಂದು ವಿಚಾರದ ಬಗ್ಗೆ, ಮತೀಯ ವಿಚಾರದ ಬಗ್ಗೆ, ಆಗ ನಮ್ಮ ಸರ್ಕಾರದವರು, ಮಾನ್ಯ ಮುಖ್ಯಮಂತ್ರಿಗಳು ಕ್ಷಮಾಪಣೆಯನ್ನು ಕೇಳಿದರು. ನಿಮ್ಮ ಸಂವಿಧಾನದಲ್ಲಿ you have a right to run any institution. ನಾವೇನು ಅದಕ್ಕೆ ಅನ್ಯಾಯ ಮಾಡುವವರಲ್ಲ. Anybody can run an institution, subject to rules, You cannot exploit others. ಸಬ್ಜೆಕ್ಟ್-ಟು-ರೂಲ್ಸ್ ಎನ್ನುವ ವಿಚಾರವನ್ನು ಹೇಳಿದರು. ಇವತ್ತು ಯಾರೇ, ಯಾವುದೇ ಸಂಸ್ಥೆಗಳನ್ನು ನಡೆಸುವುದಕ್ಕೆ ಯಾರ ಅಡಚಣೆ ಕೂಡ ಇಲ್ಲ ಎನ್ನುವ ಮಾತನ್ನು ನಮ್ಮ ಸರ್ಕಾರ ಸ್ಪಷ್ಟಪಡಿಸಿ, ಎಲ್ಲಾ ಜನಾಂಗದವರನ್ನು ಕೂಡ ಒಟ್ಟಿಗೆ ತೆಗೆದುಕೊಂಡು ಹೋಗಬೇಕು ಎನ್ನುವ ವಿಚಾರದಲ್ಲಿ ಇವತ್ತು ನಮ್ಮ ಮುಖ್ಯಮಂತ್ರಿಗಳು ಮುಂದೆ ಬಂದಿರುವುದು ಒಂದು ಒಳ್ಳೆಯ ಬೆಳವಣಿಗೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಹಾಗೆಯೇ ನನಗೊಂದು ವಿಚಾರ ನೆನಪಿಗೆ ಬರುತ್ತದೆ. ನನ್ನ ಬಿಜೆಪಿ ಮಿತ್ರರು ಇಲ್ಲಿ ಇಲ್ಲ. ಅವರು ಬಹಳ ಸಲ ಹೇಳುತ್ತಿರುತ್ತಾರೆ. ನಮ್ಮ ಹಿಂದೂ ಧರ್ಮದ ಬಗ್ಗೆ ಹಿಂದೂ ಕಲ್ಚರ್ ಬಗ್ಗೆ ಬಹಳಷ್ಟು ಕಾಳಜಿವಹಿಸಿ ಅವರು ಬಹಳಷ್ಟು ಹೋರಾಟ ಮಾಡುತ್ತಾರೆ ನಿಜ, ಪ್ರತಿಯೊಬ್ಬರಿಗೂ ಅವರದೇ ಆದಂಥ ನಂಬಿಕೆಗಳಿವೆ. ಅವರದೇ ಆದ ರಿಲಿಜಿಯನ್ ಇರುತ್ತದೆ. ಅದು ಇಲ್ಲ ಎನ್ನುವ ವಿಚಾರವಲ್ಲ. ಆದರೆ ನಾವು ಹೊರಗಡೆ ಬದುಕಬೇಕಾದಾಗ ಯಾವ ರೀತಿ ಇರಬೇಕು ಎನ್ನುವ ಪ್ರಶ್ನೆಗೆ ಇವತ್ತು ಉತ್ತರ ಹುಡುಕಬೇಕಾಗುತ್ತದೆ. ಅದು ಹೊರದೇಶಕ್ಕೆ ಹೋಗಿ ಬಂದವರಿಗೆ ಗೊತ್ತಾಗುತ್ತದೆ. ಮನೆಯಿಂದ ಅವನು ಹೊರಗೆ ನಿಂತಾಗ he is only an American, only a Britishman ಹಾಗೆಯೇ ನಾವು ಮನೆಯಿಂದ ಹೊರಗಡೆ ಬಂದಾಗ we are Indians, We are nationalists. ಮುಗಿದುಹೋಯಿತು. ಆಮೇಲೆ ಹೇಳುವುದಕ್ಕೆ ಬರುವುದಿಲ್ಲ. ಯಾರು ಏನು ಬೇಕಾದರೂ ದೇವಸ್ಥಾನ ಕಟ್ಟಿಕೊಳ್ಳಬಹುದು, ಮಸೀದಿ ಕಟ್ಟಿಕೊಳ್ಳಬಹುದು, ಅದರಲ್ಲೇನು ಬಾರ್ ಇಲ್ಲ. ಆದರೆ you cannot hurt somebody's feelings. ಆ ಒಂದು ದೃಷ್ಟಿಯಿಂದಲೂ ಕೂಡ ನಮ್ಮ ಸರ್ಕಾರ

ಇವತ್ತು ಎಲ್ಲಾ ಮತೀಯ ಧರ್ಮವನ್ನು ಕೂಡ ಒಟ್ಟಿಗೆ ತೆಗೆದುಕೊಂಡು ಹೋಗುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ನಾನು ಈ ಸಂದರ್ಭದಲ್ಲಿ ಈ ವಿಚಾರವನ್ನು ಹೇಳಿದಾಗ ನನ್ನ ಮನಸ್ಸಿಗೆ ಕೆಲವು ಸಲಹೆಗಳು ಬರುತ್ತಿವೆ. ಅದನ್ನು ನಾನು ತಮ್ಮ ಮುಂದೆ ಇಡಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮಲ್ಲಿ ಅನೇಕ ಕಾರ್ಯಕ್ರಮಗಳನ್ನು ಇವತ್ತು ಹಾಕಿಕೊಂಡಿದ್ದೇವೆ. ಇವತ್ತು ನಮ್ಮಲ್ಲಿ ಕೆಲಸ ಮಾಡುವುದಕ್ಕೆ ಬಹಳಷ್ಟು ಅಗಾಧವಾದ ಬಾರಿ ಮೆಕನೈಸ್ಡ್ ಮೆಷಿನರಿಗಳು ಬಂದಿವೆ. ಒಂದು ರೋಡನ್ನು ಮಾಡಬೇಕೆಂದರೆ ರಾತ್ರೋರಾತ್ರಿ ಮಾಡಬಹುದು. ಒಂದು ರೋಡಿಗೆ ಟಾರ್ ಹಾಕಬೇಕೆಂದರೆ ರಾತ್ರೋರಾತ್ರಿ ಮಾಡಬಹುದು. ಅದನ್ನು ಹೆಚ್ಚಿನ ರೀತಿಯಲ್ಲಿ ಆ ರೀತಿ ಹಮ್ಮಿಕೊಂಡು ಮಾಡಿದರೆ ಬಹುಶಃ ನಮ್ಮ ರಿಸಲ್ಟ್ಸ್ ಬೇಗ ಬರುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಒಂದು ವಿಚಾರ ಹೇಳಬೇಕೆಂದರೆ ನಮ್ಮ ಜಂಗಲ್ ರಾಜ್‌ದು ಒಂದು ಫಿಲಾಸಫಿ ಇದೆ. ಏನೆಂದರೆ ಕಾಡಿನಲ್ಲಿ ಒಂದು ಕಾನೂನು ಇದೆ. Survival of the Fittest. Lion is the king of the Jungle. ಎನ್ನುವ ವಿಚಾರ ಹೇಳುತ್ತಾರೆ. ಏಕೆ ಹೇಳುತ್ತಾರೆ, because of survival, it survives against anybody. ಇವತ್ತು ನಮ್ಮ ಸರ್ಕಾರ ಕೂಡ ಸರ್ವೈವ್ ಆಗಬೇಕಾದಾಗ we have to show that we are fittest ಎನ್ನುವುದನ್ನು ನಮ್ಮ ಅಜೆಂಡಾದಲ್ಲಿ ನಾವು ತೋರಿಸಿದ್ದೇವೆ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಹೆಮ್ಮೆ ಪಡುತ್ತೇನೆ. ಹಾಗೆಯೇ ನಮ್ಮ ಹಿಂದೂ ಧರ್ಮದ ಬಗ್ಗೆ ಅನೇಕ ಮಿತ್ರರು ಬೊಬ್ಬೆ ಹಾಕಿದ್ದಾರೆ, ಇವರಿಗೂ ಕೂಡ ಒಂದು ಸಲಹೆಯನ್ನು ಕೊಡುತ್ತೇನೆ. ಏನೆಂದರೆ, ವಕ್ಫ್ ಬೋರ್ಡ್ ರೀತಿ ಎಲ್ಲಾ ಟೆಂಪಲ್ಸ್, ಎಲ್ಲಾ ರಿಲಿಜಿಯನ್ ಬಗ್ಗೆ ಕೂಡ ಸರ್ಕಾರ ಇನ್ನು ಹೆಚ್ಚಿನ ರೀತಿಯಲ್ಲಿ ಈ ಒಂದು ಪ್ರಚಾರಕ್ಕೋ ಅಥವಾ ಮತೀಯ ಸೌಹಾರ್ದತೆಯನ್ನು ಕಾಪಾಡಲಿಕ್ಕೆ ಈ ದೃಷ್ಟಿಯಿಂದಲೂ ಕೂಡ ವಿಚಾರ ಮಾಡಬೇಕೆಂದು ನನ್ನ ಸಲಹೆ.

ನಮ್ಮ ಮಹಿಳೆ ಮತ್ತು ಮಕ್ಕಳ ಬಗ್ಗೆ ಹಾಕಿಕೊಂಡಿರುವ ಕಾರ್ಯಕ್ರಮದ ಬಗ್ಗೆ ನಾನೇನು ಹೇಳಬೇಕಾಗಿಲ್ಲ. ಮೊನ್ನೆ ನಮ್ಮ ಮಾನ್ಯ ಘೋರ್ಪಡೆಯವರು ಒಂದು ಸಭೆಯಲ್ಲಿ 48 ಸಾವಿರ ಮಹಿಳೆಯರು ಇವತ್ತು ವಿಲೇಜ್ ಪಂಚಾಯಿತಿ ಸದಸ್ಯರಾಗಿದ್ದಾರೆ ಎನ್ನುವ ಮಾತನ್ನು ಹೇಳಿದರು. We are proud of it. ಇವತ್ತು ಮಹಿಳೆಯರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದಾರೆ, ಹೆಚ್ಚಿನ ಸ್ಥಾನಮಾನಗಳನ್ನು ಕೊಟ್ಟಿದ್ದಾರೆ. ಆದರೆ ಹಾಗೆ ಬಂದಂಥ ಮಹಿಳೆಯರು ಅವರು ವಿದ್ಯಾವಂತರೋ ಅವಿದ್ಯಾವಂತರೋ ಅದು ಒಂದು ಕಡೆಗೆ ಇರಲಿ. But weaker sections are subjected to exploitation, they have been brought to light. ಅದರ ಬಗ್ಗೆ ನಾವು ಇವತ್ತು ಹೆಮ್ಮೆಪಡಬೇಕು. ಅಂದರೆ ಎಲ್ಲರೂ ನಾವು 33% ಕೊಡುತ್ತೇವೆ, 53% ಕೊಡುತ್ತೇವೆ ಎಂದು ಬೊಗಳೆ ಹೊಡೆಯುತ್ತಿದ್ದರು. ನಾವು 53 ಸಾವಿರವನ್ನೇ ಕೊಟ್ಟಿದ್ದೇವೆಂದು ನಮ್ಮ ಸಭೆಯಲ್ಲಿ ಮಾನ್ಯ ಘೋರ್ಪಡೆಯವರು ಓಪನ್ ಆಗಿ ಡಿಕ್ಲೇರ್ ಮಾಡಿದರು. ಇದು ಮಹಿಳೆಯರಿಗೆ ಕೊಟ್ಟಿರುವ ಗೌರವ ಸ್ಥಾನ ಎಂದು ನಾವು ಹೆಮ್ಮೆ ಪಡಬೇಕಾಗುತ್ತದೆ. ಇವತ್ತು ಹೆಚ್ಚು ಕಡಿಮೆ ಎಲ್ಲಾ ತಾಲ್ಲೂಕಿನಲ್ಲಿ 10-15 ಜನ ಮಹಿಳೆಯರು ಅಧ್ಯಕ್ಷಿಣಿಯಾಗಿದ್ದಾರೆ. ಇದು ಕೂಡ ಒಂದು ಹೆಮ್ಮೆಯ

ಸಾಧನೆ ಎನ್ನುವುದರಲ್ಲಿ ಎರಡು ಮಾತಿಲ್ಲ. ನಮ್ಮ ಜನಸಂಖ್ಯೆಯಲ್ಲಿ ಅರ್ಧಭಾಗದಷ್ಟು ಏನು ಮಹಿಳೆಯರಿದ್ದಾರೆ ಇವರಿಗೆ ಹೆಚ್ಚಿನ ಪುರಸ್ಕಾರ ಕೊಟ್ಟಿರತಕ್ಕಂಥಾದ್ದನ್ನು, ನಾನು ಈ ಸಂದರ್ಭದಲ್ಲಿ ನಮ್ಮ ಸರ್ಕಾರ ಮಾಡಿರುವ ಸಾಧನೆಯನ್ನು ಒಪ್ಪಿ ಇದನ್ನು ಇನ್ನು ಮುಂದೆ ಕೂಡ ಮಾಡಲಿ ಎನ್ನುವ ವಿಚಾರವನ್ನು ಹೇಳುತ್ತೇನೆ. ಹೆಣ್ಣು ಮಕ್ಕಳ ಬಗ್ಗೆ ನನ್ನದೇ ಆದ ಸಲಹೆ ಕೂಡ ಇದೆ. ಬೆಂಗಳೂರು ನಗರದಲ್ಲಿ ನಾನು ಇಲ್ಲಿ ಶಾಸಕನಾಗಿ ಬಂದಮೇಲೆ ಏನೋ ದೊಡ್ಡ ದೊಡ್ಡ ಮದುವೆಗಳಿಗೆ ಕರೆಯುತ್ತಾರೆ. ನಾವುಗಳು ಮದುವೆಗೆ ಹೋಗಿ ಚೆನ್ನಾಗಿ ಊಟ ಮಾಡಿ ಬರಬೇಡವೇ? ನಾನು ಈ ಮದುವೆಗೆ ಎಷ್ಟು ಖರ್ಚು ಮಾಡಿದ್ದಾರೆ ಎಂದು ಲೆಕ್ಕ ಹಾಕುವವನು. ಈ ದುಡ್ಡು ಎಲ್ಲಿಂದ ಬಂದಿದೆ ಇವರಿಗೆ. ಇವನೆಷ್ಟು ಅಕೌಂಟಬಲ್? ಇದನ್ನು ತಪ್ಪಿಸಲಿಕ್ಕೆ ಏನು ಮಾಡಬಹುದು ಎನ್ನುವ ಚಿಂತನೆ ನನ್ನಲ್ಲಿ ಹರಿಯುತ್ತದೆ. ಅದಕ್ಕೆ ನನ್ನದೇ ಆದ ಸಲಹೆ ಸರ್ಕಾರಕ್ಕೆ ಇದೆ. ದಯಮಾಡಿ ಯಾವ ಯಾವ ದೊಡ್ಡ ದೇವಸ್ಥಾನಗಳಿವೆ. ಎಲ್ಲೆಲ್ಲಿ ರಿಜಿಲಿಯಸ್ ಪೀಪಲ್ಸ್ ಇದ್ದಾರೆ, whether Christian, Muslims or anybody, you marry according to your religion but it should be registered compulsorily. ಅದು ಕಂಪಲ್‌ಸರಿಯಾಗಿ ರಿಜಿಸ್ಟ್ರೇಷನ್ ಮಾಡದಿದ್ದರೆ right to succession of property right to get all benefits of the Government ಎನ್ನುವ ಪದವನ್ನು ಇಂಟ್ರಡ್ಯೂಸ್ ಮಾಡಿ. We will verify your marriage conditions ಎನ್ನುವ ಬಗ್ಗೆ ತಾವು ಒಂದು ಕಾನೂನು ತರುವಂಥಾದ್ದನ್ನು ಮಾಡಿದರೆ ಬಹಳ ಒಳ್ಳೆಯದು ಎಂದು ಹೇಳುತ್ತೇನೆ. ಮತ್ತು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಯಾವುದೇ ಟೆಂಪಲ್‌ನಲ್ಲಿ ಮದುವೆ ಮಾಡಿಕೊಳ್ಳಲಿ. ನಮ್ಮ ಹೆಣ್ಣುಮಕ್ಕಳು ಹೋದಾಗ ಅಲ್ಲೊಬ್ಬ ಮ್ಯಾರೇಜ್ ಆಫೀಸರನ್ನು ತಾವು ಡೆಸಿಗ್ನೇಟ್ ಮಾಡಿ ಈಗ ಏನಾಗಿದೆ ಎಂದರೆ ಹಾರ ಹಾಕಿಸಿ ಫೋಟೋ ತೆಗೆಸಿಬಿಡುತ್ತಾರೆ. ಅಲ್ಲಿ ಅವರ ಫೋಟೋ ಇವರದಲ್ಲ, ಹಾರ ಅವರದಲ್ಲ ಎನ್ನುವ ಹಾಗೆ ಆಗಿ ಕೋರ್ಟಿನಲ್ಲಿ ಕಣೆ ರೀತಿಯಾಗುತ್ತದೆ. ನಾನು ವಕೀಲನಾಗಿ ಇದನ್ನು ಹೇಳುತ್ತಿದ್ದೇನೆ. Instead of that, you marry anywhere. ಚರ್ಚ್‌ನಲ್ಲಾದರೂ ಮಾಡಿ, ದೇವಸ್ಥಾನದಲ್ಲಾದರೂ ಮಾಡಿ ಪರವಾಗಿಲ್ಲ. ಅಲ್ಲೊಬ್ಬ ಮ್ಯಾರೇಜ್ ಆಫೀಸರನ್ನು ಡೆಸಿಗ್ನೇಟ್ ಮಾಡಿ. ಅವನು ಕೊಟ್ಟ ಸರ್ಟಿಫಿಕೇಟನ್ನು you accept it as finals they are husband and wife ಎನ್ನುವುದನ್ನು ಮಾಡಿ. ಇದರಿಂದ ಹೆಣ್ಣುಮಕ್ಕಳು ಬಹಳಷ್ಟು ಜನ ಬದುಕಲಿಕ್ಕೆ, ಜೀವನ ಮಾಡುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಸಲಹೆಯನ್ನು ನಾನು ಸರ್ಕಾರಕ್ಕೆ ಕೊಡುತ್ತಿದ್ದೇನೆ ಮತ್ತು ಕೊನೆಯದಾಗಿ ಒಂದು ವಿಚಾರವನ್ನು ತಮ್ಮ ಮುಂದಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈಗಾಗಲೇ ಖೊಟ್ಟಿ ಸರ್ಟಿಫಿಕೇಟುಗಳು ಬರುತ್ತಿವೆ. ಮತ್ತೆ ಇಲ್ಲಿಯೂ ಆ ರೀತಿ ಮಾಡಿದರೆ ವೈವಾಹಿಕ ಜೀವನದಲ್ಲೂ ಖೊಟ್ಟಿ ಸರ್ಟಿಫಿಕೇಟ್‌ಗಳು ಬಂದು ಅದರ ಪರಿಣಾಮವೇನಾಗಬಹುದು ಎಂದು ಯೋಚನೆ ಮಾಡಿ. ಈಗ ಕೊಡುವ ಸರ್ಟಿಫಿಕೇಟುಗಳು ಸರಿಯಾಗಲಿ. ಆ ನಂತರ ಮುಂದಿನ ಸರ್ಟಿಫಿಕೇಟುಗಳ ಬಗ್ಗೆ ವಿಚಾರ ಮಾಡೋಣ.

ಶ್ರೀ ಎ.ಎಸ್ ಗುರುಸ್ವಾಮಿ : ಮಾನ್ಯ ಮಿತ್ರರಲ್ಲಿ ನಾನು ಮನವಿ ಮಾಡುತ್ತೇನೆ. style

of living conditions anywhere, ಬೇರೆ ಕಡೆಯಲ್ಲಿ ಎಲ್ಲಾದರೂ ಒಮ್ಮೆ ಎಕ್ಸಾಮಿನ್ ಮಾಡಿ ನೋಡಿ. Now the system is ಮ್ಯಾರೇಜ್ ಮಾಡಿಕೊಳ್ಳುವುದಿಲ್ಲ. Right to companionship ಎಂದು ಒಂದು ಸಿಸ್ಟಂನ್ನು ಇಂಟ್ರಡ್ಯೂಸ್ ಮಾಡಿಕೊಂಡಿದ್ದಾರೆ. You need not marry but you can have companionship, and live like husband and wife, for various reasons. ನಾನು ಇದನ್ನು ಮಾಡಿ ಎಂದು ಹೇಳುವುದಿಲ್ಲ. ಆ ಕಂಡೀಷನ್‌ಗೆ ನಾವು ತಲುಪಿಬಿಟ್ಟಿದ್ದೇವೆ. ಆದ್ದರಿಂದ ನಮ್ಮ ಸ್ಟೈಲ್ ಏನಾಗಿದೆ, ಇದನ್ನು ಬದಲಾವಣೆ ಮಾಡುವುದಕ್ಕೆ ಹೆಣ್ಣುಮಕ್ಕಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ, ಅವರ ಕಣ್ಣೀರನ್ನು ಒರೆಸುವ ಬಗ್ಗೆ ನಾವು ಏನಾದರೂ ಯೋಚನೆ ಮಾಡುವ ದೃಷ್ಟಿಯಲ್ಲಿ ಈ ಒಂದು ಅಂಗವನ್ನು ಕೂಡ ನಾವು ಜ್ಞಾಪಕದಲ್ಲಿಟ್ಟು ಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತಿದ್ದೇನೆಯೇ ಹೊರತು ಜೀವನವನ್ನು ಅಪಮೌಲ್ಯ ಮಾಡಬೇಕು ಎನ್ನುವುದಲ್ಲ. Right to companionship, ಎಂದು ಇವತ್ತು ಇದೆ. It is allowed, ಅದು ನಮಗೆ ಬಿಟ್ಟಿದ್ದು. ಅದನ್ನು ಪರೀಕ್ಷೆ ಮಾಡುವುದಕ್ಕೆ ಬರುವುದಿಲ್ಲ. ಇನ್ನು ಮೂರು ಸಲಹೆಗಳನ್ನು ನಾನು ಸರ್ಕಾರಕ್ಕೆ ಕೊಡುತ್ತೇನೆ. ನಮ್ಮ ಚುನಾವಣಾ ಪದ್ಧತಿ ಏನು ನಡೆಯುತ್ತಿದೆ, ನಮ್ಮ ಸರ್ಕಾರವೇ ಗ್ರಾಮಪಂಚಾಯಿತಿ ಚುನಾವಣೆಯನ್ನು ಬಹಳ ಚೆನ್ನಾಗಿ ನಡೆಸಿದ್ದಾರೆ. ಬಹಳ ಶಾಂತಿಯುತವಾಗಿಯೂ ನಡೆದಿದೆ. ಮುಂದೆ ನಡೆಯುವ ಟಿಪಿ ಮತ್ತು ಜೆಡ್‌ಪಿ ಚುನಾವಣೆಯಲ್ಲಿ ಇದರ ಬಗ್ಗೆ ಬಹಳ ಡ್ರಾಸ್ಟಿಕ್ ಛೇಂಜಸ್ ಮಾಡುವುದಕ್ಕೆ ಸರ್ಕಾರಕ್ಕೆ ಪವರ್ ಇದೆ. ಅದರ ಬಗ್ಗೆ ಸಂಬಂಧಪಟ್ಟ ಹಿರಿಯ ನಾಯಕರುಗಳು ಸ್ವಲ್ಪ ಚಿಂತನೆಯನ್ನು ಹರಿಸಬೇಕು ಎಂದು ಹೇಳುತ್ತೇನೆ. ಎಲ್ಲಾ ಕಡೆ ಐಡಿ ಕಾರ್ಡುಗಳನ್ನು ಕೊಟ್ಟಿದ್ದಾರೆ. ID cards are not being used. ಯಾರು ಐಡಿ ಕಾರ್ಡುಗಳನ್ನು ತೆಗೆದುಕೊಂಡು ಅದನ್ನು ಯೂಸ್ ಮಾಡುವುದಿಲ್ಲ, ಅವರಿಗೆ ರೇಷನ್ ಕಾರ್ಡನ್ನು ವೆರಿಫಿಕೇಷನ್ ಮಾಡುತ್ತೇವೆ ಎಂದು ತಾವು ಒಂದು ಮಾತನ್ನು ಹೇಳಿದರೆ ಬಹುಶಃ ಎಲ್ಲರೂ ಕೂಡ ಓಟು ಮಾಡುತ್ತಾರೆ. ನಾನೇನೂ ಅವರು ಓಟ್ ಕೊಡದಿದ್ದರೆ ಅವರಿಗೆ ಶಿಕ್ಷೆ ಕೊಡಿ ಎಂದು ಹೇಳುವುದಿಲ್ಲ. ಓಟನ್ನು ಕೊಡದಿದ್ದರೆ ಅವರನ್ನು ಜೈಲಿಗೆ ಕಳುಹಿಸಿ ಎಂದು ಹೇಳುವವನಲ್ಲ. But those who do not use ID Cards those who do not vote, their residential qualification will be verified. ಎಂದು ಮಾಡಿ. ಆಗ ಎಲ್ಲರೂ ಕೂಡ ಓಟು ಮಾಡುತ್ತಾರೆ. ಇದರಿಂದ ಲಕ್ಷಾಂತರ ರೂಪಾಯಿಗಳು ಕ್ಯಾಂಡಿಡೇಟ್‌ಗೆ ಉಳಿಯುತ್ತದೆ. ಉತ್ತಮವಾದ ಪ್ರತಿನಿಧಿಗಳು ಗೆದ್ದು ಬರುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿ ಮಾಡಿದರೆ ಮುಂದಿನ ಜಿಲ್ಲಾ ಪಂಚಾಯಿತಿಯಲ್ಲಿ ಎಲ್ಲರೂ ಮತದಾನ ಮಾಡುವುದಕ್ಕೆ ಅವಕಾಶ ಸಿಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಸರ್ಕಾರದ ಒಂದು ಮಟ್ಟದಲ್ಲಿ ಕೂಡ ಇವೊತ್ತು ಹೆಚ್ಚಿನ ರೀತಿಯಲ್ಲಿ ಚುರುಕಾಗಿ ಕೆಲಸ ಮಾಡುವುದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮುನ್ನುಗ್ಗಿದ್ದಾರೆ. ಈ ರೀತಿ ಮುನ್ನುಗ್ಗಿರುವಾಗ ಅವರಿಗೆ ನನ್ನ ಒಂದೆರಡು ಕಿವಿಮಾತುಗಳನ್ನು ಸಲಹೆ ರೂಪದಲ್ಲಿ ಈ ಸದನದ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಈ ಮಾತು ಟೀಕಿಸುವಂಥದ್ದಾಗಲೀ ಅಥವಾ ವಿರೋಧಿಸುವಂಥದ್ದಾಗಲೀ ಅಲ್ಲ. ಏನೆಂದರೆ, ಹಿಂದಿನ ಕಾಲದಲ್ಲಿ ವಾರದಲ್ಲಿ ಒಂದರೆಡು ದಿವಸಗಳನ್ನು

ಫೈಲ್ ಕ್ಲಿಯರೆನ್ಸ್ ಮಾಡುವುದಕ್ಕೆಂದು 'ಕ್ಲಿಯರೆನ್ಸ್ ಡೇ' ಎಂದು ಇಡುತ್ತಿದ್ದರು. ತಾವು ದಯಮಾಡಿ ಅದನ್ನು ರಿಪೀಟ್ ಮಾಡಬೇಕು. ಒಂದು ತಿಂಗಳಿನಲ್ಲಿ ಒಂದೆರಡು ದಿವಸಗಳನ್ನಾದರೂ ಫೈಲ್ ಕ್ಲಿಯರೆನ್ಸ್ ಡೇ ಎಂದು ಮೀಸಲಿಡುವ ವ್ಯವಸ್ಥೆಯಾಗಬೇಕು to clear all pending papers in each office. ಫೈಲ್ ಮೂವ್‌ಮೆಂಟ್ ಇಂತಿಷ್ಟೇ ದಿವಸಗಳಲ್ಲಿ ಆಗಬೇಕೆಂಬ ಬಗ್ಗೆ ವಿಧಾನಸೌಧದಲ್ಲಿ ಒಂದು ಸುತ್ತೋಲೆ ಹೊರಡಿಸಲಾಗಿದೆ. ಈಗ ಸುತ್ತೋಲೆಯನ್ನು ಎಷ್ಟು ಜನ ಅಧಿಕಾರಿಗಳು ಪಾಲಿಸುತ್ತಿದ್ದಾರೆ? ಫೈಲ್ ಕ್ಲಿಯರೆನ್ಸ್‌ಗೋಸ್ಕರ ಇವೊತ್ತು ಬಹಳಷ್ಟು ಜನರು ಕಛೇರಿಗೆ ತಿರುಗಾಡುತ್ತಿದ್ದಾರೆ. ಆದುದರಿಂದ, ಫೈಲ್ ಕ್ಲಿಯರೆನ್ಸ್ ಡೇ ಪದ್ಧತಿ ಜಾರಿಗೆ ಬರಬೇಕು. ಮತ್ತು ಫೈಲ್ ಕ್ಲಿಯರೆನ್ಸ್ ಮುಗಿಯಬೇಕು. ಆಕಸ್ಮಾತ್ ಮುಗಿಯಲಿಲ್ಲವೆಂದರೆ the man who considers that file, ಯಾರಿಗೆ ಅಫೆಕ್ಟ್ ಆಗಿರುತ್ತದೋ ಆತ ದುಡ್ಡು ಕೊಟ್ಟಿರುತ್ತಾನೆ. ಆದಕಾರಣ, ಈ ಪದ್ಧತಿಯನ್ನು ನಮ್ಮ ಸರ್ಕಾರ ಜಾರಿಗೆ ತರುತ್ತದೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೊಂದು ಘಟನೆ ನೆನಪಿಗೆ ಬರುತ್ತದೆ. ಪ್ರತಿ ದಿವಸ ರಾತ್ರಿ 9.00 ಗಂಟೆಗೆ ಬೆಂಗಳೂರು ನಗರದಿಂದ ದೊಡ್ಡ ದೊಡ್ಡ ಪಟ್ಟಣಗಳಿಗೆ ಹೈಟೆಕ್ ಬಸ್ಸುಗಳು ಹೋಗುತ್ತವೆ. ಆ ಹೈಟೆಕ್ ಬಸ್ಸುಗಳಿಗೆ ಎಷ್ಟು ಬೆಲೆಯಾಗುತ್ತದೆಂದು ಒಮ್ಮೆ ಅದರ ಡ್ರೈವರ್‌ನನ್ನು ಕೇಳಿದಾಗ 20 ಲಕ್ಷ ರೂಪಾಯಿಗಳಾಗುತ್ತದೆಂದನು. ಇಪ್ಪತ್ತು ಲಕ್ಷ ರೂಪಾಯಿಗಳ ಹೈಟೆಕ್ ಬಸ್ಸನ್ನು ಅದರ ಮಾಲೀಕ ಇಷ್ಟೊಂದು ಧೈರ್ಯವಾಗಿ ಒಬ್ಬ ಡ್ರೈವರ್ ಕೈಯಲ್ಲಿ ಬೇರೆ ಬೇರೆ ಊರುಗಳಿಗೆ ಹೇಗೆ ಕೊಟ್ಟು ಕಳುಹಿಸುತ್ತಾನೆ? ಎಂಬುದರ ಬಗ್ಗೆ ವಿಚಾರ ಮಾಡಿ ಕೇಳಿದಾಗ ಆತ ಮಾರ್ಮಿಕವಾಗಿ ಉತ್ತರಿಸಿದ. ಆತನ ಸಂಬಳ ನೂರು ರೂಪಾಯಿಗಳಾದರೆ, ತೆಗೆದುಕೊಳ್ಳುವ ಟಿ.ಎ. 500 ರೂಪಾಯಿಗಳು. ಆತ ತನ್ನ ಕೆಲಸವನ್ನು ಸರಿಯಾಗಿ ನಿರ್ವಹಿಸಿದರೆ 500 ರೂಪಾಯಿಗಳು, ಇಲ್ಲದಿದ್ದರೆ ಕೇವಲ ನೂರು ರೂಪಾಯಿಗಳು ಮಾತ್ರ ಸಿಗುತ್ತದೆ. Look at the system that prevails ಇವೊತ್ತು ಆತ ಇಪ್ಪತ್ತು ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ಹೈಟೆಕ್ ಬಸ್ಸನ್ನು ಸೇಫ್ಟಿಯಾಗಿ ಬೇರೆ ಊರಿಗೆ ತೆಗೆದುಕೊಂಡು ಹೋಗಿ ಅಷ್ಟೇ ಸೇಫ್ಟಿಯಾಗಿ ತೆಗೆದುಕೊಂಡು ಬರುತ್ತಾನೆ. T.A. is Rs. 500, to make him more efficient and honest and to use the vehicle. ಆ ಸಿಸ್ಟಂ ಅನ್ನು ಕೂಡ ತರುವುದರ ಬಗ್ಗೆ ನಮ್ಮ ಸರ್ಕಾರದವರು ಪರಿಶೀಲನೆ ಮಾಡುತ್ತಾರೆಂಬ ನಂಬಿಕೆಯಿಟ್ಟುಕೊಂಡು ನಾನು ಮಾತನಾಡಲು ಇನ್ನು ಹೆಚ್ಚು ಸಮಯ ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ನನ್ನ ಇಷ್ಟು ವಿಚಾರ, ಚಿಂತನೆಗಳನ್ನು ಈ ಸದನದ ಮುಂದಿಟ್ಟು ವಿರೋಧ ಪಕ್ಷದ ಸದಸ್ಯ ಮಿತ್ರರು ಸದನದಲ್ಲಿ ಇದ್ದಿದ್ದರೆ ಇನ್ನು ಬಹಳಷ್ಟು ವಿಚಾರಗಳನ್ನು ಹೇಳಬೇಕೆಂದಿದ್ದೆ. ಆದರೆ, ಅವರ್‍ಯಾರೂ ಇಲ್ಲದಿರುವ ಕಾರಣ ನನ್ನ ಮಾತುಗಳನ್ನು ಬರೀ ಕುರ್ಚಿಗಳೇ ಕೇಳುವಂಥ ಸ್ಥಿತಿ ಬಂದಿದ್ದು, ಕೊನೇ ಸಾಲಿನ ಬೆಂಚಿನಲ್ಲಿ ಕುಳಿತಿರುವ ಈ ಗುರುಸ್ವಾಮಿಗೆ ಮುಂದಿನ ಸಲವಾದರೂ ಹೆಸರನ್ನು ಬದಲಾಯಿಸುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಾ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸಲು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

ಉಪಾಧ್ಯಕ್ಷರು : ಇಂದಿನ ಸದನದ ಕಲಾಪ ಈಗ ಮುಕ್ತಾಯಗೊಂಡು ನಾಳೆ ಬೆಳಿಗ್ಗೆ ಪುನಃ 9.30 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ ಐದು ಗಂಟೆ ಇಪ್ಪತ್ತುಮೂರು ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 24ನೇ ಮಾರ್ಚಿ ಮಾಹೆ 2000ರ ಶುಕ್ರವಾರದಂದು ಬೆಳಿಗ್ಗೆ 9.30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು
ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).